# ಕಾಮಗೇತಿ ವಂಶಜರ ಚರಿತ್ರೆ

## ನನ್ನ ಮಾತು

ಕರ್ನಾಟಕದ ಬುಡಕಟ್ಟುಗಳ ಪೈಕಿ ಬೇಡಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ ಹಿರಿದಾದುದು. ಈ ಬಗ್ಗೆ ಅನುಮಾನವೇ ಬೇಡ. ಚರಿತ್ರೆಯ ಪುಟಗಳಲ್ಲಿ ದಾಖಲಾಗಿರುವ ಇವರ ಸಾಧನೆಗಳು ಅಜರಾಮರ. ಹಾಗೆಯೇ ಸಾಂಸ್ಕೃತಿಕ ಕ್ಷೇತ್ರದಲ್ಲಿಯೇ ಇವರು ಗಣನೀಯ ಸಾಧನೆ ಮಾಡಿರುವುದು ಶ್ಲಾಘನೀಯ. ಬೇಡ – ನಾಯಕ ಬುಡಕಟ್ಟಿನಲ್ಲಿ ಕಾಮಗೇತಲಾರು ಗೋತ್ರದವರು ಈ ನಾಡಿಗಾಗಿ ದುಡಿದು ತನು – ಮನ – ಧನ ಅರ್ಪಿಸಿ ಹುತಾತ್ಮರಾಗಿರುವುದು ಇತಿಹಾಸ. ಇಂಥವರ ಬಗ್ಗೆ ಸರಿಯಾಗಿ ಎಲ್ಲೂ ದಾಖಲಿಸಲಾಗಿಲ್ಲ. ದೊರೆತ ಆಕರಗಳನ್ನಷ್ಟೇ ಬಳಸಿಕೊಂಡು ಇಲ್ಲಿ ಸಂಕ್ಷಿಪ್ತವಾಗಿ ಅವರ ಚರಿತ್ರೆ ಬುಡಕಟ್ಟು ಸಂಸ್ಕೃತಿ ಬಗ್ಗೆ ವಿಶ್ಲೇಷಿಸಲಾಗಿದೆ.

ಈ ಪ್ರಯತ್ನಕ್ಕೆ ಅನೇಕ ಕಾರಣಗಳಿವೆ. ಕಳೆದ ಒಂದು ದಶಕದಿಂದ ನಾನು ಬೇಟೆ ಮತ್ತು ಬೇಡರನ್ನು ಕುರಿತು ಪಿ.ಎಚ್.ಡಿ ಅಧ್ಯಯನ ಮಾಡುವಾಗ ಕಾಮಗೇತಿಯರ ಬಗ್ಗೆ ಮಾಹಿತಿ ಸಂಗ್ರಹಿಸಿದ್ದೆನು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಿರಿಯರು, ಹಿತೈಷಿಗಳು, ಸ್ನೇಹಿತರು ಈ ಬಗ್ಗೆ ಚರ್ಚಿಸಿ ನನಗೆ ಪ್ರೋತ್ಸಾಹಿಸುತ್ತಿದ್ದರು. ಹಾಗೆ ಪ್ರೋತ್ಸಾಹಿಸಿದವರಲ್ಲಿ ಚಿತ್ರದುರ್ಗದ ದಿ.ಟಿ.ಎನ್. ಗಂಡುಗಲಿ, ಕಾಮಗೇತಿ ವಂಶಸ್ಥರು, ವಾಣಿಜ್ಯ ತೆರಿಗೆ ಆಯುಕ್ತರಾದ ಕೆ. ಲಕ್ಷ್ಮಣಸ್ವಾಮಿ, ಕಾಮಗೇತನಹಳ್ಳಿ ಪೂಜಾರಿ ನಿಜಲಿಂಗಪ್ಪ, ಪೂಜಾರಹಳ್ಳಿ ಬಸಣ್ಣ ಬಸವಣ್ಣನ ಪೂಜಾರಿಗಳು, ದಾವಣಗೆರೆ ಅನುಭವ ಮಂಟಪದ ನಿವೃತ್ತ ಪ್ರಾಂಶುಪಾಲರಾದ ಎ. ಲಿಂಗಪ್ಪನವರು ಕಾಮಗೇತಿಗಳ ಪುಸ್ತಕವನ್ನು ಬರೆಯಲು ಬೆಂಬಲ ಕೊಟ್ಟಿರುವರು

ಪ್ರಸ್ತುತ ಕಿರು ಕೃತಿ ಕಾಮಗೇತಿಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ಒದಗಿಸಿದೆ. ಈ ವರೆಗೆ ಕಾಮಗೇತಿಗಳ ಚರಿತ್ರೆ ಮತ್ತು ಸಂಸ್ಕೃತಿ ಕುರಿತಾದ ಸಮಗ್ರ ಅಧ್ಯಯನಗಳು ನಡೆದಿಲ್ಲ. ಈ ಮೊದಲು ಬಿ.ಎಸ್. ಶ್ರೀನಿವಾಸ ನಾಯಕರು ಚಿತ್ರದುರ್ಗದ ಕಾಮಗೇತಿ ಅರಸರ ಬಗ್ಗೆ ಸಂಶೋಧನಾ ಕೃತಿ ಹೊರತಂದಿದ್ದಾರೆ. ಅದೇ ರೀತಿ ಪ್ರೊ. ಲಕ್ಷ್ಮಣ್ ತೆಲಗಾವಿಯವರು ಚಿತ್ರದುರ್ಗ ಕಾಮಗೇತಿ ಅರಸರು ಎಂಬ ಪುಸ್ತಕವನ್ನು ಪ್ರಕಟಿಸಲಿದ್ದಾರೆ. ಡಾ. ಬಿ. ರಾಜಶೇಖರಪ್ಪನವರು ಕಾಮಗೇತಿ ಅರಸರು ಮತ್ತು ಆ ಮನೆತನದ ಬಗ್ಗೆ ಕೃಷಿ ನಡೆಸಿದ್ದಾರೆ. ಈ ಹಿಂದೆ ಪ್ರೊ. ಎಂ.ವಿ ಚಿತ್ರಲಿಂಗಯ್ಯ, ಪಂಡಿತ ರೇವಣ್ಣಶಾಸ್ತ್ರಿಗಳು ಮೊದಲಾದವರು ಪರೋಕ್ಷವಾದ ಅಧ್ಯಯನಗಳನ್ನು ಕೈಗೊಂಡಿದ್ದು ಗಮನಾರ್ಹ.

ಈ ಅಧ್ಯಯನಕ್ಕೆಂದು ಊರೂರು ಅಲೆಯುವಾಗ ಅನೇಕ ಮಹನೀಯರು ಮಾಹಿತಿ ಕೊಟ್ಟು ಸಹಕರಿಸಿರುವುದಕ್ಕೆ ಋಣಿಯಾಗಿರುವೆನು. ಚಿತ್ರದುರ್ಗ, ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ನೆಲಸಿರುವ ಅಪಾರ ಸಹೋದರ ಬಂಧುಗಳನ್ನು ಇಲ್ಲಿ ಸ್ಮರಿಸಿಕೊಳ್ಳುವೆನು. ಇಂಥ ಕೆಲಸಕ್ಕೆ ಪ್ರೋತ್ಸಾಹಿಸುವ ಹಿರಿಯರಾದ ತಿಪ್ಪೇಸ್ವಾಮಿ ಮಾಜಿ ಸಚಿವರು, ಚಳ್ಳಕೆರೆ. ನಿವೃತ್ತ ಮುಖ್ಯ ನ್ಯಾಯಾಧೀಶರು ಹಾಗೂ ಚಿತ್ರದುರ್ಗ ಲೋಕಸಭಾ ಸದಸ್ಯರಾದ ಎನ್.ವೈ. ಹನುಮಂತಪ್ಪ, ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಎನ್.ವೈ. ಗೋಪಾಲಕೃಷ್ಣ, ಎನ್.ಟಿ.ಬೊಮ್ಮಣ್ಣ, ಮಾಜಿ ಶಾಸಕರು, ಕೂಡ್ಲಿಗಿ. ತೆಕ್ಕಲಕೋಟೆ ಎಂ.ಎಸ್. ಸೋಮಲಿಂಗಪ್ಪ ಶಾಸಕರು ಸಿರುಗುಪ್ಪ ಕ್ಷೇತ್ರ. ಬಿ. ಶ್ರೀರಾಮಲು ಶಾಸಕರು ಬಳ್ಳಾರಿ, ಎ.ವೆಂಕಟೇಶನಾಯಕ ಸಂಸದರು ರಾಯಚೂರು ಕ್ಷೇತ್ರ, ರಾಜಾಅಮರೇಶ್ವರ ನಾಯಕ ಮಾಜಿಸಚಿವರು ಗುಂತಗೋಳ, ವಿ.ಎಸ್. ಉಗ್ರಪ್ಪ ಎಂ.ಎಲ್.ಸಿ., ಡಿ.ಎಂ. ಸಾಲಿ, ಯೋಜನಾ ಮಂಡಳಿ ಮಾಜಿ ಉಪಾಧ್ಯಕ್ಷರು, ಮಾತೃಶ್ರೀ ಡಾ. ಕಮಲಾಹಂಪನಾ, ದಿ.ಪ್ರೊ.ಸಿ.ಜಿ. ಕೃಷ್ಣಸ್ವಾಮಿ, ಡಾ.ತೇಜಸ್ವಿಕಟ್ಟೀಮನಿ, ಪ್ರೊ. ಸುಕನ್ಯಾಮಾರುತಿ, ಡಾ. ರಂಗರಾಜು ವನದುರ್ಗ, ಡಾ. ಆರ್. ರಾಜಣ್ಣ, ಡಾ. ಹನುಮನಾಯಕ, ಕನ್ನಡ ವಿಶ್ವವಿದ್ಯಾಲಯದಲ್ಲಿನ ಸಂಶೋಧನೆಗೆ ಪ್ರೇರಣೆ ನೀಡಿದ ಗುರುಗಳಾದ ಪ್ರೊ. ಲಕ್ಷ್ಮಣ್ ತೆಲಗಾವಿ, ಅಧ್ಯಯನ ಮಾಡಲು ಅವಕಾಶ ಕಲ್ಪಿಸಿದ ಡಾ. ಚಂದ್ರಶೇಖರ ಕಂಬಾರ, ಸಂಶೋಧನೆಯಲ್ಲಿ ಸದಾ ಕ್ರಿಯಾಶೀಲತೆಯನ್ನು, ಸ್ಫೂರ್ತಿಯನ್ನು ತುಂಬುತ್ತಿರುವ ಡಾ.ಎಂ.ಎಂ.ಕಲಬುರ್ಗಿ, ಅಪಾರ ಓದುವಿಕೆ, ಶೈಕ್ಷಣಿಕ ಬೆಳವಣಿಗೆಗೆ ಪ್ರೊತ್ಸಾಹಕೊಟ್ಟ ಡಾ. ಎಚ್.ಜೆ.

ಲಕ್ಕಪ್ಪಗೌಡರನ್ನು ವಿಶೇಷವಾಗಿ ಕೃತಜ್ಞತೆಗಳೊಂದಿಗೆ ಸ್ಮರಿಸಿಕೊಳ್ಳುತ್ತೇನೆ. ಇಂದಿನ ಕುಲಪತಿಯವರಾದ ಡಾ. ಬಿ.ಎ. ವಿವೇಕ ರೈ ಅವರು ಮುನ್ನುಡಿ ಬರೆದುಕೊಟ್ಟಿದ್ದಾರೆ. ಅವರಿಗೆ ತುಂಬು ಹೃದಯದ ಕೃತಜ್ಞತೆಗಳು.

ನನ್ನ ಸಂಶೋಧನೆಗೆ ಪ್ರೋತ್ಸಾಹ ನೀಡುತ್ತಿರುವ ವಾಲ್ಮೀಕಿ ಸಮಾಜದ ಬಂಧುಗಳಿಗೆ, ಶ್ರೀ ಶ್ರೀ ಶ್ರೀ ಪುಣ್ಯಾನಂದಪುರಿ ಸ್ವಾಮಿ ಅವರು, ಸಹನೆಯಿಂದ ನನ್ನ ಬರವಣಿಗೆಯನ್ನು ಗುರುತಿಸಿದ್ದಾರೆ. ಈ ಎಲ್ಲಾ ಸಂಶೋಧನಾ ಚಟುವಟಿಕೆಗಳನ್ನು ತೊಡಗಿಸಿಕೊಂಡಿರುವುದಕ್ಕೆ ಸದಾ ಉತ್ತೇಜಿಸಿದ ದೊಡ್ಡಪ್ಪನವರಾದ ಪೂಜಾರಿ ದೊಡ್ಡ ಪಾಲಯ್ಯ, ಅಪ್ಪ ಪೂಜಾರಿ ಸಣ್ಣ ಪಾಲಯ್ಯ ಅಮ್ಮ ತೋಟದ ಚೆನ್ನಮ್ಮ, ಮಾವ ಟಿ.ಎಸ್. ಓಬಯ್ಯ, ಅಕ್ಕಂದಿರಾದ ಶ್ರೀಮತಿ ಓಬಮ್ಮ, ಶ್ರೀಮತಿ ಪಾಲಾಕ್ಷಮ್ಮ, ಶ್ರೀಮತಿ ಏಕಾಂತಮ್ಮನವರನ್ನು ಮತ್ತು ಅವರ ಮಕ್ಕಳನ್ನು ಇಲ್ಲಿ ನೆನೆಯುವೆನು. ನನ್ನ ಪ್ರೀತಿಯ ಧರ್ಮಪತ್ನಿ ಶ್ರೀಮತಿ ಟಿ.ಎಸ್. ಪೂರ್ಣಿಮಾ ಮತ್ತು ಮಕ್ಕಳಾದ ಅಶೋಕ ವಿ. ಗಾದರಿ, ರೋಹಿತ್ ವಿ.ಭರತ್ ಮತ್ತು ಸುಕಿ ಧರ್ಮಪಾಲ ನನ್ನ ನೋವುಗಳನ್ನು, ದುಃಖಗಳನ್ನು ಮರೆಸಲು ಅವರ ನಗು ಹಂಚಿಕೊಂಡಿದ್ದಾರೆ. ಹಾಗೆಯೆ ತನ್ನೆಲ್ಲ ತ್ಯಾಗಕ್ಕೂ ಸಿದ್ಧನಾದ ನನ್ನ ಆತ್ಮೀಯ ಗೆಳೆಯ ಎಚ್.ಎ. ವಿಶ್ವನಾಥ ಬೋಸೇದೇವರಹಟ್ಟಿ, ವಿಶ್ವವಿದ್ಯಾಲಯದ ಸಹೋದ್ಯೋಗಿ ಮಿತ್ರರಾದ ಡಾ. ಟಿ.ಪಿ. ವಿಜಯ್, ಡಾ. ಸಿ.ಆರ್. ಗೋವಿಂದರಾಜು, ಡಾ. ಮೋಹನ್‌ಕೃಷ್ಣರೈ, ಡಾ. ಚೆನ್ನಸ್ವಾಮಿ ಸೋಸಲೆ, ಗಾದಿಲಿಂಗ, ಗಂಡಿ ಬೋರಯ್ಯ, ಚಿದಂಬರ, ಮಾಳಿಗ ವಿಶ್ವನಾಥ. ಎ.ಎಸ್.ಐ. ಕೃಷ್ಣಪ್ಪ ಚಿತ್ರದುರ್ಗ, ಎನ್.ಟಿ. ದಾಸಪ್ಪ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಬಿ.ಎಂ. ರಂಗಣ್ಣ, ಕೆ.ಸಿ. ನಾಗರಾಜ, ಟಿ.ಜಿ. ಪಾಪಣ್ಣ ವಾಲ್ಮೀಕಿ ಮಹಾಸಂಘ, ಬೆಂಗಳೂರು ಅವರಿಗೆ, ಬಳ್ಳಾರಿ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ನಾಯಕ ಬುಡಕಟ್ಟಿನ ಪ್ರತಿನಿಧಿಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳು.

**ಡಾ. ವಿರೂಪಾಕ್ಷಿ ಪೂಜಾರಹಳ್ಳಿ**

# ಅನುಬಂಧಗಳು

**೧. ಮಾಹಿತಿ ಕೊಟ್ಟವರು**

೧. ಮಾರುತಿ ಎಸ್. ಕಾಮಗೇತಿ, ಅಧ್ಯಾಪಕರು, ಸಹ್ಯಾದ್ರಿ ಕಾಲೇಜು, ಶಿವಮೊಗ್ಗ. ೨. ಡಾ.ಎಸ್.ಕೆ.ನರಸಿಂಹಮೂರ್ತಿ, ಗಣಿತಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಗಂಜಿಗಟ್ಟೆ, ಹೊಳಲ್ಕೆರೆ – ತಾ ಚಿತ್ರದುರ್ಗ ಜಿಲ್ಲೆ. ೩. ಪೂಜಾರಿ ನಿಜಲಿಂಗಪ್ಪ, ಕಾಮಗೇತನಹಳ್ಳಿ, ಜಗಳೂರು ತಾ|| ೪. ನಾಯಕರು ೧೨ ಪೆಟ್ಟಿಗೆ ದೇವರುಗಳೊಂದಿಗೆ ಕಮಲಾಪುರದಿಂದ ಹೊರಟು ತಮ್ಮ ತಮ್ಮ ಕುಟುಂಬಗಳೊಂದಿಗೆ ಅಲ್ಲಲ್ಲಿ ತಂಗಿದರು. ಕಾಮಗೇತಲಾರು ಸಹಾ ಈಗಿರುವ ಕಾಮಗೇತನಹಳ್ಳಿಗೆ ಬಂದು ನೆಲೆಸಿದ್ದರು. ಇವರಲ್ಲಿ ಓಬಯ್ಯನಾಯಕನನ್ನು ಯರಮಂಚಿ ನಾಯಕದೊರೆ ಮ್ಯಾಸಮಂಡಲ ಅಗಲುವುದಕ್ಕೆ ಕಾರಣನಾಗುತ್ತಾನೆ. ಈಗಿನ ಕುದಾಪುರ ಚಿಂತಗುಟ್ಲ ಬೋರೇದೇವರೇ ಅಂದು ತೆರೆಮರಗಳನ್ನು ಕಡಿದ ಸ್ಥಳ. ಮ್ಯಾಸಮಂಡಳ ಅಂದಿನಿಂದ ಎರಡು ಪಂಗಡಗಳಾದವು. ಯರಮಂಚಿನಾಯಕ ತಡವಾಗಿ ಬಂದುದರಿಂದ ದೊರೆ ಸ್ಥಾನಕ್ಕೆ ಅಪಚಾರ ಬಗೆದು ಕಾರ್ಯಕ್ರಮ ಮುಗಿಸಿದ್ದರು. ರೊಚ್ಚಿಗೆದ್ದ ನಾಯಕ ತನ್ನ ಮಗನನ್ನೆ ಬಲಿಕೊಟ್ಟು ಜಾತಿ ಇಲ್ಲದವರಿಗೆ ಜಾತಿಯನ್ನು ಕೊಟ್ಟು ತನ್ನ ಅಭಿವೃದ್ಧಿಯನ್ನು ಮಾಡಿಕೊಂಡ. ಇಂದಿಗೂ ಕುದಾಪುರದ ಬೋರೆದೇವರಿಗೆ ಎಲ್ಲರೂ ಕೈ ಮುಗಿದರೆ, ಯರಮಂಚಿ ನಾಯಕನವರು ಬರುವುದಿಲ್ಲ. ನಲಗೇತಿ ಗೋತ್ರದವರು ಸಹಾ ದೇವಾಲಯದ ಹಿಂದಕ್ಕೆ ಬಂದು ಕೈಮುಗಿಯುತ್ತಾರೆ. ೫. ಸಿ. ಓಬಣ್ಣ, ವ್ಯವಸಾಯ, ಸಂಗೀತ ಕಲಾವಿದರು, ೬೨ವರ್ಷ, ಕಾಮಗೇತಲರು, ಮ್ಯಾಸನಾಯಕರು, ಗುಂತಕೋಲಮ್ಮನಹಳ್ಳಿ, ಚಳ್ಳಕೆರೆ – ತಾ|| ೬. ಎಸ್.ಬಿ. ತಿಪ್ಪನಾಯಕ, ನಿವೃತ್ತ ಶಿಕ್ಷಕರು, ಕಾನಕಟ್ಟೆ, ಜಗಳೂರು – ತಾ|| ೭. ಚಿದಾನಂದ ತಂದೆ ಮಾಸಿಲು ಪಾಲಯ್ಯ, ಕಾಮಗೇತಲಾರು, ಕಮಲಾಪುರ, ಹೊಸಪೇಟೆ – ತಾ|| ಬಳ್ಳಾರಿ ಜಿಲ್ಲೆ. ೮. ಆರ್.ಕೆ.ಸಿದ್ದಲಿಂಗನಾಯಕ ತಂದೆ ಕಸ್ತೂರಿ ರಂಗಪ್ಪನಾಯಕ, ೫೯ ವರ್ಷ, ಕಾಮಗೇತಲಾರು ಕೋರ್ಟ್ ಅಮೀನ್ ನಿವೃತ್ತ ಹೊಸದುರ್ಗ ಪಾಳೆಗಾರ ವಂಶಸ್ಥರು, ನಾಯಕನಹಟ್ಟಿ.

**೨. ಅಭ್ಯಾಸ ಮಾಡಿದ ಗ್ರಂಥಗಳು**

೧. ಅಕ್ಕಮಹಾದೇವಿ (ಅನು):೧೯೮೪, ಬುಡಕಟ್ಟು ನ್ಯಾಯ (ವಿ.ರಾಘವಯ್ಯ), ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೨. ಈಶ್ವರಪ್ಪ ಎಂ.ಜಿ : ೧೯೮೨, ಮ್ಯಾಸಬೇಡರು, ಐಬಿಹಚ್ ಪ್ರಕಾಶನ, ಬೆಂಗಳೂರು. ೩. ಕರಿಶೆಟ್ಟಿ ರುದ್ರಪ್ಪ : ೧೯೯೫, ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೪. ಕೃಷ್ಣಮೂರ್ತಿ ಹನೂರು : ೧೯೯೩, ಮ್ಯಾಸಬೇಡರ ಸಂಸ್ಕೃತಿ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೫. ಪಂಡಿತ ರೇವಣ್ಣಶಾಸ್ತ್ರಿ : ೧೯೫೯, ವಾಲ್ಮೀಕರ ಪುರಾಣವು! ದ್ಯಾಮವ್ವನಹಳ್ಳಿ, ಜಗಳೂರು ತಾಲೂಕು. ೬. ಪುಟ್ಟಣ್ಣ ಎಂ.ಎಸ್. : ೧೯೯೭, ಚಿತ್ರದುರ್ಗದ ಪಾಳಯಗಾರರು (ಮರುಮುದ್ರಣ), ಮದಕರಿ ಪ್ರಕಾಶನ, ಚಿತ್ರದುರ್ಗ. ೭. ರಾಜನರಾಜಣ್ಣ : ೧೯೮೨, ನಾಯಕ ಜನಾಂಗದ ಇತಿಹಾಸ, ಚಳ್ಳಕೆರೆ ೮. ವಿರೂಪಾಕ್ಷಿ ಪೂಜಾರಹಳ್ಳಿ : ೧೯೯೯, ಗಾದರಿಪಾಲನಾಯಕ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೯. ವಿರೂಪಾಕ್ಷಿ ಪೂಜಾರಹಳ್ಳಿ : ೨೦೦೨, ಅಕ್ಕಮ್ಮನ ಆಚರಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೦. ವಿರೂಪಾಕ್ಷಿ ಪೂಜಾರಹಳ್ಳಿ : ೨೦೦೨, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೧. ವೀಣಾ ಎಂ.ಪಿ. : ೨೦೦೦, ಮನೆ, ಸಮಾಜ ಮತ್ತು ಸಂಸ್ಕೃತಿ (ಮ್ಯಾಸನಾಯಕರು ಹಾಗೂ ಊರನಾಯಕರ ಅಧ್ಯಯನ) ನೆಲಮನೆ ಪ್ರಕಾಶನ, ಶ್ರೀರಂಗಪಟ್ಟಣ. ೧೨. ಶ್ರೀನಿವಾಸ ನಾಯಕ ಬಿ.ಎಸ್. : ೧೯೮೪, ಚಿತ್ರದುರ್ಗದ ಕಾಮಗೇತಿ ಅರಸರು, ಸರ್ಜಾ ರಾಮಸ್ವಾಮಿ ನಾಯಕರು, ತರೀಕೆರೆ. **ಸ್ಮರಣ ಸಂಚಿಕೆ / ಲೇಖನ / ಮಾಸಪತ್ರಿಕೆ / ಇತ್ಯಾದಿ** ೧೩. ಎಂ.ಕೆ.ನಾಯಕ(ಸಂ) : ವಾಲ್ಮೀಕಿ ವಾಣಿ, ಫೆಬ್ರವರಿ ೧೯೯೮, ಸಿ.ಕೆ.ಪುರ, ಕೆಳಗೋಟೆ, ಚಿತ್ರದುರ್ಗ ೧೪. ಹರ್ತಿಕೋಟೆ ವೀರೇಂದ್ರಸಿಂಹ (ಸಂ) : ವಾಲ್ಮೀಕಿಕಿರಣ ೯ – ೨ – ೧೯೯೮, ಶ್ರೀ ವಾಲ್ಮೀಕಿ ಮಹಾಸಂಸ್ಥಾನ ರಾಜನಹಳ್ಳಿ ೧೫. ೧೪ – ೩ – ೧೯೩೦ ನಾಯಕನಹಟ್ಟಿ ದೊರೆಬಸಪ್ಪ ನಾಯಕರ ಪತ್ರ ( ಈ ಬಗ್ಗೆ ೧೫ಕ್ಕೂ ಹೆಚ್ಚು ಪತ್ರಗಳಿವೆ) ೧೬. ಹಿರೇಹಳ್ಳಿ ದಡ್ಡಿ ಸೂರನಾಯಕ ದೇವರಿಗೆ ಸಂಬಂಧಿಸಿದ ಸುಮಾರು ೨೦ ದಾಖಲೆಗಳು ೧೭. ಹಿರೇಹಳ್ಳಿ ಕಟ್ಟೆಮನೆಗೆ ಸಂಬಂದಿಸಿದ ಪತ್ರ ( ೨೦ ಪತ್ರಗಳು) ೧೮. ಪಿ. ಕಟ್ಟೀಮನಿ (ಸಂ) ವಾಲ್ಮೀಕಿ ಬಂಧು, ೨೦೦೦, ಸಪ್ತಾಪೂರ, ಧಾರವಾಡ ೧೯. ಎಂ. ನರಸಿಂಹಯ್ಯ (ಸಂ) ವಾಲ್ಮೀಕಿ ಕರ್ನಾಟಕ, ನ್ಯೂಸ್‌ಲೈನ್ ಪ್ರಿಂಟರ್ಸ್, ಬೆಂಗಳೂರು. ೨೦. ಲಕ್ಷ್ಮಣ್ ತೆಲಗಾವಿ; ಕಾಮಗೇತಿ ಅರಸರ ಕೆಲವು ವಿಚಾರಗಳು : ಪ್ರತಿಕ್ರಿಯೆ, ಮಾನವಿಕ ಕರ್ನಾಟಕ ಸಂಪುಟ ೧೭, ಸಂಚಿಕೆ – ೪ ಅಕ್ಟೋಬರ್ (೧೯೮೭) ೨೧. ಏಕಲವ್ಯ ಮಾಸ ಪತ್ರಿಕೆ, ಚಳ್ಳಕೆರೆ. ೨೨. ಮದಕರಿ : ವಿಶ್ಲೇಷಣೆ, ಕನ್ನಡ ಸಾಹಿತ್ಯ ಪರಿಷತ್ತು ೨೩. ಇತಿಹಾಸ ದರ್ಶನ ಸಂ ೧, ೧೯೮೬ (ಗೌಡನಹಳ್ಳಿ ಶಾಸನ) ೨೪. ಇತಿಹಾಸ ದರ್ಶನ ಸಂ ೩, ೧೯೮೮ ಎಪ್ಪತ್ತೇಳು ಪಾಳೆಯಗಾರರು ೨೫. ಇತಿಹಾಸ ದರ್ಶನ ಸಂ ೫, ೧೯೯೦ ೨೬. K.S. Singh : 1994, The Scheduled Tribes, Vol – III, Anthropological Survey of India, Delhi

**೩. ಛಾಯಾಚಿತ್ರಗಳು**



ವಾಲ್ಮೀಕಿ



ಬೇಡರ ಕಣ್ಣಪ್ಪ





ಏಕಲವ್ಯ


ಕುಮಾರರಾಮ


ರಾಜಾವೀರ ಮದಕರಿನಾಯಕ


ನಾಯಕನಹಟ್ಟಿ ಪಾಳೆಯಗಾರರ ಕಾಲದ ಕೋಟೆ – ರಾಮದುರ್ಗ


ಶಾರದಮ್ಮ ನಾಗತಿ – ನಾಯಕನಹಟ್ಟಿ ಪಾಳೆಯಗಾರರು – ನಾಯಕನಹಟ್ಟಿ


ತಿಪ್ಪೇಸ್ವಾಮಿ ಜೀವೈಕ್ಯ ಸಮಾಧಿ ಹೊರಮಠ, ನಾಯಕನಹಟ್ಟಿ


ಪೂಜಾರಿ ಸೂರನಾಯಕ ಯಜಮಾನ, ಕಾಮಗೇತನಹಳ್ಳಿ



ಪೂಜಾರಿ ನಿಜಲಿಂಗಪ್ಪ, ಕಾಮಗೇತನಹಳ್ಳಿ



ದೇವರೆತ್ತಿನ ಕಿಲಾರಿಗೆ ದಕ್ಷಿಣೆ (ಕಾಣಿಕೆ) ಕೊಡುತ್ತಿರುವುದು, ಚಿನ್ನಹಗರಿ ನದಿ



ವಿಚಾರದ ಕಟ್ಟೆಮನೆ ಹಾಗೂ ಕಾಟಪ್ಪದೇವರು, ಕಾಟಪ್ಪನಹಟ್ಟಿ, ಚಳ್ಳಕೆರೆ



ಕಾಮಗೇತಿಗಳು ನಂದಿಯನ್ನು ಆರಾಧಿಸುವುದು, ಪೂಜಾರಹಳ್ಳಿ



ಕಾಮಗೇತನಹಳ್ಳಿ ದೇವಾಲಯದಲ್ಲಿರುವ ಹುತ್ತ, ಕಾಮಗೇತನಹಳ್ಳಿ



ಕಾಮಗೇತನಹಳ್ಳಿ ಸೂರ್ಯಲಿಂಗೇಶ್ವರ ದೇವಸ್ಥಾನ, ಕಾಮಗೇತನಹಳ್ಳಿ


ಟಿ.ಪಿ.ಓಬನಾಯಕ ಕಾಮಗೇತಿ ಯುವಕನ ವಿವಾಹ, ಕಾಮಗೇತನಹಳ್ಳಿ


ಕಾಮಗೇತನಹಳ್ಳಿ ಸೂರ್ಯಲಿಂಗೇಶ್ವರ ದೇವಾಲಯಕ್ಕೆ ಗಣ್ಯರ ಭೇಟಿ, ಕಾಮಗೇತನಹಳ್ಳಿ


ಕಾಮಗೇತಿಗಳು ನೆಲಸಿದ ಸ್ಥಳ ಪ್ಯಾಟೇಹಳ್ಳಿ, ಮಾಡ್ಲನಾಯಕನಹಳ್ಳಿ


ಕಾಮಗೇತಿ ಸನ್ಯಾಸಪ್ಪ ತಪಸ್ಸು ಮಾಡಿದ ಸ್ಥಳ, ಚಕ್ಕೇಬಂಡೆ


ಆಕನೂರು ಕಾಮಗೇತಿ ಪೋತರಾಜನು ಗಾವು ಜಿಗಿಯುವುದು, ಕಾತ್ರಿಕಹಟ್ಟಿ


ಮೊಳಕಾಲ್ಮೂರು ಪಾಳೆಯಗಾರರು ಆಳಿದ ಕೋಟೆ, ಮೊಳಕಾಲ್ಮೂರು





ಕಾಮಗೇತಿ ಬೆಡಗಿನ ಬಗ್ಗೆ ಮಾಹಿತಿ ಕೊಟ್ಟ ಯಜಮಾನರು, ಬಂಜಿಗೇರಿ



ನಾಯಕರ ಪಂಚಾಯ್ತಿ ಚಾವಡಿ, ಕಮಲಾಪುರ



ಗೌರಸಮುದ್ರದ ಮಾರಮ್ಮ, ಗೌರಸಮುದ್ರ



೧೨ ಪೆಟ್ಟಿಗೆ ದೇವರು ದಡ್ಡಿಸೂರನಾಯಕ, ಹಿರೇಹಳ್ಳಿ



ಕಾಮಗೇತಿ ವಂಶದವರ ೧೦೧ ಪತ್ರೆಮರ ಹಾಗೂ ಗೂಳಿಯ ಸಮಾಧಿ, ಪ್ಯಾಟೇಹಳ್ಳಿ



ಬೇಡ ನಾಯಕರು ಚಿನ್ನಹಗರಿ ನದಿಯಲ್ಲಿ ತಮ್ಮ ದೇವರಿಗೆ ಗಂಗಸ್ಥಾನ ಮತ್ತು ಪೂಜಾರಿಗೆ ಪಟ್ಟಾಭಿಷೇಕ, ಅಬ್ಬೇನಹಳ್ಳಿ.

# ಬಯಲನು ತುಂಬುವ ಆಲಯದ ಬೆಳಕಿನ ಬೀಜಗಳು

ಕನ್ನಡ ವಿಶ್ವವಿದ್ಯಾಲಯ ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಹುಡುಕುವ, ಗಟ್ಟಿಗೊಳಿಸುವ, ಹರಡುವ ಕಾಯಕವನ್ನು ನೋಂಪಿಯಲ್ಲಿ ನಡೆಸಿಕೊಂಡು ಬಂದಿದೆ. ಕನ್ನಡ ಸಂಸ್ಕೃತಿಯನ್ನು ಮತ್ತೆ ಮತ್ತೆ ನಿರ್ವಚನ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಒಂದು ಆಡುಂಬೊಲವಾಗಿ ಕಾರ್ಯನಿರ್ವಹಿಸುತ್ತಿದೆ. ನಮಗೆ ಗೊತ್ತಿರುವ ಸಂಸ್ಕೃತಿಯ ಅರ್ಥಗಳ ಆಚೆಗೆ ಅನೂಹ್ಯ ಲೋಕಗಳ ಕಡೆಗೆ ತನ್ನನ್ನು ಮತ್ತು ಕನ್ನಡಿಗರನ್ನು ಒಯ್ಯುವ ಪಯಣದ ದಾರಿಗಳನ್ನು ರೂಪಿಸುವ ಮಹತ್ವದ ಸಾಹಸದ ಹೆಜ್ಜೆಗಳು ಮೂಡಿ ಬಂದಿವೆ. ಇದು ನಿರಂತಳರ ನಡೆಯಬೇಕಾದ ಬಹುದಾರಿಗಳ ಮಹಾಯಾನ.

ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲಿ ಜಾಗತೀಕರಣದ ಈ ಸಂಕ್ರಮಣ ಸ್ಥಿತಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ರಚನೆ ಮತ್ತು ಕಾರ್ಯಗಳು ಸವಾಲಿನವು ಮತ್ತು ಜವಾಬ್ದಾರಿಯವೂ ಆಗಿವೆ. 'ಕನ್ನಡ' ಎನ್ನುವ ಪರಿಕಲ್ಪನೆಯನ್ನು ಭಾಷೆ, ಸಾಹಿತ್ಯ, ಬದುಕು ಮತ್ತು ಅದರ ಆಧುನಿಕ ಸನ್ನಿವೇಶಗಳಲ್ಲಿ ಅರ್ಥೈಸುವ ಮತ್ತೆ ಕಟ್ಟುವ ಕೆಲಸವನ್ನು ಕನ್ನಡ ವಿಶ್ವವಿದ್ಯಾಲಯ ಒಂದು ಕಾಯಕದಂತೆ ಕೈಗೆತ್ತಿಕೊಂಡಿದೆ. ಕನ್ನಡ ಮತ್ತು ಅಭಿವೃದ್ಧಿ ಎನ್ನುವ ಎರಡು ಪರಿಕಲ್ಪನೆಗಳು ಎದುರುಬದುರಾಗುವ ಆತಂಕ ಒಂದು ಕಡೆಯಾದರೆ, ಅವು ಒಂದನ್ನೊಂದು ಪ್ರಭಾವಿಸಿ ನೆರವಾಗುವ ಆವರಣವನ್ನು ನಿರ್ಮಾಣ ಮಾಡುವುದು ಇನ್ನೊಂದೆಡೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯವು ಈ ಸಂಬಂಧಿಯಾದ ಹೊಸ ಆಲೋಚನೆಗಳ ಸಂವಾದ ಮತ್ತು ಅದರ ಅನ್ವಯಿಕ ಸಾಧನೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಬಯಸಿದೆ.

ಕನ್ನಡವು ಕಾಗದರಹಿತ ಮಾಧ್ಯಮದಲ್ಲಿ ಕಾಣಿಸಿಕೊಳ್ಳುತ್ತಿರುವಾಗಲೂ ಪುಸ್ತಕ ರೂಪದಲ್ಲಿ ಕನ್ನಡ ಕೃತಿಗಳ ಪ್ರಕಟಣೆ ಸಮಾನಾಂತರವಾಗಿ ಕ್ರಿಯಾಶೀಲವಾಗಿ ನಡೆಯುವುದು ಬಹಳ ಮುಖ್ಯವಾದದ್ದು. ತಾಂತ್ರಿಕ – ಮೌಖಿಕ ಮಾಧ್ಯಮದಲ್ಲಿ ಕಣ್ಣಿಗೆ, ಕಿವಿಗೆ ಮತ್ತು ಮನಸ್ಸಿಗೆ ಕನ್ನಡವನ್ನು ಸಂವಹನಗೊಳಿಸುವ ಪ್ರಕ್ರಿಯೆ ನಿರಂತರವಾಗಿ ನಡೆಯಬೇಕಿದೆ. ಇಲ್ಲಿ ಪ್ರಕಟಗೊಳ್ಳುವ ಮಾಧ್ಯಮದೊಂದಿಗೆ ಅಭಿವ್ಯಕ್ತಗೊಳ್ಳುವ ಚಿಂತನಾ ಶರೀರವೂ ಮುಖ್ಯವಾದದ್ದು. ಭಾಷೆ, ಸಾಹಿತ್ಯ, ಕಲೆಗಳು, ವಿಜ್ಞಾನ, ತಂತ್ರಜ್ಞಾನ, ಸಮಾಜವಿಜ್ಞಾನ ಎನ್ನುವ ಬೌದ್ಧಿಕ ಗಡಿರೇಖೆಗಳನ್ನು ಕಳಚಿಕೊಂಡು ಕನ್ನಡ ಜ್ಞಾನವು ಕನ್ನಡ ವಿಶ್ವವಿದ್ಯಾಲಯದಲ್ಲಿ ರೂಪುಗೊಳ್ಳುವ ಮತ್ತು ಪ್ರಕಟಗೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ.

ಕನ್ನಡ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠದ ವತಿಯಿಂದ ಪ್ರಕಟವಾಗುತ್ತಿರುವ 'ಕಾಮಗೇತಿ ವಂಶಜರ ಚರಿತ್ರೆ' ಎನ್ನುವ ಗ್ರಂಥವನ್ನು ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಅಧ್ಯಾಪಕರಾದ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು ವ್ಯಾಪಕ ಕ್ಷೇತ್ರಕಾರ್ಯ ಮತ್ತು ಅಧ್ಯಯನದ ಮೂಲಕ ರಚನೆ ಮಾಡಿದ್ದಾರೆ. ಮ್ಯಾಸನಾಯಕರ ಒಂದು ಬೆಡಗಾಗಿರುವ 'ಕಾಮಗೇತಿ' ಎನ್ನುವುದು ಒಂದು ವಂಶಜರ ಚರಿತ್ರೆಯಾಗಿ ರೂಪುಗೊಂಡು ಮತ್ತು ಐತಿಹಾಸಿಕವಾಗಿ ಬೆಳೆದುಬಂದ ಸಂಕಥನವನ್ನು ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು ಪರಿಶ್ರಮಪೂರ್ವಕವಾಗಿ ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಬೇಡ ನಾಯಕರ ಚಾರಿತ್ರಿಕ ಹಿನ್ನೆಲೆಯಿಂದ ತೊಡಗಿ ಅವರ ಕಟ್ಟೆಮನೆಗಳಿಂದ ಮುಂದುವರೆದು ನ್ಯಾಯ ಕಟ್ಟೆಗಳವರೆಗೆ ಇಲ್ಲಿ ಅಧ್ಯಯನ ನಡೆಸಿದ್ದಾರೆ. ಕಾಮಗೇತನಹಳ್ಳಿ ಆಚಾರದ ಕಟ್ಟೆಮನೆ ಬಗ್ಗೆ ಇಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ. ಕಾಮಗೇತಿ ವಂಶಜರ ರಾಜಕೀಯ ಚರಿತ್ರೆಯನ್ನು ಅದರ ಎಲ್ಲ ವಿವರಗಳ ಸಹಿತ ಕೊಡಲಾಗಿದೆ. ಕಾಮಗೇತಿ ಸಮುದಾಯದ ಚರ್ಚೆ ಮತ್ತು ಸಂಸ್ಕೃತಿಯನ್ನು ಇಲ್ಲಿ ವಿವರವಾಗಿ ಪರಿಶೀಲಿಸಲಾಗಿದೆ. ಈ ಕೃತಿಯನ್ನು ಪರಿಶ್ರಮ ಮತ್ತು ಪ್ರೀತಿಯಿಂದ ರಚಿಸಿಕೊಟ್ಟ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಅಭಾರಿಯಾಗಿದ್ದೇನೆ.

**ಬಿ.ಎ. ವಿವೇಕ ರೈ**
ಕುಲಪತಿ

# ೧. ಪ್ರಸ್ತಾವನೆ

‘ಕಾಮಗೇತಿ’ ಎಂಬುದು ಶಿಷ್ಯರೂಪ ಪಡೆದ ಮ್ಯಾಸನಾಯಕರ ಒಂದು ಬೆಡಗು. ಇದರ ಎರಡು ಪಂಗಡಗಳಾದ ಮಲ್ಲನಾಯಕ ಮತ್ತು ಮಂದಲಾರುಗುಂಪಿನಲ್ಲಿ ಕಾಮಗೇತಲಾರು ಮಂದಲಾರಿಗೆ ಸೇರಿದ ಇದನ್ನು ಬೇಡ – ನಾಯಕರ ಬೆಡಗು. ಇದನ್ನು ವಂಶ, ಗೋತ್ರ, ಜನ, ಪಂಗಡ, ವರ್ಗ, ಬುಡಕಟ್ಟು, ಕುಲ ಎಂದೆಲ್ಲ ಇದಕ್ಕೆ ಕರೆಯಲಾಗಿದೆ. ಇವರನ್ನಿಲ್ಲಿ ಮುಖ್ಯವಾಗಿ ಎರಡು ನೆಲೆಗಳಲ್ಲಿ ಅಧ್ಯಯನ ಮಾಡಲಾಗಿದೆ. ಒಂದು, ಬುಡಕಟ್ಟಿನ ಹಿನ್ನೆಲೆಯಲ್ಲಿ ನಾಯಕರ ಸಾಂಸ್ಕೃತಿಕ ಚರಿತ್ರೆಯನ್ನು ಹಾಗೂ ಮೌಖಿಕ ನೆಲೆಯಲ್ಲಿ ಕಾಮಗೇತಿಯರ ಪರಂಪರೆ ಕುರಿತದ್ದಾಗಿದೆ. ಎರಡು, ಕಾಮಗೇತಿ ವಂಶದವರ ರಾಜಕೀಯ ಚರಿತ್ರೆಯನ್ನು ಸೂಕ್ಷ್ಮ ಚಾರಿತ್ರಿಕವಾಗಿ ವಿಶ್ಲೇಷಿಸಲಾಗಿದೆ.

ಇಂದಿನ ನಾಯಕ ಸಮುದಾಯವನ್ನು ಅಧ್ಯಯನ ಮಾಡುವಾಗ ಅದನ್ನು ಸಮುದಾಯ, ಬುಡಕಟ್ಟು, ಜಾತಿ ಎಂದೆಲ್ಲ ಕರೆದರೂ, ಇಲ್ಲಿ ಮುಖ್ಯವಾಗಿ ಆದಿವಾಸಿ, ಗಿರಿಜನ, ಅಲೆಮಾರಿಗಳು, ಬುಡಕಟ್ಟು ಜನರಾದ ಬೇಡರು, ನಾಯಕ, ವಾಲ್ಮೀಕಿ, ತಳವಾರ ಎಂದೆಲ್ಲ ಗುರುತಿಸಿಕೊಂಡವರನ್ನು ಅವಲೋಕಿಸಿರುವುದು ಸ್ಪಷ್ಟ ಹಾಗೂ ಸೂಕ್ತ.

ಈಗಿನ ಬೇಡರಲ್ಲಿ ನೂರಾರು ಬೆಡಗುಗಳಿದ್ದು, ಕಾಡು ಮತ್ತು ನಾಡಿನ ಜೀವನ ನಡಸುವವರು ಸಾಂಸ್ಕೃತಿಕವಾಗಿ ಇಲ್ಲಿ ಪ್ರಸ್ತುತವಾಗುತ್ತಾರೆ. ಇಂದಿಗೂ ಅಡವಿಯಲ್ಲಿ ಬೇಡೆ, ಪಶುಪಾಲನೆ ಮತ್ತು ಕೃಷಿ ಮೂಲಕ ಜೀವಿಸುವುದು ಮ್ಯಾಸಬೇಡರಲ್ಲಿ ಕಾಣಲಾಗುವುದು. ಚರಿತ್ರೆ ಮತ್ತು ಸಂಸ್ಕೃತಿಯಲ್ಲಿ ಇವರು ಆದಿಯಲ್ಲಿ ಒಂದೇ ಆಗಿದ್ದರೂ ಕ್ರಮೇಣ ಛಿದ್ರಗೊಂಡು ಬೇರೆ ಬೇರೆ ಆಗಿರುವುದು ಕಂಡುಬರುತ್ತದೆ. ಊರು ಮತ್ತು ಕಾಡಿನ ನಡುವೆ ವೈರುಧ್ಯಗಳಿವೆ. ಇಂದಿನ ನಾಯಕರು ಇತರ ಎಲ್ಲ ನಾಗರಿಕರಂತ ಜೀವಿಸಿದರೆ, ಮ್ಯಾಸಬೇಡರು ಇನ್ನು ಗಿರಿಜನ, ಆದಿವಾಸಿರಾಗಿಯೇ ಉಳಿದಿದ್ದಾರೆ. ಶಿಕ್ಷಣ, ಸಾಮಾಜಿಕ – ರಾಜಕೀಯ ಸ್ಥಾನಮಾನಗಳಿಂದ ಇವರು ತಮಗೆ ತಾವೇ ಬಹುದೂರ ಉಳಿದಿದ್ದಾರೆ. ನಾಗರಿಕತೆ, ಹೊಸತನ ಎನ್ನುವುದು ಇವರ ದೃಷ್ಟಿಯಲ್ಲಿ ಅನಿಷ್ಟ ಮತ್ತು ಮರೀಚಿಕೆ. ಪ್ರಾಚೀನ ಸಂಸ್ಕೃತಿ – ಜನಜೀವನ, ರೂಢಿ, ಸಂಪ್ರದಾಯಗಳನ್ನು ಪ್ರೀತಿಸುತ್ತಾರೆ. ಆದರೂ ಇವರಲ್ಲಿ ಕೆಲವರು ಧೈರ್ಯ – ಪರಾಕ್ರಮಗಳಿಂದ ಸೈನಿಕ, ತಳವಾರ, ದಳವಾಯಿ, ಪಾಳೆಯಗಾರ, ದೊರೆ, ನಾಯಕ, ಇತರ ಬಿರುದು, ಪಟ್ಟ, ಹುದ್ದೆ – ಸ್ಥಾನಗಳನ್ನು ಅಲಂಕರಿಸಿ ಸೇವೆ ಸಲ್ಲಿಸಿರುವುದು ಗಮನಾರ್ಹ.

ಈ ರೀತಿಯಲ್ಲಿ ಬುಡಕಟ್ಟಿನ ನೆಲೆಯಿಂದ ನಾಗರೀಕತೆಯ ಮೆಟ್ಟಿಲೇರಲು ಇವರು ಕ್ರಮಿಸಿದ ಹಾದಿ ಕುತೂಹಲಕಾರಿ. ಇವರಲ್ಲಿ ಕೆಲವರು (ಕಾಮಗೇತಲಾರು) ತಮ್ಮ ಬುಡಕಟ್ಟು ಸಂಸ್ಕೃತಿಯನ್ನು ಮೊದಲು ಗಟ್ಟಿಗೊಳಿಸಿಕೊಳ್ಳಲು ಕಟ್ಟೆಮನೆ, ಗುಡಿಕಟ್ಟುಗಳನ್ನು ಸ್ಥಾಪಿಸುತ್ತಾರೆ. ಜಾತಿಯ ಮೂಲಕ ಎತ್ತರಕ್ಕೆ ಬೆಳೆದ ಹಲವು ಜನ ತಮ್ಮ ಅಸಮಾನ್ಯ ಸಾಧನೆಯಿಂದ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದು ಸ್ಮರಣೀಯ. ಅಂಥ ಸಾಧನೆಗಳನ್ನು ಚಿತ್ರದುರ್ಗ – ದಾವಣಗೆರೆ ಮತ್ತು ಬಳ್ಳಾರಿ ಇನ್ನು ಕೆಲವು ಜಿಲ್ಲೆಗಳಲ್ಲಿನ ನಾಯಕರು ಮಾಡಿರುವುದು ಈ ನಾಗರಿಕ ಜಗತ್ತಿಗೆ ತಿಳಿದಿಲ್ಲ. ಈ ಪರಿಸರದಲ್ಲಿ ನೆಲಸಿರುವ ನಾಯಕರು ತಮ್ಮ ರೂಢಿ – ಸಂಪ್ರದಾಯಕ್ಕೆ ಕೊಟ್ಟ ಮಹತ್ವವನ್ನು ರಾಜ್ಯಾಳ್ವಿಕೆಗೂ ಕೊಟ್ಟಿದ್ದು ಕಡಿಮೆ. ಹೀಗಾಗಿ ಒಂದು ಕಡೆ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಪ್ರಭುತ್ವ ಪಡೆದರೆ ಮತ್ತೊಂದೆಡೆ ಸ್ಥೈರ್ಯ, ಚಾಣಾಕ್ಷತೆಯಿಂದ ರಾಜ್ಯಾಳ್ವಿಕೆ ಮಾಡಿರುವುದು ಗಮನಾರ್ಹ. ಹೀಗೆ ಇವರ ಸಾಹಸಗಾಥೆಯನ್ನು ಐತಿಹಾಸಿಕ ದೃಷ್ಟಿಕೋನದಿಂದ ತಿಳಿಸಲಾಗಿದೆ.

ಕಾಮಗೇತಿ ಬೆಡಗಿನ ವ್ಯಕ್ತಿಗೆ 'ಕಸ್ತೂರಿ ಕಾಮಗೇತಿ' ಎಂದು ಸಂಬೋಧಿಸಲಾಗಿದೆ. ಇಲ್ಲಿ ಕಸ್ತೂರಿ ಎಂದರೆ ನಿಖರವಾದ ಅರ್ಥಗೊತ್ತಿಲ್ಲ. ಆದರೂ ಕಸ್ತೂರಿ ಮೃಗ ಬೆವರನ್ನು ಮರಕ್ಕೆ ಉಜ್ಜುವುದನ್ನು ಸಂಗ್ರಹಿಸುವ ಪರಿಮಳಕ್ಕೆ, ಸುವಾಸನೆಗೆ ಕಸ್ತೂರಿ ಮೃಗದ ನಾಬಿಯಲ್ಲಿ ಕಸ್ತೂರಿ ಇರುತ್ತದೆ ಎನ್ನಲಾಗುವುದು.

ಇಲ್ಲಿ ಕಾಮಗೇತಿ ವಂಶದವರು ಇತರ ಬೆಡಗಿನವರಿಗಿಂತ ಭಿನ್ನವೇನು ಅಲ್ಲ. ಆದರೂ ಇವರ ಕೊಡುಗೆ – ಕಾಣಿಕೆ ಎಲ್ಲಾ ಕಡೆ ಇರುವುದು ಶ್ಲಾಘನೀಯ. ಆನೆಗೊಂದಿ ನರಕದ ಕೋಟೆಯಿಂದ ೧೨ ಪೆಟ್ಟಿಗೆ ದೇವರುಗಳನ್ನು ತಂದು ಮ್ಯಾಸ ಮಂಡಲಿಗೆ ಕೊಟ್ಟ ಕೀರ್ತಿ ಕೊಡಗಲು ಬೊಮ್ಮನಿಗೆ ಸಲ್ಲುಸುವುದು. ಕುಲ – ಗೋತ್ರಗಳ ನಿರ್ಮಾಣ, ದೇವರುಗಳ ಪೂಜಾರಿಕೆ; ಮದುವೆ ಸಂಪ್ರದಾಯ ಹೀಗೆ ಅಧಿಕಾರ – ಹಕ್ಕುಗಳಿಗಾಗಿ ತಮ್ಮ ತಮ್ಮಲ್ಲಿ ಸಂಘರ್ಷ ಬೇಡವೆಂದು ಜಾತಿ ಸಂವಿಧಾನವನ್ನು ಕಟ್ಟೆಮನೆಹಾಗಿಸಿಕೊಂಡಿದ್ದಾರೆ. ಹೀಗೆ ಕಟ್ಟೆಮನೆಯ ಮೂಲಕ ಇಡೀ ಬುಡಕಟ್ಟನ್ನು ನಿಯಂತ್ರಿಸುವ ಶಕ್ತಿ ಅದರ ನಾಯಕನಿಗಿತ್ತು. ಕಟ್ಟೆಮನೆ ಸ್ಥಾಪಿಸಿದ್ದು, ಪೂಜಾರಿಕೆ ಹಕ್ಕು ಪಡೆದಿದ್ದು ಮತ್ತು ಮದುವೆಯಲ್ಲಿ ವೀಳ್ಯೆ ಹಿಡಿಯುವ ಅಧಿಕಾರ ಇದ್ದದ್ದು ಈ ಕಾಮಗೇತಿಯವರಿಗೆ. ಇವರು ರಾಜಾ ದೊಡ್ಡ ಮದಕರಿ ನಾಯಕನ ಕಾಲಕ್ಕೆ ಚಳ್ಳಕೆರೆ ಹತ್ತಿರ ದೊಡ್ಡೇರಿಯಲ್ಲಿ ಕಾಟಪ್ಪ ದೇವರನ್ನು ಪ್ರತಿಷ್ಠಾಪಿಸಿಕೊಂಡು ನೆಲೆಸುತ್ತಾರೆ. ನಂತರ ರುದ್ರಮ್ಮನಹಳ್ಳಿ ನಲುಜೆರುವಯ್ಯನನ್ನು ದೇವರಾಗಿ ಮಾಡಿಕೊಂಡಿದ್ದಾರೆ. ಮೊದಲು ಓರುಗಲ್ಲು ಪಟ್ಟಣದಲ್ಲಿ ಇವರು (ಚಳ್ಳಕೆರೆ), ನಂತರ ಕಾಮಗೇತನಹಳ್ಳಿ ಕಟ್ಟೆಮನೆ ನಿರ್ಮಿಸಿ, ಮ್ಯಾಸಮಂಡಳಿಗೆ ಪೂಜಾರಿಯಾಗುವ ಹಕ್ಕನ್ನು ಕಾಮಗೇತ್ಲಾರು ಪಡೆದಿರುತ್ತಾರೆ. ಅದೇ ರೀತಿ ಚಿತ್ರದುರ್ಗ, ನಾಯಕನಹಟ್ಟಿ, ಮೊಳಕಾಲ್ಮೂರು ಮೊದಲಾದ ಕಡೆ ಪಾಳೆಯಗಾರರಾಗಿ ಕಾಮಗೇತಿಯರು ರಾಜ್ಯಾಳ್ವಿಕೆ ಮಾಡಿದ್ದು ಗಮನಾರ್ಹ. ಇವರಲ್ಲಿ ಪುರಾಣ ಪುರುಷರು, ಚಾರಿತ್ರಿಕ ಪುರುಷರು ಇರುವಂತೆ ಪವಾಡ ಪುರುಷರು, ಸಾಧನೀಯ ವ್ಯಕ್ತಿಗಳು ಕಂಡುಬರುತ್ತಾರೆ. ಆ ಬಗ್ಗೆ ಸ್ಥಳ, ವ್ಯಕ್ತಿ, ಘಟನೆ, ಕಾಲ ಹೀಗೆ ಎಲ್ಲವನ್ನೂ ಈ ಹೊತ್ತಿಗೆಯಲ್ಲಿ ಪರಿಚಯಿಸಲಾಗಿದೆ.

ಕಾಮಗೇತ್ಲಾರು ಹಾಗೂ ಕಾಮಗೇತಿ ವಂಶಜರ ಬಗೆಗೆ ಇದೊಂದು ಚಿಕ್ಕ ಪ್ರಯತ್ನದ ಕೈಪಿಡಿ ಅಷ್ಟೇ. ಆಸಕ್ತರು ಇನ್ನೂ ಈ ಬಗ್ಗೆ ಅಧ್ಯಯನ ಮಾಡಬಹುದು. ಅಲ್ಪ ಕಾಲದಲ್ಲಿ ಇಂಥ ವಿಷಯ ಕುರಿತು ಸಂಶೋಧನೆ ಮತ್ತು ಅಧ್ಯಯನ ಮಾಡುವಾಗ ಚರಿತ್ರೆ ವಿದ್ಯಾರ್ಥಿಯಾದ ನನಗೆ ಸಹಜವಾಗಿ ಇದನ್ನು ಚರಿತ್ರೆ ಅಧ್ಯಯನ ವಿಧಾನದಿಂದಲೇ ನಿರೂಪಿಸಲು ಪ್ರಯತ್ನಿಸಲಾಗಿದೆ. ಇದಕ್ಕೆ ಆಕರಗಳಾಗಿ ಪ್ರಕಟಗೊಂಡ ಕೃತಿ, ಲೇಖನಗಳನ್ನು ಬಳಸಿಕೊಳ್ಳಲಾಗಿದೆ. ಬಹುಪಾಲು ಮಾಹಿತಿ ಕ್ಷೇತ್ರಕಾರ್ಯದಿಂದ ಕೂಡಿದೆ. ವಿಷಯದ ವ್ಯಾಪ್ತಿ ಬಹುಪಾಲು ಮಧ್ಯಕಾಲೀನ ಮತ್ತು ಆಧುನಿಕ ಕಾಲಘಟ್ಟಕ್ಕೆ ಸೀಮಿತವಾಗಿದ್ದರೂ, ಪ್ರಾಸಂಗಿಕವಾಗಿ ಎಲ್ಲ ಅವಧಿಯ ವಿವರಗಳನ್ನು ಅವಲೋಕಿಸಲಾಗಿದೆ. ಅನುಕೂಲಕ್ಕೆ ತಕ್ಕಂತೆ ಉಲ್ಲೇಖ, ಅಡಿಟಿಪ್ಪಣಿ, ಕೊನೆಟಿಪ್ಪಣಿ, ಗ್ರಂಥ ಋಣವನ್ನು ಕೊಡಲಾಗಿದೆ.

# ೧. ಬೇಡ – ನಾಯಕರ ಬುಡಕಟ್ಟಿನ ಸಾಂಸ್ಕೃತಿಕ ಚರಿತ್ರೆ

ಭಾರತವು ವಿವಿಧ ಭಾಷೆ, ಧರ್ಮ, ಸಂಸ್ಕೃತಿ, ಜನಾಂಗ, ಆಚಾರ – ವಿಚಾರ, ಸಂಪ್ರದಾಯಗಳನ್ನೊಳಗೊಂಡ ವೈವಿಧ್ಯಮಯ ದೇಶ ಎಂಬುದರಲ್ಲಿ ಎರಡು ಮಾತಿಲ್ಲ. ಇಂಥಾ ದೇಶದಲ್ಲಿಂದು ಸಹಸ್ರಾರು ಬುಡಕಟ್ಟುಗಳಿರುವುದು ಗಮನಾರ್ಹ. ಅವುಗಳಲ್ಲಿ ಮುಂಡಾ, ಭಿಲ್, ರಾಮೋಶಿ, ವೇದನ್, ಬೋಯಾ, ಬೇಡ, ವಾಲ್ಮೀಕಿ, ಪುಲಿಂದ, ನಿಷಾದ, ಶಿಕಾರಿ, ಶಬರ, ಕಿರಾತ, ವ್ಯಾಧರು, ನಾಯಕ ಮೊದಲಾದವರನ್ನು ಹೆಸರಿಸಬಹುದು. ಎಂ.ಎಸ್.ಪುಟ್ಟಣ್ಣನವರು ಈ ನಾಯಕ ಜಾತಿಯವರಲ್ಲಿ ಊರಬೇಡರು – ಮ್ಯಾಸಬೇಡರು (ನಾಯಕ) ಎಂದು ಎರಡು ಪಂಗಡ ಉಂಟು. ಇವರಲ್ಲಿ ಮೇಸಬೇಡರು ಪರಿಶುದ್ಧರಂತೆ. ಇವರು ಪಾನ ಮಾಡುವುದಿಲ್ಲ. ಈಚಲ ಮರವನ್ನು ಮುಟ್ಟುವುದಿಲ್ಲ, ಈಚಲು ಚಾಪೆಯನ್ನೂ ಕೂಡ ಹಾಸಿಕೊಂಡು ಅದರ ಮೇಲೆ ಕುಳಿತುಕೊಳ್ಳುವುದಿಲ್ಲ. ಊರಬೇಡರಲ್ಲಿ ಇಂಥಾ ನಿಯಮಗಳು ವಿಶೇಷವಾಗಿಲ್ಲವಂತೆ. ಈ ಎರಡು ಪಂಗಡದವರು ಪರಸ್ಪರ ಕೊಟ್ಟು ತಂದು ಮಾಡುವುದಿಲ್ಲ ಎಂದು ನಾಯಕರನ್ನು ಪರಿಚಯಿಸುವಾಗ ತಿಳಿಸಿದ್ದಾರೆ.[1] ಮ್ಯಾಸಬೇಡರಲ್ಲಿ ನೂರಾರು ಬೆಡಗುಗಳಿವೆ. ಕಟ್ಟೆಮನೆ, ಗುಡಿಕಟ್ಟೆ, ಅರಮನೆ, ಗುರುಮನೆಗಳಲ್ಲದೆ, ಎರಡು ಪ್ರಮುಖ ಪಂಗಡಗಳಿವೆ:

ಒಂದು, ಮಲ್ಲಿನಾಯಕನವರು (ಸಂತತಿ) ಮತ್ತೊಂದು ಮಂದವಾರು (ಸಂತತಿ). ಇವೆರೆಡು ಇಂದು ಅಭಿವೃದ್ಧಿ ಹೊಂದುತ್ತಾ ಬಂದಿದ್ದು ತಮ್ಮ ಸಂಸ್ಕೃತಿಯನ್ನು ಬುಡಕಟ್ಟಿನ ಹಿನ್ನೆಲೆಯಲ್ಲಿ ಉಳಿಸಿಕೊಂಡಿವೆ. ಇವರುಗಳಲ್ಲಿ ನಾಯಕ ಬುಡಕಟ್ಟು ತನ್ನ ಪಾರಂಪರಿಕ ಹಿನ್ನೆಲೆ, ಶಿಸ್ತುಬದ್ಧ ಕಟ್ಟುಪಾಡು, ವ್ಯಕ್ತಿಗತ ಪೌರುಷಗಳಿಂದ ವಿಭಿನ್ನವಾಗಿದೆ. ಈ ನಾಯಕರ ಬೆಡಗುಗಳಲ್ಲಿ ಒಂದಾದ 'ಕಾಮಗೇತಿ' ಎಂಬುದರ ಬಗ್ಗೆ ಬುಡಕಟ್ಟಿನ ಪ್ರಾಮುಖ್ಯತೆ, ಚಾರಿತ್ರಿಕ ಮಹತ್ವ, ಸಾಂಸ್ಕೃತಿಕತೆಯನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

**೧.೧. ಬೇಡ – ನಾಯಕರ ಚಾರಿತ್ರಿಕ ಹಿನ್ನೆಲೆ**

ಭಾರತದ ಅತೀ ಪ್ರಾಚೀನ ಬುಡಕಟ್ಟುಗಳಲ್ಲಿ ಬೇಡ – ನಾಯಕರದು ಒಂದು ಬುಡಕಟ್ಟು. ಇವರಲ್ಲಿ ಹದಿನೆಂಟಕ್ಕೂ ಹೆಚ್ಚು ಪರ್ಯಾಯ ಪಂಗಡಗಳಿವೆ. ಅವುಗಳೆಂದರೆ: ಬೇಡ, ಕಿರಾತ, ಶಬರ, ನಿಷಾದ, ವ್ಯಾಧ, ಪುಲಿಂದ, ಭಿಲ್, ಕೋಳಿ, ವಾಲ್ಮೀಕಿ, ನಾಯಕ, ತಳವಾರ, ಪರಿವಾರ, ನಾಯಕಮಕ್ಕಳು, ಬೇರಾದ್, ಭೋಯಾ, ರಾಮೋಶಿ, ಗುರಿಕಾರ, ಕಣ್ಣಪ್ಪನ ಮಕ್ಕಳು ಮೊದಲಾದವುಗಳು. ವಿವಿಧ ರಾಜ್ಯಗಳಲ್ಲಿ ಇವರಿಗೆ ಬೇರೆ ಬೇರೆ ಹೆಸರುಗಳಿಂದ ಕರೆಯುವರು. ಕರ್ನಾಟಕದಲ್ಲಿ ಬೇಡ, ನಾಯಕ, ವಾಲ್ಮೀಕಿ ಹೆಸರುಗಳು ಬಳಕೆಯಲ್ಲಿದ್ದರೂ ಆಯಾ ಪ್ರಾದೇಶಿಕತೆಗೆ ತಕ್ಕಂತೆ ಹದಿನೆಂಟು ಪರ್ಯಾಯ ಪಂಗಡಗಳು ಚಾಲ್ತಿಯಲ್ಲಿರುತ್ತವೆ. ಇವರ ಬೆಡಗು, ಬಳಿಗಳು ತೀರಾ ಭಿನ್ನವೆಂದೇ ಹೇಳಬಹುದು.

ವೇದಗಳ ಕಾಲದಲ್ಲಿ ಬೇಡ ಅಥವಾ ಕಿರಾತರ ಹೆಣ್ಣು, ವನಸ್ಪತಿ, ಆಯುರ್ವೇದಗಳಲ್ಲಿ ಪರಿಣಿತ ಪಡೆದ ಬಗ್ಗೆ ಆಧಾರಗಳಿವೆ. ಹಾಗೆಯೇ ಕಾಮರೂಪದಲ್ಲಿ (ಪಶ್ಚಿಮ ಭಾರತ) 'ಪ್ರಗ್ಜೋತಿಶ' ಎಂಬ ಅರಸ ಕುರುಕ್ಷೇತ್ರ ಕಾಳಗದಲ್ಲಿ ಬೇಡರ ಪ್ರಬಲ ಸೈನ್ಯ ಹೋರಾಡಿದ ನಿದರ್ಶನವಿದೆ. ಪ್ರತಿಯೊಬ್ಬ ಪಾಂಡವರಿಗೂ ಒಂದೊಂದು ಪ್ರತ್ಯೇಕ ಬೇಡಪಡೆ ಇದ್ದಿತು ಎಂಬುದು ಪ್ರತೀತಿ. ರಾಹುಲ ಸಾಂಕೃತ್ಯಾಯನ ದೀವೋದಾಸ ಕೃತಿಯಲ್ಲಿ ಕಿರಾತರ ಬಗ್ಗೆ ವಿವರಿಸಿದ್ದಾರೆ. ಕ್ರಿ.ಶ. ೭ನೇ ಕೃತಿಯ ಶತಮಾನದಲ್ಲಿ ಹಿಮಾಲಯದಿಂದ ವಿಸ್ತರಣೆಗೊಂಡು ಪಂಜಾಬ್, ವಿಂಧ್ಯಾಪರ್ವತಗಳಲ್ಲಿ ನೆಲಸಿದ್ದ ಕಿರಾತರು ಹೆಚ್ಚಾಗಿ ಕಿರಾತ ದೇಶದಲ್ಲಿದ್ದರು. ದುದ್ಯೋಶಿ ಮತ್ತು ಕರ್ಕಿನದಿ (ನೇಪಾಳ) ದಂಡೆ ಮೇಲೆ ಈ ಕಿರಾತ ದೇಶವಿತ್ತು. ಆರ್ಯರ ದಾಳಿ ಮತ್ತು ಇತರ ರಾಜ್ಯ – ಸಂಸ್ಥಾನಗಳ ಚಾರಿತ್ರಿಕ ಕಾಲಘಟ್ಟದಲ್ಲಿ ಉತ್ತರ ಭಾರತದಿಂದ ಒರಿಸ್ಸಾ, ಆಂಧ್ರಪ್ರದೇಶದ ಮೂಲಕ ದಕ್ಷಿಣಭಾರತದ ಕರ್ನಾಟಕಕ್ಕೆ ಬಂದು ನೆಲಸಿದರು. ಕರ್ನಾಟಕದಲ್ಲಿ ಬೇಡರ ಚಾರಿತ್ರಿಕ ಪರಂಪರೆ ಶ್ರೀಮಂತವಾಗಿದ್ದು ಭಾರತ ಚರಿತ್ರೆಯಲ್ಲಿಯೇ ಅಪೂರ್ವ ಬುಡಕಟ್ಟುಗಳಲ್ಲೊಂದಾಗಿದೆ.

ಕರ್ನಾಟಕದ ಮೂಲಬುಡಕಟ್ಟುಗಳಲ್ಲಿ ಒಂದಾದ ಬೇಡ – ನಾಯಕರು ಬೇಟೆ, ಪಶುಪಾಲನೆ ಮತ್ತು ಕೃಷಿ ವೃತ್ತಿ ಮೂಲಕ ಅನಾದಿ ಕಾಲದಿಂದಲೂ ಜೀವನ ನಡೆಸುತ್ತಿದ್ದರು. ಮೌರ್ಯರು, ಶಾತವಾಹನ ಮತ್ತು ಇಕ್ಷ್ವಾಕು ಅರಸರ ಕಾಲದಲ್ಲಿ ಇವರು ಬೇಟೆಗಾರರಾಗಿದ್ದರಲ್ಲದೆ, ಗ್ರಾಮಗಳಲ್ಲಿ ತಳವಾರರಾಗಿದ್ದುದು ವಿಶೇಷ. ಕ್ರಿ.ಶ. ೭ನೇ ಶತಮಾನದಲ್ಲಿ ಗದ್ದೆಮನೆ ಶಾಸನದಲ್ಲಿ 'ಬೇಡರಾಯರ' ಉಲ್ಲೇಖವಿದೆ. ಬೇಡರನ್ನು ಮಲೆಪರು ಎಂದು ಕರೆದಿದ್ದಾರೆ. ಅವರಲ್ಲಿ ಕೆಲವರು ಆಳರಸರ ಸೇವೆಯಲ್ಲಿದ್ದು, ಒಬ್ಬ ಕಾಳಗದಲ್ಲಿ ವಿರೋಧಿ ಅರಸರೊಡನೆ ಹೋರಾಡಿ ಸ್ವರ್ಗಸ್ಥನಾಗಿರುವ ನಿದರ್ಶನಗಳಿವೆ. ಗಂಗರ ೧ನೇ ಶಿವಮಾರನ (ಕ್ರಿ.ಶ. ೭೧೩ರಲ್ಲಿ) ಆಸ್ಥಾನದಲ್ಲಿ ಕಿರಾತರ ಹೆಣ್ಣು ಆಸ್ಥಾನದಲ್ಲಿ ನರ್ತಕಿಯಾಗಿದ್ದಳು. ತಲಕಾಡಿನ ಗಂಗರು ಸೈನ್ಯದಲ್ಲಿ ಹೆಚ್ಚಾಗಿ ಬೇಡ – ನಾಯಕರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಗಂಗಕೊಂಗಣಿವರ್ಮ, ಧರ್ಮರಾಜ, ಶಿವಮಾರನು ಕ್ರಿ.ಶ. ೯೭೩ರಲ್ಲಿ ಕಿರಾತರನ್ನು ಹತ್ತಿಕ್ಕಿದ್ದು ತಿಳಿಯುವುದು. ಸೈನ್ಯದಲ್ಲಿ ಅಪಾರ ಸಂಖ್ಯೆಯಲ್ಲಿದ್ದು, ಅನುಭವಗಳಿಸಿದ ಇವರು ರಾಷ್ಟ್ರಕೂಟರ ಕಾಲಕ್ಕೆ ಸೈನ್ಯದ ಮುಖ್ಯಸ್ಥರೆಂದು, ನಾಯಕರೆಂದು ನಿಯೋಜಿತಗೊಂಡಿದ್ದರು. ಕರೆಸಿಕೊಂಡವರು. ಬಹುಶಃ ಅಂದಿನಿಂದಲೇ 'ನಾಯಕ' ಎಂಬ ಹುದ್ದೆ ಮೂಲಕ ಉಪಜಾತಿ ಹುಟ್ಟಿಕೊಂಡಿರಬೇಕು. ಕ್ರಿ.ಶ. ೯೫ಳರ ಶಾಸನದಲ್ಲಿ (೩ನೇ ಕನ್ನದೇವನು) ಬನವಾಸಿ ೧೨,೦೦೦ ಜಿಲ್ಲೆಯಲ್ಲಿ ಬೇಡರು ಕಳ್ಳರಾಗಿ, ದಾರಿಗಳ್ಳರಾಗಿ ದನ, ಬ್ರಾಹ್ಮಣರಿಗೆ ಉಪಟಳ ಕೊಡುತ್ತಿದ್ದರು ಎಂದು ಉಲ್ಲೇಖಿಸಲಾಗಿದೆ. ಅಂದಿಗೆ ಬೇಡರು ನಾಡಗಾವುಂಡರಾಗಿದ್ದರು. ಆನಂತರ ಕ್ರಿ.ಶ. ೯೭೭ರಲ್ಲಿ ಪಶ್ಚಿಮ ಚಾಲುಕ್ಯರ ಕಾಲದಲ್ಲಿ ರಟ್ಟರನ್ನು ಹುಟ್ಟಡಗಿಸಿದವರು ಬೇಡ ಸೈನಿಕರು. ಹಾಗೆಯೇ ಕ್ರಿ.ಶ. ೧೧೧೭ರಲ್ಲಿ ಹೊಯ್ಸಳ ವಿಷ್ಣುವರ್ಧನ ಬಿಟ್ಟದೇವ ಕಿರಾತ

ಮುಖ್ಯಸ್ಥರನ್ನು, ಶಕ್ತಿಶಾಲಿ ವೀರರನ್ನು ಸೈನ್ಯಕ್ಕೆ ನೇಮಿಸಿ ಬೇಡರಪಡೆಯನ್ನು ಸದೃಢಗೊಳಿಸಿದ್ದನು. ಸೇವುಣರ ಆಳ್ವಿಕೆಯಲ್ಲಿ ಬೇಡರನ್ನು ರಕ್ಷಣೆಗಾಗಿ ಮೀಸಲಿಟ್ಟಿದ್ದರು. ಕರ್ನಾಟಕದಲ್ಲಿ ಮೊಟ್ಟಮೊದಲು ರಾಜ್ಯಾಳ್ವಿಕೆ ಮಾಡಿದವರು ಕುಮ್ಮಟದುರ್ಗದ ನಾಯಕರು. ಬೇಡ – ನಾಯಕರ ಇತಿಹಾಸದಲ್ಲಿ ಇದೊಂದು ಸಾಧನೆ ಹಾಗೂ ಮೈಲಿಗಲ್ಲು ಎನ್ನಲಾಗುವುದು. ಮುಮ್ಮಡಿ ಸಿಂಗೆಯನಾಯಕ, ಕಂಪಿಲರಾಯ ಮತ್ತು ಕುಮಾರರಾಮ ಈ ವಂಶದ ಪ್ರಸಿದ್ಧ ಅರಸರು, ಮುಮ್ಮಡಿ ಸಿಂಗೆನಾಯಕನಿಗೆ ಮಹಾನಾಯಕಚಾರ್ಯ ಎಂಬ ಬಿರುದಿತ್ತು. ಕುಮಾರರಾಮನ ಸಹೋದರಿ ಮಾರಾಂಬಿಕೆಯನ್ನು ಸಂಗಮ ಮದುವೆಯಾಗಿದ್ದನು. ಈತನಿಗೆ ಐದು ಜನ ಮಕ್ಕಳು: ಮಾರಣ್ಣ, ಮಾದಪ್ಪ, ಕಂಪಣ, ಹರಿಹರ ಮತ್ತು ಬುಕ್ಕರಾಯ. ವಿಜಯನಗರಕ್ಕೆ ಅಡಿಗಲ್ಲು ಕುಮ್ಮಟದುರ್ಗವೆ. ತುಳುವ ಸಂತತಿ ತಳವಾರ ಸಂತತಿಯಿಂದ ವಿಕಾಸವಾದುದು. ತಳವಾರ ಈಶ್ವರನಾಯಕ, ನರಸನಾಯಕ ಮತ್ತು ಶ್ರೀಕೃಷ್ಣದೇವರಾಯ ಈ ವಂಶದ ಪ್ರಸಿದ್ಧ ಅರಸರು.

ವಿಜಯನಗರ ಸಾಮ್ರಾಜ್ಯದಲ್ಲಿ ಬೇಡರು ಬೇಟೆ ಮತ್ತು ಪಶುಪಾಲನೆಯಲ್ಲಿ ತೊಡಗಿದ್ದರಲ್ಲದೆ, ತಳವಾರಿಕೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದರು. ಹಂಪಿ ಬಳಿ ಇರುವ ಬೇಟೆಕಾರರ ಹೆಬ್ಬಾಗಿಲು, ತಳವಾರಘಟ್ಟವು ಮೇಲಿನ ಸಂಗತಿಗಳಿಗೆ ಉದಾಹರಣೆಯಾಗಿದೆ. ಬೇಡರಪಡೆ, ಖಾಸಾಬೇಡರಪಡೆ ಮತ್ತು ಮೀಸಲು ಪಡೆಗಳು ಸ್ಥಳೀಯ ಬೇಡ – ನಾಯಕರ ಪಡೆಗಳಾಗಿದ್ದವು. ವಿಜಯನಗರದ ಸೈನಿಕರು ೧೫೬೫ ಜನವರಿ ೨೩(೨೬)ರಲ್ಲಿ ಸು.೪೦ ಸಾವಿರ ಬೇಡ ಪಡೆ ರಕ್ಕಸತಂಗಡಿ ಯುದ್ಧದಲ್ಲಿ ಹತರಾದರೆಂದು ತಿಳಿಯುತ್ತದೆ (ಪಿರಿಸ್ತಾ). ೧೫೬೮ರಲ್ಲಿ ಸದಾಶಿವರಾಯ ಬೇಡರಿಗೆ ಸ್ವಾಯತ್ತತೆಯನ್ನು ದಯಪಾಲಿಸಿದ್ದು ಸ್ಪಷ್ಟ. ಕಾಮಗೇತಿ ಮದಕರಿಗೆ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಭಾಗವನ್ನು ಬಿಟ್ಟುಕೊಟ್ಟು ಪಾಳೆಯಗಾರರಾಗಲು ತಿಳಿಸಿದ್ದರು. ಜರಿಮಲೆ, ಗುಡೇಕೋಟೆ, ಚಿತ್ರದುರ್ಗ, ತರೀಕೆರೆ, ರಾಯದುರ್ಗ, ಹರಪನಹಳ್ಳಿಗಳು ವಿಜಯನಗರದ ಪೋಷಣೆಯಿಂದಲೇ ಜನ್ಮ ತಾಳಿದವು. ವಿಜಯನಗರ ತರುವಾಯ ಎಪ್ಪತ್ತೇಳು ಪಾಳೆಯಪಟ್ಟುಗಳು ಹುಟ್ಟಿಕೊಂಡವು. ಹೀಗೆ ಆಡಳಿತ ನಡೆಸುವ ಅವಧಿಯಲ್ಲಿ ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನನ ಧಾಳಿಗೆ ತುತ್ತಾಗಿ ಚೇತರಿಸಿಕೊಳ್ಳುವಾಗಲೆ ಬ್ರಿಟಿಷರ ಬರ್ಬರ ಆಳ್ವಿಕೆ ಗಾಯದ ಮೇಲೆ ಬರೆ ಎಳೆದಂತಾಯಿತು. ತರೀಕೆರೆ ಪಾಳೆಯಗಾರರ ಸರ್ಜಾ ಹನುಮಪ್ಪನಾಯಕ (೧೮೩೪), ಹಲಗಲಿ ಬೇಡರು (೧೮೫೭), ಸುರಪುರದ ವೆಂಕಟಪ್ಪನಾಯಕ (೧೮೫೮) ಮತ್ತು ಸಿಂಧೂರ ಲಕ್ಷ್ಮಣ (೧೯೨೪) ಮೊದಲಾದವರು ಬ್ರಿಟಿಷರ ವಿರುದ್ಧ ಹೋರಾಟ ಮಾಡಿರುವುದು ಸ್ಮರಣೀಯ.

ಬೇಡರ ಸಾಂಸ್ಕೃತಿಕ ಚರಿತ್ರೆ ಬಹುಶ್ರೀಮಂತವಾದುದು. ವೀರಗಲ್ಲು, ಮಹಾಸತಿಕಲ್ಲುಗಳಲ್ಲದೆ, ಬೇಡರಪಡೆ, ಮೀಸಲುಪಡೆ ಬಗ್ಗೆ ಆಧಾರಗಳಿವೆ. ಬಿಲ್ಲು, ಬಾಣ, ಬಿಲ್ಲಗಾವುಂಡ, ಬೇಟೆಯ ತಿಪ್ಪೆನಾಯಕನ ಬಗ್ಗೆ ಹಳೆಬೀಡಿನ ಶಾಸನ ತಿಳಿಸುವುದು. ಬೇಟೆಗೌಡ ಎಂದು ಹೊಯ್ಸಳರ ಶಾಸನಗಳಲ್ಲಿ ತಿಳಿಸಲಾಗಿದೆ. ಬೇಡಗಂಪಣದ ಬಗ್ಗೆಯೂ ವಿವರವಿದೆ. ಮೆಕೆಂಜಿ ಮೊದಲಾದವರು ತಳವಾರಿಕೆ, ಕಾವಲುಗಾರಿಕೆ ಬಗ್ಗೆಯೂ ತಿಳಿಸಿದ್ದಾರೆ. ಬುಚ್ಚಪ್ಪನಾಯಕನ ಬಗ್ಗೆ ಶಾಸನದ ಉಲ್ಲೇಖವಿದೆ. ಬೇಡರಿಗೂ, ಕುರುಬರಿಗೂ ಇದ್ದ ವೈರುಧ್ಯವನ್ನು ಈ ಶಾಸನಗಳಲ್ಲಿ ತಿಳಿಸಲಾಗಿದೆ. ಬೇಡ ಸಂಸ್ಕೃತಿ, ಹನುಮಪ್ಪನಾಯಕ, ಬ್ಯಾಡರ ನಾಯಕರು, ನಾಯಿ, ಬಡಿಕೋಲು, ಬೇಟೆಗಾರರು ಮೊದಲಾದ ಕಡೆ ಗುಡೇಕೋಟೆ, ಜರಿಮಲೆ, ಬಾಣವಾರ ಮೊದಲಾದವರೊಂದಿಗೆ ಸಂಬಂಧ ಬಳಸಿದ್ದರು. ತಲಕಾಡು ಸೃಷ್ಟಿಯಾದದ್ದು ಸಹಾ ತಲ ಮತ್ತು ಕಾಡ ಎಂಬ ಬೇಡ ಸಹೋದರರಿಂದ ಎಂಬುದು ಪ್ರತೀತಿ. ಬೇಡರು ನಿಜಕ್ಕೂ ಬೇಟೆಗಾರರೇ ಆಗಿದ್ದರು. ಬ್ಯಾಡರಹಳ್ಳಿ, ಬೇಟೆಯಸುಂಕ, ಬೇಟೆಗಾರ, ತುಲುವಯೋಧ, ಜನಾಂಗ, ಕ್ಷತ್ರಿಯರು, ಸೈನಿಕರು, ಗುರಿಕಾರ, ದಾರಿಹೋಕರ ಲೂಟಿ, ಪ್ರಾಣಿ ಹತ್ಯೆಗಳಲ್ಲಿ ಮತ್ತು ಹೀನ ಕೃತ್ಯಗಳಲ್ಲಿ ತೊಡಗಿದ್ದ ಬೇಡರ ಬಗ್ಗೆ ವಿವರಗಳಿವೆ.

ಕರ್ನಾಟಕದಲ್ಲಿರುವ ಬೇಡರು ಆಯಾ ಪ್ರಾದೇಶಿಕತೆಗೆ ತಕ್ಕಂತೆ ಜೀವನ ವಿಧಾನವನ್ನು ರೂಪಿಸಿಕೊಂಡಿದ್ದಾರೆ. ಶ್ರೀಶೈಲ ಭಾಗದಿಂದ ಬಂದ ಬೇಡರ ಸಂಸ್ಕೃತಿ ಏಕಪ್ರಕಾರವಿಲ್ಲ. ಕಾರಣ ಹರಿದು ಹಂಚಿಹೋದ ಕರ್ನಾಟಕದಲ್ಲಿ ಬ್ರಿಟಿಷರ ಆಳ್ವಿಕೆಯಿಂದ ಪ್ರಾಂತ್ಯಗಳು ವಿಭಾಗವಾಗಿದ್ದವು. ಮದ್ರಾಸ್ ಕರ್ನಾಟಕ, ಮುಂಬಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮೈಸೂರು ಸಂಸ್ಥಾನಗಳು ಪ್ರತ್ಯೇಕವಾಗಿದ್ದವು. ಹಾಗಾಗಿ ಈ ಭಾಗಗಳಲ್ಲಿದ್ದ ಬೇಡರನ್ನು ವಿಶಿಷ್ಟವಾಗಿ ಚಿತ್ರಿಸಿದ್ದಾರೆ.

ಕರ್ನಾಟಕದ ಮ್ಯಾಸನಾಯಕರ ಚರಿತ್ರೆ ಮತ್ತು ಸಂಸ್ಕೃತಿಯನ್ನು ಐತಿಹಾಸಿಕ ದೃಷ್ಟಿಕೋನದಿಂದ ನೋಡುವ ಅಗತ್ಯವಿದೆ. ಇವರ ಮೂಲ, ಪ್ರಾಚ್ಯಾವಶೇಷಗಳು, ವಾಸಿಸುವ ಸ್ಥಳ, ಗುಣ – ಲಕ್ಷಣ ವಿಸ್ತರಣೆಯನ್ನು ಗುರುತಿಸಬಹುದಾಗಿದೆ. ಇತಿಹಾಸ ಪೂರ್ವಕಾಲದಿಂದ ಇವರ ಜೀವನ ಮತ್ತು ಸಂಸ್ಕೃತಿ ಬಹುವಿಶಾಲ ಹಾಗೂ ವಿಭಿನವಾದುದು. ವೇದ, ಮಹಾಕಾವ್ಯಗಳ ಕಾಲದಲ್ಲಿಯು ಮ್ಯಾಸನಾಯಕರ ಪರಂಪರೆಯನ್ನು ಕಾಣಬಹುದಾಗಿದೆ. ಇವರು ಕನ್ನಡ ನಾಡು – ನುಡಿಗೆ, ತಮ್ಮದೇ ಚಾರಿತ್ರಿಕ ಕೊಡುಗೆಯನ್ನು ಕೊಟ್ಟಿದ್ದಾರೆ.

ಕರ್ನಾಟಕದಲ್ಲಿರುವ ಐವತ್ತು ಬುಡಕಟ್ಟುಗಳಲ್ಲಿ ಬೇಟೆ, ಪಶುಪಾಲನೆ ಮತ್ತು ಕೃಷಿಯನ್ನು ಇಂದಿಗೂ ಉಳಿಸಿಕೊಂಡು ಬಂದವರು ಮ್ಯಾಸನಾಯಕರು. ಇವರು ಕರ್ನಾಟಕ ರಾಜ್ಯದ ಮಧ್ಯಭಾಗದ ಪೂರ್ವದಲ್ಲಿ ವ್ಯಾಪಕವಾಗಿ ನೆಲಸಿರುತ್ತಾರೆ. ಮ್ಯಾಸನಾಯಕರು ಮೂಲತಃ ತೆಲುಗು ಭಾಷಿಕರು. ಬಹುತೇಕ ತಮ್ಮ ಮೂಲ ನೆಲೆಗಳನ್ನು ಆಂಧ್ರದೊಡನೆ ಗುರುತಿಸಿಕೊಳ್ಳುತ್ತಾರೆ. ವಲಸೆಮೂಲಿ ಪರ್ಯಟನೆಗೊಂಡು ಬೆಟ್ಟ – ಗುಡ್ಡ, ಅಡವಿ, ಹಳ್ಳ – ಕೊಳ್ಳಗಳಲ್ಲಿ ನೆಲಸಿ ಇಂದು ಪ್ರತ್ಯೇಕ ಹಟ್ಟಿ, ತೋಟಗಳಲ್ಲಿ ವಾಸಿಸುತ್ತಿದ್ದಾರೆ. ಆಯಾ ಪ್ರಾಂತ್ಯಗಳ ಸಂಸ್ಕೃತಿಗೆ ಬೇಡರು ಬೆಸೆದುಕೊಂಡಿದ್ದರಿಂದ ಈ ಸಾಂಸ್ಕೃತಿಕ ಭಿನ್ನತೆ ಅನಿವಾರ್ಯ.

ಎಲ್ಲ ಬುಡಕಟ್ಟಿನ ಮೂಲದಂತೆ ಇವರ ಮೂಲವು ಪುರಾಣ, ಐತಿಹ್ಯಗಳಿಂದ ಹೊರತಾಗಿಲ್ಲ. ಸಸ್ಯ, ಪ್ರಾಣಿ, ನೆಲ, ಜಲ, ಪಕ್ಷಿ ಇತರ ಸಜೀವ, ನಿರ್ಜೀವ ವಸ್ತುಗಳನ್ನು ತಮ್ಮ ಇತಿಹಾಸಕ್ಕೆ ಮೌಖಿಕ ಪರಂಪರೆಯನ್ನಾಗಿ ನಂಬಿದ್ದಾರೆ. ಪಂಪಾದ್ರಿಬಸವ ಎಂಬ ಒಂಟಿಕೋಡು ಬೆಳ್ಳಿ ಹಸುವಿನ ಪಾದದ ಚಿಟ್ಟಿಗೊರಸಿನಿಂದ ಇವರು ಹುಟ್ಟಿ ಬರುತ್ತಾರೆ ಎಂಬುದು ದಂತೆಕಥೆಯಾಗಿದೆ. ಈ ವಂಶದ ಮೂಲ ಪುರುಷನೊಬ್ಬ ಪಶುಗಳ ಮಂದೆಯಲ್ಲಿ ಹುಟ್ಟಿದ. ಅವನ ಹೆಸರು ಮಂದಭೂಪಾಲ. ದಾನಸಾಲಮ್ಮನ ಸಂತತಿ ಆಗಿನಿಂದಲೇ ಹುಟ್ಟಿತು. ಮದುವೆಯಾಗುವ ಪೂರ್ವದಲ್ಲಿಯೇ ಇವಳು ಸೂರ್ಯನನ್ನು ಮೋಹಿಸಿ ೭ ಜನ ಗಂಡುಮಕ್ಕಳನ್ನು ಪಡೆಯುತ್ತಾಳೆ. ಅವರಲ್ಲಿ ಭಾನುಕೋಟಿರಾಜು, ಯರಬೊಮ್ಮತಿರಾಜು, ಸೆಟ್ಟ ಪಟ್ಟಪ್ಪರಾಜ, ಸೂರಪ್ಪರಾಜ, ಸೊಟ್ಟಪ್ಪರಾಜು, ತಿಪ್ಪಂಡರಾಜು, ಪಾಪನ್ನರಾಜು ಪ್ರಮುಖರಾಗಿದ್ದಾರೆ.

ಆದಿವಾಸಿ ಮತ್ತು ಗಿರಿಜನರಾದ ಮ್ಯಾಸನಾಯಕರು ಸಸ್ಯ, ಪ್ರಾಣಿ, ಭೌಗೋಳಿಕ ಸಂಕೇತಗಳನ್ನು ತಮ್ಮ ಮನೆತನಕ್ಕೆ, ಮಕ್ಕಳಿಗೆ, ಕುಲಕ್ಕೆ, ಬೆಡಗಿಗೆ ಹೆಸರು ಇಟ್ಟಿರುವುದಕ್ಕೆ ಒಂದು ಅರ್ಥವಿದೆ. ಇವರ ಭಾಷೆ, ಜೀವನಕ್ರಮ, ವೈವಾಹಿಕ ಪದ್ಧತಿ, ಸಂಪ್ರದಾಯ, ನಡೆ – ನುಡಿ, ಧಾರ್ಮಿಕ ಆಚರಣೆ, ಧರ್ಮದ ಆಚರಣೆ, ಧರ್ಮದ ನಂಬಿಕೆ, ಮಡಿಮೈಲಿಗೆ ಇತರ ಸಂಗತಿಗಳು ಇವರ ಅಭಿವೃದ್ಧಿ ಮೇಲೆ ಪ್ರಭಾವಿಸಿವೆ. ಕೋಳಿ ತಿನ್ನಬಾರದೆನ್ನುವ ನಂಬಿಕೆ ಮ್ಯಾಸನಾಯಕರಲ್ಲಿದೆ. ಹಂದಿ (ವರಹ) ಹುಲುಸಾದ ಪ್ರಾಣಿ, ಇದನ್ನು ಬೇಟೆಯಾಡಿ ತಂದು ಊರಲ್ಲಿ ಮೆರವಣಿಗೆ ಮಾಡಿ ಅದರ ಮುಂಭಾಗದ ಚರ್ಮ, ಉಗುರು, ಬಾಲ, ಕಿವಿ ಹೀಗೆ ಕೆಲವು ಅಂಗಗಳ ಸ್ವಲ್ಪ ಚರ್ಮವನ್ನು ಕೊಯ್ದು ಹುಲುಸು ಎಂದು ಭಾವಿಸಿ ಊರಿನ ಬುಡ್ಡೆಕಲ್ಲಿನ ಬಳಿ ಹೂಳುತ್ತಾರೆ. ಇದರಿಂದ ಊರಿಗೆ ಒಳ್ಳೆಯದಾಗುವುದು, ಶ್ರೀ ಸಂಪತ್ತು ಲಭಿಸುವುದೆಂಬ ನಂಬಿಕೆಯಿದೆ. ಇವರು ಮಧ್ಯಪಾನ ಮಾಡುತ್ತಿರಲಿಲ್ಲ. ಕೋಳಿ – ಹಂದಿಯನ್ನು ತಿನ್ನುತ್ತಿರಲಿಲ್ಲ. ಇಡೀ ಹಟ್ಟಿಗೆ ಈ ಪ್ರಾಣಿಗಳು ನಿಷೇದವಾಗಿವೆ. ಧರ್ಮ – ನಂಬಿಕೆ, ಆಚರಣೆ, ಸಂಪ್ರದಾಯಗಳನ್ನು ಗಾಢವಾಗಿ ರೂಪಿಸಿಕೊಂಡಿದ್ದಾರೆ. ಕೆಲವು ವಸ್ತುಗಳನ್ನು ಮುಟ್ಟಬಾರದೆನ್ನುವ ಮಡಿ – ಮೈಲಿಗೆ ಇದೆ. ಇವರು ವಾಸಮಾಡುವ ಹಟ್ಟಿಗೆ ತಮ್ಮ ಯಜಮಾನನ ಹೆಸರನ್ನು ಇಟ್ಟಿರುತ್ತಾರೆ. ಇವರದು ಮುಖ್ಯ ಉದ್ಯೋಗ ಪಶುಪಾಲನೆ – ಪಶುಸಂಗೋಪನೆ. ಬೇರೆ ಬೇರೆ ಬುಡಕಟ್ಟುಗಳಿಗಿಂತ ಇವರ ನಂಬಿಕೆ, ಆಚಾರ – ವಿಚಾರಗಳು ಭಿನ್ನ. ಇವರು ವರ್ಣಾಶ್ರಮ ನೀತಿಯನ್ನು ಎಂದೂ ಒಪ್ಪಿಕೊಂಡಿಲ್ಲ. ದೇವರ ಬಗ್ಗೆ ಇವರ ಸಂಪ್ರದಾಯಗಳು ವಿಶಿಷ್ಟವಾಗಿವೆ.

ಮ್ಯಾಸನಾಯಕರು ಯಾವುದೇ ಸರ್ಕಾರಿ ಕಚೇರಿ, ಪೊಲೀಸ್‌ಠಾಣೆ, ನ್ಯಾಯಾಲಯಕ್ಕೆ ಹೋಗದೆ ವ್ಯಾಜ್ಯಗಳನ್ನು ತಮ್ಮ ತಮ್ಮಲ್ಲಿಯೇ ಬಗೆಹರಿಸಿಕೊಳ್ಳುತ್ತಿದ್ದರು. ಅವುಗಳಿಗೆ ಕಟ್ಟೆಮನೆಗಳೆಂದು ಹೆಸರು. ನನ್ನಿವಾಳ, ನಾಯಕನಹಟ್ಟಿ, ಗೋನೂರು ಅಂದಿನ ಮೂರು ಕಟ್ಟೆಮನೆಗಳು. ಇಲ್ಲಿ ೩ ಜನ ನಾಯಕರು. ಬೋಸೆನಾಯಕ, ಮೀಸಲು ನಾಯಕ ಮತ್ತು ಗಟ್ಟಿಮುತ್ತನಾಯಕ. ಕಾಮಗೇತನಹಳ್ಳಿ, ಕಾಟಪ್ಪನಹಟ್ಟಿಗಳು ಸಹಾ ಆಚಾರ – ವಿಚಾರದ ಕಟ್ಟೆಮನೆಗಳಾಗಿದ್ದವು. ಒಟ್ಟಾರೆ ಇದಕ್ಕೆ ಮ್ಯಾಸಮಂಡಳಿ ಅಥವಾ ಬುಡಕಟ್ಟು ಸಂವಿಧಾನ ಎನ್ನುತ್ತಾರೆ. ಇವರಲ್ಲಿ ೭ ಜನ ದೊರೆಗಳು, ೯ ಜನ ಹಿರಿಯರು ಇರುತ್ತಿದ್ದರು. ಕಾಮಗೇತಿ, ನಲಗೇತಿ, (ಯರಗೋತಿ) ಬೋಡೆಬಲ್ಲುಡ್ಲು ಎಂಬ

ಮೂರು ಜನ ಪೂಜಾರಿಗಳಿದ್ದರು. ೩ ಜನ ದಾಸರೆಂದರೆ ಬೋಡದಾಸರಿ, ಮುಂಡಾಸುದಾಸರಿ (ಪೇಟ) ಮತ್ತು ಕೊಡಗು ದಾಸರಿ (ಛತ್ರಿ). ಇವರೆಲ್ಲ ತಮ್ಮ ಬುಡಕಟ್ಟಿನ ಕಟ್ಟೆಮನೆ (ನ್ಯಾಯಸ್ಥಾನ) ವ್ಯಾಜ್ಯ, ವಿವಾದಗಳನ್ನು ಬಗೆಹರಿಸುವ ನ್ಯಾಯಪೀಠ, ಮದುವೆ, ದೇವರು ಇತರ ಬೇಡ ಸಂಸ್ಕೃತಿಗೆ ಸಂಬಂಧಿಸಿದಂತೆ ಗುಡಿಕಟ್ಟು ಮುಖ್ಯಸ್ಥಾನ ಹೊಂದಿರುತ್ತದೆ. ಇವರು ಅಮವಾಸೆ ದೇವರು ಮತ್ತು ಹುಣ್ಣಿಮೆ ದೇವರನ್ನು ಪೂಜಿಸುವರು.

ಇವರಲ್ಲಿ ನೀತಿನಿರ್ಬಂಧಗಳು ಕಠಿಣವಾಗಿದ್ದವು. ಮಂದಲೋರಲ್ಲಿ ಅದೇ ಬೆಡಗಿನವರು (ಒಂದೇ ಬೆಡಗಿನವರು) ಮದುವೆ ಆಗುವುದಿಲ್ಲ. ಅದು ಆಚಾರದ ವಿರುದ್ಧವಾದ ಕ್ರಮವೆಂದು ಪರಿಗಣಿಸಲಾಗುವುದು. ಯಾವುದೋ ಕಾಲಕ್ಕೆ ಅಣ್ಣತಮ್ಮಂದಿರ ನಡುವೆ, ನೆಂಟರ ನಡುವೆ ಹೆಣ್ಣನ್ನು ಕೊಟ್ಟು – ತೆಗೆದುಕೊಳ್ಳುವಾಗ ಸಮಸ್ಯೆಯಾಗಿ ಮಂದೆಯಲ್ಲಿ ಮಂದ (ಮತ್ತೊಂದು) ಎಂದು ಮುರಿದು ತಿರುಗ ಮಂದೆ ಕಟ್ಟಿಕೊಂಡರು. ಮದುವೆಯಲ್ಲಿ ಇವರು ಕೃಷಿ ಉಪಕರಣಗಳನ್ನು ಬಳಸುತ್ತಾರೆ. ಧಾರೆ ಎರೆಯುವಾಗ ಕತ್ತಿ ರಾತ್ರಿ ಮನೆಯ ಮುಂದೆ ಅಕ್ಕಡಿಕೊಳ್ಳ, ಹಗ್ಗ, ಸಾಮಾನುಗಳನ್ನು ಹೆಗಲ ಮೇಲೆ ಇಟ್ಟುಕೊಂಡಿರುತ್ತಾರೆ. ಇವೆಲ್ಲವನ್ನು ನೋಡಿದರೆ ಇಂದು ಶೈವ – ವೈಷ್ಣವ ಧರ್ಮಗಳಿಗೆ ಸೇರಿದ ಇವರು ಬೇಟೆ, ಪಶುಪಾಲನೆ ಮತ್ತು ಕೃಷಿ ಮೂಲದ ಬುಡಕಟ್ಟು ಆಚಾರ – ವಿಚಾರಗಳಿಗೆ ಭಂಗ ತಂದುಕೊಂಡಿದ್ದಾರೆ.

ಗೋಪಾಲಕರಾದ ಮ್ಯಾಸನಾಯಕರು ಇಂದಿಗೂ ದೇವರೆತ್ತುಗಳನ್ನು ಪಾಲನೆ ಮಾಡಿಕೊಂಡು ಬಂದಿರುತ್ತಾರೆ. ಶ್ರೀಶೈಲಮಲ್ಲಿಕಾರ್ಜುನನ ಎತ್ತುಗಳೆಂದು ಇವುಗಳಿಗೆ ಕರೆಯುತ್ತಾರೆ. ಮೊದಲು ಸೂರ್ಯ, ಚಂದ್ರರನ್ನು ಪೂಜಿಸಿದ ನಂತರ, ದೇವರತ್ತುಗಳನ್ನು ಆರಾಧಿಸುವರು. ರೊಪ್ಪಕಟ್ಟಿ (ಮಂದೆ ಅಥವಾ ತುರುಮಂದೆ), ಲಕ್ಕಿಸೊಪ್ಪು, ತಂಗಡಿಸೊಪ್ಪು, ಅಗ್ನಿಕುಂಡ, ಉದಿ – ಪದಿ ಹಾಕುತ್ತಾರೆ. ದೇವರೆತ್ತುಗಳಿಗೆ ಪ್ರತಿದಿನ ಈ ರೀತಿ ಹಾಕುವುದು ಪೂಜೆಯಷ್ಟೇ ಪವಿತ್ರವಾದ ಕಾರ್ಯವೆನ್ನುತ್ತಾರೆ. ಇದರ ಬೂದಿಯನ್ನು ಮುತ್ತಿಗಾರಬೊಟ್ಟು, ವಿಭೂತಿ ಎಂದು ಹಣೆಗೆ ಇಟ್ಟುಕೊಳ್ಳುತ್ತಾರೆ.

ಭೂತಕಾಲದ ಜೀವನಕ್ರಮ ಗುಡ್ಡಗಾಡುಗಳಲ್ಲಿ, ವರ್ತಮಾನಕಾಲದ ಜೀವನಹಟ್ಟಿಗಳಲ್ಲಿ ಮತ್ತು ಭವಿಷತ್ತಿನಲ್ಲಿ ಆಧುನಿಕ ಸಂಸ್ಕೃತಿ ಮತ್ತು ನಾಗರಿಕತೆಯ ಪ್ರಭಾವದಿಂದ ಮ್ಯಾಸನಾಯಕರು ಮಹಾಪರಿವರ್ತನೆ ಘಟ್ಟ ತಲುಪಿದ್ದಾರೆ. ಈ ಎಲ್ಲ ಸಂಕ್ರಮಣ ಸ್ಥಿತಿಯಲ್ಲಿ ಆಚಾರ, ವಿಚಾರ, ಕೃಷಿ, ಪಶುಪಾಲನೆ, ಕುರಿಸಾಕಾಣಿಕೆ, ದೇವರೆತ್ತುಗಳ ಪಾಲನೆ ಇವೆಲ್ಲವು ಬದಲಾಗುವ ಲಕ್ಷಣಗಳಿವೆ.

ಬುಡಕಟ್ಟು ಜನರಾದ ಮ್ಯಾಸನಾಯಕರಲ್ಲಿ ಹುಟ್ಟು, ಋತುಮತಿ, ಮದುವೆ, ಶವಸಂಸ್ಕಾರ ಪದ್ಧತಿಗಳಿವೆ. ಆರ್ಯರ ಪ್ರಭಾವ, ದ್ರಾವಿಡ ಸಂಸ್ಕೃತಿಯ ಪ್ರಭಾವವನ್ನು ಈ ಆಚರಣೆಗಳಲ್ಲಿ ಕಾಣಬಹುದು. ಇವರು ತೆಲುಗುಭಾಷೆಯನ್ನು ಮಾತೃಭಾಷೆಯಾಗಿ ಹೊಂದಿರುವರು. ಆಂಧ್ರಮೂಲದಿಂದ ಬಂದು ದೇವರೆತ್ತುಗಳನ್ನು ಮೇಯಿಸಿಕೊಂಡು ಗೋವುಗಳ ಗುಂಪುಗಳೊಂದಿಗೆ, ಬಿದಿರು ಪುಟ್ಟಿಗಳಲ್ಲಿ ಸಾಲಿಗ್ರಾಮಗಳನ್ನು ತರುತ್ತಾರೆ. ವಲಸೆ ಜೀವನ ಇವರದು ಹಾಗಾಗಿ ಪೆಟ್ಟಿಗೆ ದೇವರನ್ನು ಹೆಚ್ಚಾಗಿ ಹೊಂದಿದ್ದರು.

ಇವರಲ್ಲಿ ಸಂಕೀರ್ಣಜಾತಿ, ವರ್ಣಸಂಕರ, ಜಾತಿಬಾಹಿರರಾದ ಉದಾಹರಣೆಗಳಿವೆ. ಬ್ರಾಹ್ಮಣರ ಒಂದು ಹೆಣ್ಣು ಅನಾಥಳಾಗಿ ಬೇಡನನ್ನು ಮದುವೆಯಾಗಿ (ಆರ್ಯರು) ನಲ್ಲಬಾಪಲು ಎಂದು ಒಂದು ಬೆಡಗಿನವರಾದರು. ಹಿಂದೂ ಧರ್ಮದ ಬೇಡರ ರಾಜ ನನ್ನಮ್ಮನ ಮದುವೆಯಾಗುವುದರ ಮೂಲಕ ಮುಂಜಿ ಮ್ಯಾಸರಾದರು (ಮುಸ್ಲಿಂ – ಹಿಂದೂ). ಒಂದು ಕಾಲಕ್ಕೆ ಲಂಬಾಣಿಗರು – ಗೊಲ್ಲರು ಬೇಡರಲ್ಲಿ ಬಂದು ಸೇರಿಕೊಳ್ಳುವುದುಂಟು. ಯಾವುದೇ ಜಾತಿಯಲ್ಲಿ ಕಟ್ಟುನಿಟ್ಟಿನ ಕ್ರಮಗಳಿಂದ ಜಾತಿಬಾಹಿರರಾದವರನ್ನು, ದೀನದಲಿತರು, ಶೋಷಿತರನ್ನು ಯರಮಂಚಿನಾಯಕ ಎಂಬ ಬೇಡರದೊರೆ ಜಾತಿ – ಮತ ಇಲ್ಲದವರಿಗೆ ಒಂದು ನೆಲೆಯನ್ನು ಕಲ್ಪಿಸಿದನು. ಆಗಿನಿಂದ ಮ್ಯಾಸನಾಯಕರ ನೆರೆಹೊರೆಯರ ಯಾವುದೇ ಜಾತಿಯರಾಗಿರಲಿ ಸೌಹಾರ್ದಯುತವಾಗಿ ಜೀವನ ನಡೆಸುತ್ತಾರೆ. ದೀಪಾವಳಿ, ಗುಗ್ಗರಿಹಬ್ಬ, ಶಿವರಾತ್ರಿ, ಯುಗಾದಿ ಇತರ ಹಬ್ಬಗಳಲ್ಲಿ ಇವರ ವೈಶಿಷ್ಟ್ಯತೆ ಕಂಡುಬರುತ್ತದೆ. ಶೈವಧರ್ಮದವರು ಶ್ರೀಶೈಲ ಮಲ್ಲಿಕಾರ್ಜುನನ ಎತ್ತುಗಳನ್ನು ಪ್ರತ್ಯೇಕಿಸಿದರೆ, ವೈಷ್ಣವರು ಕಂಪಳರಂಗ ಸ್ವಾಮಿಯನ್ನು ಪೂಜಿಸುವರು. ಇವರಲ್ಲಿರುವ ೧೨ ಪೆಟ್ಟಿಗೆ ದೇವರುಗಳಿಗೆ ದೊರೆ

ಯರಮಂಚಿನಾಯಕ ಕುದಾಪುರದ ಬೋರೇದೇವರ ಹತ್ತಿರ ತನ್ನ ಮಗನನ್ನೆ (ವಾಸಿ) ಬಲಿಕೊಟ್ಟನಂತರ ಮ್ಯಾಸನಾಯಕರಲ್ಲಿ ಎರಡು ಪಂಗಡಗಳಾದವು.

ಇಂದಿಗೂ ಮ್ಯಾಸನಾಯಕರಲ್ಲಿ ಎರಡು ವಂಶಗಳಿವೆ. ಚಂದ್ರವಂಶ ಮತ್ತು ಸೂರ್ಯವಂಶ. ಮಂದಲಾರು ಪಂಗಡಕ್ಕೆ ಸೇರಿದವರಿದ್ದಾರೆ. ಕಾಮಗೇತಿ, ಗಾದ್ರಪಾಲೋರು, ಬುಲ್ಲುಡ್ಲು, ಮಾಸಲೋರು, ಸಾಕೆಲಾರು ಮತ್ತಿತರರು. ಇದೇ ರೀತಿ ಸೂರ್ಯವಂಶದಲ್ಲಿ ಮಲ್ಲಿನಾಯಕನ ಪಂಗಡದವರಿದ್ದಾರೆ. ಚಂದ್ರವಂಶದಲ್ಲಿ ಬರುವ ಕಾಮಗೇತಿ ಬೆಡಗಿನವರು ಬುಡಕಟ್ಟು ಧರ್ಮದಲ್ಲಿ ಮತ್ತು ರಾಜ್ಯಾಡಳಿತದಲ್ಲಿ ಬಹುದೊಡ್ಡ ಸಾಧನೆ ಮಾಡಿದ್ದಾರೆ. ಚಿತ್ರದುರ್ಗದ ಪಾಳೆಯಗಾರರಾಗಿ ಕಾಮಗೇತಿ ನಾಯಕ ಅರಸರು. ಇನ್ನೂರ ಹನ್ನೊಂದು ವರ್ಷಗಳ ಕಾಲ ಆಳಿದ್ದು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅದೇ ರೀತಿ ಮೊಳಕಾಲ್ಮೂರು, ನಾಯಕನಹಟ್ಟಿ, ಗುಡೆಕೋಟೆ, ಜರಿಮಲೆ, ಬಸವಾಪಟ್ಟಣ ಮೊದಲಾದ ಪಾಳೆಯಗಾರರಿಗೂ ಇವರಿಗೂ ಸಂಬಂಧವಿತ್ತು.

ಕಾಮಗೇತಿ ಬೆಡಗಿನವರು ಶೈಕ್ಷಣಿಕವಾಗಿ, ರಾಜಕೀಯವಾಗಿ ಇಂದು ಉತ್ತಮ ಸಾಧನೆಯಲ್ಲಿ ತೊಡಗಿರುವರು. ಮ್ಯಾಸನಾಯಕರಲ್ಲಿ ಮಂದಲಾರು, ಮಲ್ಲಿನಾಯಕನಾರು, ಎರಡು ವಂಶಗಳ ಸದಸ್ಯರು ತಮ್ಮ ಪಂಗಡ, ಕಟ್ಟೆಮನೆ, ಗುಡಿಕಟ್ಟಿನ ಅಭಿವೃದ್ಧಿ ಬಗ್ಗೆ ಚಿಂತನೆ ನಡೆಸಿದರು. ಇನ್ನೂ ಕೆಲವರು ಪಾಳೆಯಗಾರರಾದರು. ಪೂಜಾರಿಕೆ, ತಳವಾರಿಕೆ, ಪಾಳೆಯಗಾರಿಕೆ ಹಾಗೂ ನಾಯಕತನಗಳು ಮ್ಯಾಸನಾಯಕರಿಗೆ ತೀರ ಹತ್ತಿರವಾಗಿದ್ದವು.

**೧.೨ ಕಾಮಗೇತಿ : ಅರ್ಥ, ವ್ಯಾಪ್ತಿ ಮತ್ತು ವಿಕಾಸ**

ಭಾರತೀಯ ಚರಿತ್ರೆಯಲ್ಲಿ ಬೇಡ ಬುಡಕಟ್ಟಿಗೆ ಪ್ರಾಚೀನ ಪರಂಪರೆ ಹಾಗೂ ಸಾಂಸ್ಕೃತಿಕ ಮಹತ್ವ ಇರುವುದನ್ನು ಈಗಾಗಲೇ ಗುರುತಿಸಲಾಗಿದೆ. ಕೆಲವರು ಬೇಡರ ಮೂಲವನ್ನು ಭಾರತ ಪರ್ಯಾಯ ದ್ವೀಪದಲ್ಲಿ ಉತ್ತರ ಭಾರತ – ದಕ್ಷಿಣ ಭಾರತ ಹಾಗೂ ಮಧ್ಯಭಾರತವೆಂದು ಕರೆದಿರುತ್ತಾರೆ. ಬುಡಕಟ್ಟು ಹಿನ್ನೆಲೆಯಲ್ಲಿ ಇವರು ಒಂದು ಕಾಲಕ್ಕೆ ಬೇಟೆ, ಪಶುಪಾಲನೆ ಮಾಡುತ್ತಾ ಅಲೆಮಾರಿ ಜೀವನ ನಡೆಸಿದ್ದಾರೆ. ಹಾಗೆಯೇ ಇನ್ನು ಕೆಲವರು ಪಾಳೆಯಗಾರಿಕೆಯೊಂದಿಗೆ ರಾಜ್ಯಭಾರ ನಡೆಸಿ ನಾಗರೀಕತೆ ಮೆರೆಸಿದ್ದಾರೆ. ಮತ್ತೇ ಕೆಲವರು ಕಾಡಿನಲ್ಲಿ ಬೆಟ್ಟಗುಡ್ಡಗಳಲ್ಲಿ ಇಂದಿಗೂ ಆಧುನಿಕ ಪ್ರಪಂಚಕ್ಕೆ ಪರಿಚಯವಾಗದೇ ಉಳಿದಿದ್ದಾರೆ. ಕೆ.ಎಸ್. ಸಿಂಗ್ ದಿ ಷೆಡ್ಯೂಲ್ ಟ್ರೈಬ್ಸ್ ಕೃತಿಯಲ್ಲಿ ಅನೇಕ ಬುಡಕಟ್ಟುಗಳ ಹೆಸರುಗಳನ್ನು ಕೊಟ್ಟಿದ್ದಾರೆ. ಬಿಲ್ ರಾಮೇಶಿ, ಮುಂಡಾ, ಗೊಂಡ ಇತರರ ಬಗ್ಗೆ ವಿವರಗಳಿವೆ. ಅವರು ತಿಳಿಸಿರುವಂತೆ ಬೇಡರು ಜಮ್ಮು ಮತ್ತು ಕಾಶ್ಮೀರದ ಲಡಾಕ್‌ನಿಂದ ವಲಸೆ ಬಂದ ಜನಾಂಗ. ಇವರು ಸಟಲೇಜ್ ದೇವಿ (ನದಿ), ಅಂಬಿಕಾರನ್ನು ಆರಾಧಿಸುತ್ತಾರೆ. ಉತ್ತರ ಭಾರತದಲ್ಲಿ ಇವರು ಬೌದ್ಧಧರ್ಮಿಗಳಾಗಿರುತ್ತಾರೆ. ಹಾಗೆಯೇ ಇತರ ಧರ್ಮಗಳ ಅವಲಂಬಿಗಳಾಗಿರುತ್ತಾರೆ. ಈ ಬೇಡರು ಬಹುತೇಕ ಭೂರಹಿತರು. ಕಟ್ಟಿಗೆ ಮಾರಿ ಜೀವಿಸುವವರು. ಇಂದಿಗೂ ಸ್ವಂತ ಭೂಮಿಯನ್ನು ಹೊಂದಿಲ್ಲ. ದಬ್ಬಾಳಿಕೆ ನಡೆಸುವ ಸಮುದಾಯಗಳ ಮಧ್ಯೆ ಇವರು ಕಠಿಣ ಜೀವನ ನಡೆಸುತ್ತಾರೆ. ಸಂಗೀತ, ವಾದ್ಯಗಳ ಇತರ ಮೂಲಗಳಿಂದ ಭಿಕ್ಷೆ ಬೇಡುತ್ತಾರೆ. ಕಾಮಗೇತಿಗಳು ಉತ್ತರ ಭಾರತದಿಂದ ಬಂದವರು ಎಂಬ ವಾದಕ್ಕೆ ಮೇಲಿನ ಅಂಶಗಳು ಬೆಳಕು ಚೆಲ್ಲುತ್ತವೆ. ಅಲ್ಲದೆ ಸಿಕ್ಕಿಂ ರಾಜ್ಯದಲ್ಲಿ 'ಕಗತಿ' ಎಂಬ ಬುಡಕಟ್ಟು ಇದೆ. ಮಧ್ಯಪ್ರದೇಶದಲ್ಲಿ ಕಮರ್ ಎಂಬ ಬುಡಕಟ್ಟು ಇದೆ (ಪು. ೧೦೨ – ೪೫೩). ಈ ಹಿನ್ನೆಲೆಯಲ್ಲಿ ನಾಯಕರು ತಮ್ಮ ಬೆಡಗು – ಬಳಿ ಉಪಪಂಗಡಗಳನ್ನು ತಮ್ಮ ಧರ್ಮ, ಸಂಸ್ಕೃತಿ ಹಾಗೂ ಕುಟುಂಬಕ್ಕೆ ತಕ್ಕಂತೆ ವರ್ಗೀಕರಿಸಿಕೊಂಡಿದ್ದಾರೆ. ಕಾಮಗೇತಿ ಪದದ ವಿಕಾಸ ಹೀಗಿದೆ: ಕಾಮಕೇತನ>ಕಾಮಗೇತನ>ಕಾಮಗೇತಿ ಎಂದು ರೂಪ ಪಡೆದಿದೆ. ತೆಲುಗಿನಲ್ಲಿ ಈ ಪದವನ್ನು ಕಾಮಗೇತಲಾರು ಎನ್ನುತ್ತಾರೆ.

ಪಿ. ಅಬ್ದುಲ್ ಸತ್ತಾರ್ ರಚಿಸಿರುವ 'ತರೀಕೆರೆಯ ಪಾಳೆಯಗಾರರು' ಎಂಬ ಕೃತಿಯಲ್ಲಿ (೧೯೯೭) ಇವರು ದೊಡ್ಡ ಮದಕರಿನಾಯಕ ರಚಿಸಿರುವ 'ವಾಲ್ಮೀಕಿ ವಂಶರತ್ನಾಕರ' ಕೃತಿಯನ್ನು ಅವಲೋಕಿಸಿದ್ದು, ಹಲವು ಮಹತ್ವದ ವಿಚಾರಗಳನ್ನು ತಿಳಿಸಿದ್ದಾರೆ. ೧೮೨೨ರಲ್ಲಿ

ಸರ್ಜಾರಂಗಪ್ಪನಾಯಕರು ರಚಿಸಿದ 'ವಾಲ್ಮೀಕಿ ವರ್ಣಾಶ್ರಮ ಭಾಸ್ಕರ' ಗ್ರಂಥದಲ್ಲಿ ಗೋತ್ರ, ವಂಶ, ಕುಲಗಳ ವಿಚಾರವಿದೆ. ಬೇಟೆಗಾರರು, ಕಾನನವಾಸಿ, ಗುಡ್ಡಗಾಡು ಜನರಾದ ಬೇಡರು, ಕಿರಾತರು, ಪುಳಿಂದರು, ಶಬರರು ಆದಿಕವಿ ವಾಲ್ಮೀಕಿ ಋಷಿಯ ವಂಶಸ್ಥರೆಂದು ತಿಳಿಸಿದ್ದಾರೆ.

'ಈ ವಾಲ್ಮೀಕಿ ವಂಶದಲ್ಲಿ ೧. ಕಾಮಗೇತಿ ೨. ಮಂದ ೩. ಮಳ್ಳ ೪. ಮುಚ್ಚ ೫. ಮೀನಿಗ ೬. ಮೊಲ್ಲ ೭. ಮಲ್ಯ ಎಂಬ ಏಳು ಜನ ಪುತ್ರರು ಜನಿಸಿದರು. ಇವರಲ್ಲಿ ಜ್ಯೇಷ್ಠನಾದ ಕಾಮಗೇತಿಗೆ ಕನ್ನಪ್ಪಯ್ಯನೆಂಬ ಪುತ್ರನು ಜನಿಸಿದನು. ಇವನೇ ಅತಿಪುರಾತನರಲ್ಲಿ ಶಿವನಿಗೆ ತನ್ನ ಕಣ್ಣುಗಳನ್ನು ಕಿತ್ತುಕೊಟ್ಟ ಶಿವಭಕ್ತ ಕನ್ನಪ್ಪನು ಬೇಡನಾಗಿದ್ದ. ಇಲ್ಲಿ ೬೩ ಪುರಾತನರಲ್ಲಿ ಒಬ್ಬನೆಂದು ಪರಿಗಣಿತನಾದ ಕಣ್ಣಪ್ಪ (ಕನ್ನಪ್ಪ)ನ ವಿಚಾರವಿದೆ. ಈತ ವಾಲ್ಮೀಕಿ ಋಷಿಯ ಮೊಮ್ಮಗ, ಈ ಕಣ್ಣಪ್ಪ – ಕನ್ನಪ್ಪ ಎಂಬ ಹೆಸರು 'ಕೃಷ್ಣ' ಎಂಬ ಹೆಸರಿನ ರೂಢ ನಾಮವನ್ನು ಹೋಲುತ್ತದೆ. ಇದೇ ಕೃತಿಯಲ್ಲಿ 'ಮಹರ್ಷಿ ವಾಲ್ಮೀಕಿಗೆ ಸುವಾಸನೆ ಎಂಬ ಪತ್ನಿ ಇದ್ದಳೆಂದೂ, ಆಕೆಯ ತಂದೆ ಜಗದೇಕನೆಂದೂ ಹೇಳಲಾಗಿದೆ. ಇವರ (ವಾಲ್ಮೀಕಿ + ಸುವಾಸನೆ) ಮಕ್ಕಳೇ ಕಾಮಗೇತಿಯೇ ಮೊದಲಾದ ಏಳು ಜನ. ಈ ಕಾಮಗೇತಿಯ ಮನಗೇ ಶಿವಭಕ್ತ ಕಣ್ಣಪ್ಪ. ಈತ ೬೩ ಪುರಾತನರಲ್ಲಿ ಒಬ್ಬ. ವಾಲ್ಮೀಕಿಗೂ ಈತನಿಗೂ ಹೇಳಲಾಗಿರುವ ಸಂಬಂಧದ ರೀತ್ಯ ಈತ (ಕಣ್ಣಪ್ಪ) ಲವ, ಕುಶರಿಗೆ ಸಮಕಾಲೀನನಾಗುತ್ತಾನೆ. ರಾಮಾಯಣದ ರೀತ್ಯಾ ವಾಲ್ಮೀಕಿಯ ಆಶ್ರಮದಲ್ಲಿ ಈತನ ಸಂಸಾರ ಇದ್ದ ಸಂಗತಿ ಇಲ್ಲ. ಆತ ಇಲ್ಲಿ ಗುರುಕುಲ ಸ್ಥಾಪನೆ ಮಾಡಿಕೊಂಡು ತನ್ನ ಶಿಷ್ಯರೊಂದಿಗೆ ಇದ್ದಂತೆ ಹೇಳಲಾಗಿದೆ (ಪು. ೬ – ೭). ತನ್ನೆರಡು ಕಣ್ಣುಗಳನ್ನು ಅರ್ಪಿಸಿದ ಕಣ್ಣಪ್ಪ ಕಾಮಗೇತಿ ಮಗ ಮತ್ತು ಆ ವಂಶದವನಾಗಿದ್ದಾನೆ. ಕಾಮಗೇತಿಯ ಏಳು ಜನ ಸಹೋದರರಲ್ಲಿ ಕಣ್ಣಪ್ಪ ಮಾತ್ರ ವಂಶೋದ್ಧಾರಕನಾದರೆ, ಇನ್ನಾರು ತಮ್ಮಂದಿರ ವಂಶ ಬೆಳೆದಂತಿಲ್ಲ. ಹಾಗಾಗಿ ಕಾಮಗೇತಿ ವಂಶಕ್ಕೆ ಆಸ್ತಿಭಾರ ಹಾಕಿದವರಲ್ಲಿ ಕಣ್ಣಪ್ಪನೂ ಒಬ್ಬ. ಆ ಮೂಲಕ ಕಾಮಗೇತಿ ವಂಶಸ್ಥರು ಪ್ರಚಲಿತಕ್ಕೆ ಬಂದಂತೆ ಇತರರು ಬರಲಿಲ್ಲ. ಕಾಮಗೇತಿ ಬೆಡಗು (ಕನ್ನಪ್ಪ) ಅಥವಾ ವಂಶ ಬೆಳೆದು ೨೮ ಬೆಡಗುಗಳಾಗುತ್ತವೆ. ಅವೇ ೨೮ ಶಾಖೆಗಳು. ಇಲ್ಲಿ ಬೆಡಗಿಗೆ ಶಾಖೆ ಎಂದರ್ಥ.[2]

'ಕಾಮಕೇತನ' ಎಂಬುದು ಬೇಡರ ಪ್ರಾಚೀನ ಬೆಡಗುಗಳಲ್ಲೊಂದು. ದ್ವಾಪರಯುಗದಲ್ಲಿ ಹಿರಣ್ಯಧನು, ಏಕಲವ್ಯ ಕಿರಾತ, ನಿಷಾದ, ಶಬರ ಮೊದಲಾದ ರಾಜರು ಈ ಕಾಮಗೇತಿ ಗೋತ್ರದಲ್ಲಿಯೇ ಜನಿಸಿದವರು.[3] ಆದಿಯಲ್ಲಿ ಏಕಲವ್ಯನ ವಂಶಸ್ಥರು ಈ ಬೆಡಗಿಗೆ ಸೇರಿದವರೆಂದು ಚರಿತ್ರೆಯಿಂದ ಈ ಬುಡಕಟ್ಟು ತಿಳಿಯುತ್ತದೆ. ಉತ್ತರ ಭಾರತದ ಬೇಡರು ಮಂಗೋಲಾಯಿಡ್ ಜನಾಂಗಕ್ಕೆ ಸೇರಿದ್ದರೆ, ದಕ್ಷಿಣಭಾರತದ ಬೇಡರು ಪ್ರೊಟೋ ಅಸ್ಟ್ರಾಲಾಯಿಡ್‌ಗೆ ಸೇರಿದ್ದಾರೆ. ಈ ಬುಡಕಟ್ಟಿನವರು ಈಗಿನ ನವದೆಹಲಿ (ಹಸ್ತಿನಾಪುರ – ಇಂದ್ರಪ್ರಸ್ಥ), ಪಂಜಾಬ್, ಅಯೋಧ್ಯಾ, ಕಾಮರೂಪ, ಗಂಗಾ, ಬ್ರಹ್ಮಪುತ್ರಾ, ನರ್ಮದಾ ನದಿತಪ್ಪಲು ಹಾಗೂ ವಿಂಧ್ಯಾಪರ್ವತಗಳಿಂದ ಒರಿಸ್ಸಾ ಮೂಲಕ ದಕ್ಷಿಣ ಭಾರತದ ಕಡೆ ವಲಸೆ ಬಂದು ಆಂದ್ರಪ್ರದೇಶ ನಂತರ ಕರ್ನಾಟಕದಲ್ಲಿ ನೆಲಸಿದರು. ಈ ಹಿನ್ನೆಲೆಯಲ್ಲಿ ಕಾಮಗೇತಿಗಳ ಮೂಲ ಚರಿತ್ರೆ ಉತ್ತರಭಾರತದಿಂದ ಆರಂಭವಾಗಿರುವುದು ತಿಳಿಯುತ್ತದೆ. ದಿಲ್ಲಿಯ ನಾಡತಳವಾರರಾದ ವಾಲ್ಮೀಕಿಗೋತ್ರದವರೆಂದು ಹೇಳಲ್ಪಡುವ ಕಾಮಗೇತಿ ವಂಶದ ಸಬ್ಬಗಡಿ ಓಬನಾಯಕ, ಜಡವಿನಾಯಕ, ಬುಳ್ಳನಾಯಕ ಹೆಸರಿನ ಈ ಮೂರು ಜನ ಅಣ್ಣತಮ್ಮಂದಿರು ಅಹೋಬಲ ನರಸಿಂಹಸ್ವಾಮಿ ಮನೆದೇವರ ಪೆಟ್ಟಿಗೆಯೊಂದಿಗೆ ಆಕಳು, ಕುರಿ ಹಾಗೂ ಕಾಪು – ಕಂಪಳವನ್ನು ತೆಗೆದುಕೊಂಡು ದಕ್ಷಿಣಕ್ಕೆ ಬಂದರು. ದಾರಿಯಲ್ಲಿ ಬರುವಾಗ ವಿಜಯನಗರದಲ್ಲಿ ಹಂಪೆ ವಿರೂಪಾಕ್ಷೇಶ್ವರನ ದರ್ಶನ ಮಾಡಿಕೊಂಡು ಬರುವಾಗ, ಆನೆಗೊಂದಿ ಸ್ಥಳದವರಾದ ವಿರೂಪಾಕ್ಷೇಶ್ವರ ಗುಡಿಯಲ್ಲಿ ಮಂತ್ರಪುಷ್ಪದ ಕೆಲಸವನ್ನು ಮಾಡುತ್ತಿದ್ದ ಕರಿಜೋಯಿಸ, ವಿರೂಪಾಕ್ಷ ಜೋಯಿಸ ಎಂದು ಹುಡುಗರು ಈ ನಾಡತಳವಾರರ ಬೆನ್ನಹತ್ತಿ ಬಂದರು. ಮೇಲಿನ ಮೂರು ಜನ ಪೂರ್ವಜರು (ನಾಯಕರು) ಬಿಳಿಚೋಡುನಲ್ಲಿ ೩ ತಿಂಗಳಿದ್ದು ನಂತರ ನೀರ್ಥಡಿ ಗ್ರಾಮದಲ್ಲಿ ರೊಪ್ಪಹಾಕಿ ತಳವೂರಿದರು. ಇವರಿಗೆ ಸ್ವಪ್ನದಲ್ಲಿ ಮನೆದೇವರು ಇಲ್ಲೇ ನೆಲೆಸಲು ಸೂಚಿಸಿದ್ದರಿಂದ ಈ ಸ್ಥಳದಲ್ಲಿ ನೆಲಸಿದನಂತೆ. ನೀರ್ಥಡಿಯಲ್ಲಿ ಆನಂತರ ದೇವರಿಗೆ ಗುಡಿಕಟ್ಟಿಸಿ ಮುಂದಿನ ರಾಜ್ಯಕ್ಕೆ ನಡೆಯುತ್ತಾರೆ. ಇದಕ್ಕೆ ಪೂರಕವಾಗಿ ಪ್ರಾಚೀನ ಕನ್ನಡ ಶಾಸನಗಳಲ್ಲಿ ಕಾಮಪ್ಪನಾಯಕ, ಕಾಮಸಮುದ್ರ (ಕಾಮನಾಯಕ), ನಿಡಗಲ್ಲು ಕಾಮರಾಜ ಇತರರ ಹೆಸರುಗಳ ಪ್ರಸ್ತಾಪವನ್ನು ಇಲ್ಲಿ ಸ್ಮರಿಸಬಹುದು. ಅಂತೆಯೇ ಕ್ಷಾತ್ರಾಂಶ ಪ್ರಬೋಧದಲ್ಲಿ ಹೆಚ್.ವಿ. ವೀರನಾಯಕ ಅವರು ಕಾಮಗೇತಿ ವಂಶ ಕುರಿತು ಚರ್ಚಿಸಿದ್ದಾರೆ. ಶ್ರೀ ಗುರು ಪಂಪಾವಿರೂಪಾಕ್ಷನೇ ನಮಃ ಶಾಲಿವಾಹನಶಖ ವರ್ಷಂಗಳು ೧೫೩ಕ್ಕೆ ಸರಿಯಾದ ವಿರೋಧಿನಾಮ ಸಂವತ್ಸರದ ಚೈತ್ರ ಶುದ್ಧ ೫

ಭಾನುವಾರ ಚಂದನಾವತಿಯೆಂಬ ಆನೆಗುಂದಿ ನರಪತಿ ದೊರೆಗಳ ಜಯರೇಖೆ ನಕಲು ಎಂದಿದೆ. ಹಂಪೆ – ಆನೆಗೊಂದಿ ಬಗ್ಗೆ ಇನ್ನು ಹೆಚ್ಚಿನ ವಿವರಗಳಿವೆ.

**೨.೩. ಕಾಮಗೇತಿಗಳ ಪ್ರಾಚೀನ ಪರಂಪರೆ**

**೧. ಮಂದಭೂಪಾಲ**

ಮಹಾವಿಷ್ಣು ಮತ್ತು ಲಕ್ಷ್ಮೀದೇವಿಯ ವರಪ್ರಸಾದದಿಂದ ಮಂದಭೂಪಾಲ ಹುಟ್ಟಿದನು. ಪಶುಗಳ ಮಂದೆಯಲ್ಲಿ ಹುಟ್ಟಿದ ಇವನಿಗೆ ಮಂದಭೂಪಾಲನೆಂದು ಕರೆದರು. ಹೆಣ್ಣು ಕರುವಿಗೆ ಒಂಟಿಕೋಡು ಬೆಳ್ಳಿಹಸು ಎಂದು – ಗಂಡು ಕರುವಿಗೆ ಪಂಪಾದ್ರಿ ಬಸವನೆಂದು ಕರೆದರು. ಮಂದಭೂಪಾಲನು ಚಂದ್ರಗಿರಿ ಪರ್ವತ ಪ್ರಾಂತ್ಯದಲ್ಲಿ ಪ್ರಮೀಳಾ ಎಂಬ ಸುಲಕ್ಷಣವಾದ ಕನ್ಯೆಯನ್ನು ನೋಡಿದನು. ಕೊನೆಗೆ ಮದುವೆ ಆಗಿ, ಮಕ್ಕಳ ಭಾಗ್ಯಕ್ಕಾಗಿ ಸೂರ್ಯದೇವನನ್ನು ಪೂಜಿಸುತ್ತಿದ್ದರು. ಪ್ರಮೀಳಾ ಗೋತ್ರವೇ ಬುಟ್ಟಗಲೋರು. ಮಂದಭೂಪಾಲನಿಗೆ ಇವರು ನೆಂಟರಾದರು. ಮಂದಭೂಪಾಲನಿಗೆ ಗೋತ್ರ ಇರಲಿಲ್ಲ. ಮುಂದೆ ಹುಟ್ಟಿದವರು ತನ್ನ ಗೋತ್ರ ಗೊತ್ತಿರಲಿಲ್ಲ. ಗುಪ್ತ ಬೊಮ್ಮತಿರಾಜ ನೇತೃತ್ವದಲ್ಲಿ ಮಂದಭೂಪಾಲನ ಗೋತ್ರವನ್ನು 'ಮಂದಗೋತ್ರ' ಎಂದು 'ಮಂದಲೋರು' ಎಂದು ಕರೆದರು. ಬುಟ್ಟಗಲೋರು ಬೆಡಗಿಗೆ ಇವರು ನೆಂಟರಾದರು. ಮಂದಭೂಪಾಲ ಗುಪ್ತಗಿರಿಯ ಯಜಮಾನನಾಗಿದ್ದ (ನರ್ಮದಾನದಿ ದಂಡೆಮೇಲೆ). ಮಂದಭೂಪಾಲ ಮತ್ತು ಪ್ರಮೀಳೆಯರು. ಪ್ರತಿ ದಿನ ಸೂರ್ಯೋದಯ, ಸೂರ್ಯವಂದನೆ, ಸಂಧ್ಯಾಕಾಲದಲ್ಲಿ ಸೂರ್ಯನನ್ನು ಪ್ರಾರ್ಥಿಸುತ್ತಿದ್ದರು. ಎಲ್ಲ ಪಾಳೆಯಪಟ್ಟಗಳ ಸದಸ್ಯರು, ಬೇಡರ ಹಿರಿಯರೆಲ್ಲ ಸೇರಿ, ಹುಟ್ಟಿದ ಆ ಬಾಲಕನಿಗೆ ಅಂಭೋಜರಾಜ ಎಂದು ಹೆಸರಿಟ್ಟರು. ತಂದೆ – ತಾಯಿಗಳು ನರ್ಮದಾನದಿಯಲ್ಲಿ ಪ್ರತಿ ದಿನ ಸೂರ್ಯನನ್ನು ಪ್ರಾರ್ಥಿಸುತ್ತಿದ್ದರಿಂದ (ಅಂಬು – ನೀರು ರಾಜ – ಒಡೆಯ) ಆ ಹೆಸರಿಟ್ಟರು. ನಂತರ ೩ ಜನ ಗಂಡುಮಕ್ಕಳು ಜನಿಸಿದರು. ೧.ತುಂಬೇರಾಜ ೨. ಕಾಂಭೋಜರಾಜ ೩. ಕಲ್ಲಿಮರಾಜ ಎಂದು ಅವರ ಹೆಸರುಗಳು

**೨. ಅಂಭೋಜರಾಜನ ಆಳ್ವಿಕೆ**

ಗುಪ್ತಗಿರಿ ಪಾಳೆಯಗಳ ಒಡೆಯನಾಗಿ ಈತ ತಂದೆ – ತಾಯಿ ಸಮೇತ ಎಲ್ಲರನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು. ಬೇಡರ ಪಡೆಗಳು, ಕಹಳೆ ಊದುವವರು ಇತರ ಪರಿವಾರದವರು ನಾಯಕನಿಗೆ ನೆರವಾಗಿದ್ದರು. ಪ್ರಕೃತಿ ಸಂಪತ್ತನ್ನು ಸಂರಕ್ಷಿಸಿದ್ದ ಇವರು ಬೇಟೆ, ಪಶುಪಾಲನೆಯಲ್ಲಿ ನಿರತರಾಗಿದ್ದದು ಐತಿಹಾಸಿಕ ಸತ್ಯ.

ಅಂಭೋಜ ರಾಜನ ೩ನೇ ಸಹೋದರ ಕಾಂಭೋಜ ರಾಜನಿಗೆ ಬಹಳ ದಿನಗಳವರೆಗೂ ಸಂತಾನವಾಗಿರಲಿಲ್ಲ. ಇವರು ವಿಂಧ್ಯಾಪರ್ವತ, ನರ್ಮದಾನದಿ ತೀರದಲ್ಲಿದ್ದಾಗ ತಮ್ಮ ಮಂದಯಲ್ಲಿಯ ಕಾಮಧೇನುವಿಂತಿದ್ದ ಒಂಟಿಕೋಡು ಬೆಳ್ಳಿ ಹಸುವನ್ನು ಪೂಜಿಸುತ್ತ ಪ್ರದಕ್ಷಿಣೆ ನಮಸ್ಕಾರಗಳಿಂದ ಸಂತಾನಕ್ಕಾಗಿ ಪ್ರಾರ್ಥಿಸಿದರು. ಕಾಮಧೇನುನಂಥ ಬೆಳ್ಳಿ ಹಸುವಿನ ಪ್ರಭಾವದಿಂದ ಜನಿಸಿದ ಈ ಬಾಲಕನಿಗೆ 'ಕಾಮಗೇತಿ ಭೂಪಾಲ' ನೆಂದು ಹೆಸರಿಟ್ಟರು.

**೩ ಕಾಮಗೇತಿ ಭೂಪಾಲನ ಆಡಳಿತ ಹಾಗೂ ಮಂದಗಿರಿಪುರ ನಿರ್ಮಾಣ**

ಕಾಮಗೇತಿ ಭೂಪಾಲ ಚಂದ್ರಗಿರಿ ಪ್ರಾಂತ್ಯದ (ತಿರುಪತಿ ಹತ್ತಿರ) ದೊರೆ. ಮ್ಯಾಸಮಂಡಲಿ ದಕ್ಷಿಣಭಾರತದ ಆಂಧ್ರ – ಕರ್ನಾಟಕದಲ್ಲಿ ವಲಸೆ ಬಂದಾಗ ಮೇಲಿನ ಸಂಗತಿಗಳು ತಿಳಿದುಬರುತ್ತವೆ. ಅಂಭೋಜರಾಜನು ಕ್ರೌಂಚ ಅಡವಿಗೆ ಹೋದಾಗ ಕಾಮಗೇತಿ ಭೂಪಾಲನು, ಗುಪ್ತಗಿರಿಯ ಆಡಳಿತಕ್ಕೆ ಬೇಡರ ಬುಟ್ಟಗಲೋರ ವಂಶಸ್ಥರಿಗೆ ಅಧಿಕಾರ ಕೊಡುತ್ತಾನೆ. ಮಂದಲೋರ ಪಂಗಡದವರು ಕಾಪು –

ಕಂಪಳದೊಂದಿಗೆ ಮಂದಗಿರಿ ಪರ್ವತ ಪ್ರದೇಶದಲ್ಲಿ (ಹಂಪೆ ಅಥವಾ ಶ್ರೀಶೈಲ) 'ಮಂದಗಿರಿಪುರ' ಎಂಬ ಪಟ್ಟಣ ಕಟ್ಟಿ, ಪಾಳೆಯಪಟ್ಟು ಸ್ಥಾಪಿಸಿ ಪಶುಗಳ ಮಂದೆಗಳನ್ನು ನಿರ್ಮಾಣ ಮಾಡಿ ಜೀವನ ನಡೆಸಿದರು.

ಹೀಗೆ ಇರುವಾಗ ಶುಕ್ಲಮಲಿನಾಯಕ ಹಾಗೂ ದಾನಸಾಲಮ್ಮನವರಿಗೆ ಆದಿಲಕ್ಮಿ ಸ್ವರೂಪದ ಚುಂದುಲಕ್ಷ್ಮಿಯ ಜನನ ಆಗುವುದು. ಶುಕ್ಲಮಲ್ಲಿನಾಯಕ (ಸಂಚಿಶಿಖಿನಾಯಕ) ತನ್ನ ಸತಿ ದಾನಸಾಲದೇವಿ ಜೊತೆ ಚಂದ್ರಗಿರಿ ಪರ್ವತದ ಒಂದು ಕಾಡಿನಲ್ಲಿ ಗುಡಿಸಲನ್ನು ಕಟ್ಟಿಕೊಂಡು ನೆಲಸಿದ್ದ. ಇವರಿಗೆ ಬಹುದಿನಗಳ ಕಾಲ ಮಕ್ಕಳ ಸಂತಾನದ ಕೊರಗಿತ್ತು. ದಾನಸಾಲದೇವಿಯ ವಂಶಕ್ಕೆ ಸೇರಿದ ತಂದೆ ಅಂಭೋಜರಾಜ ತಾತ ಮಂದಭೂಪಾಲ ತಮ್ಮ ಪೂರ್ವಜರಂತೆ ಸೂರ್ಯನನ್ನೇ ಪೂಜಿಸುತ್ತಿದ್ದರು.

ಮಂದಭೂಪಾಲನು ಚಂದ್ರಗಿರಿ ಅಡವಿಯ ನಟ್ಟನಡುವೆ ಬಂಗಾರ ಬೂದಿಕೋಟೆಯ ಒಳಗೆ ನೆಲಮಾಳಿಗೆಯಲ್ಲಿ ನೆಲಸಿದ್ದಾಗ ಒಂದು ಕಡೆ ಸೂರ್ಯನ ಬೆಳಕು ಬೀಳುತ್ತಿತ್ತು. ಅದನ್ನೇ ನೋಡಿಕೊಂಡು ಸೂರ್ಯದೇವನ ಪೂಜೆ ಮಾಡುತ್ತಿದ್ದನು. ತಮ್ಮ ಹಕ್ಕುಗಳಿಗಾಗಿ, ಅಧಿಕಾರಕ್ಕಾಗಿ ಸೂರ್ಯದೇವನನ್ನು ಬೇಡಿಕೊಳ್ಳುತ್ತಿದ್ದರು. ದಾನಸಾಲಮ್ಮನು ಅಷ್ಟೆ ಸೂರ್ಯದೇವನ ಆರಾಧಕಳು. ಮಲ್ಲಿನಾಯಕನೊಂದಿಗೆ ವಿವಾಹವಾಗಿದ್ದರೂ, ಸೂರ್ಯದೇವನ ಮೇಲಿನ ಪ್ರೀತಿ, ಮೋಹ ಕಡಿಮೆಯಾಗಿರಲಿಲ್ಲ. ಪ್ರತಿನಿತ್ಯ ನದಿಯಲ್ಲಿ ಸ್ನಾನಮಾಡಿ ಸೂರ್ಯದೇವನನ್ನು ಪೂಜಿಸುತ್ತಿದ್ದರು.

**೪. ಕಾಮಗೇತಿ ಭೂಪಾಲನಿಗೆ ಪಾಳೆಯ ಪಟ್ಟ ಕಟ್ಟಿದ್ದು**

ಅಂಬೋಜರಾಜ ಶಾಪಗ್ರಸ್ಥನಾಗಿದ್ದನು. ಬೇಡರ ಕಾಂಪು – ಕಂಪಳವನ್ನು ಕ್ರೌಂಚ ಅಡವಿಯಲ್ಲಿಟ್ಟಿದ್ದರು. ಅವನಿಗಿದ್ದ ಜವಾಬ್ದಾರಿಯನ್ನು, ಪಶು ಪಕ್ಷಿಗಳು, ಬೆಳ್ಳಿ ಬಸವರನ್ನು ರಕ್ಷಿಸುವ ಹೊಣೆಗಾರಿಕೆಯನ್ನು ಹಿರಿಯ ಕುಮಾರ (ಸಹೋದರನ ಮಗ) ಕಾಮಗೇತಿ ಭೂಪಾಲನಿಗೆ ಕೊಟ್ಟಿದ್ದನು. ಧೈರ್ಯಶಾಲಿ, ಪರಾಕ್ರಮಿ ಆಗಿದ್ದ ಈ ವೀರ ಬೇಡರ ಪಾಳೆಯಗಾರರನ್ನು ವಿಶ್ವಾಸಕ್ಕೆ ತೆಗೆದುಕೊಂಡನು. ಇತ್ತ ಅಂಭೋಜರಾಜನು, ಕಾಂಭೋಜರಾಜನ ಮಗನಾದ ಕಾಮಗೇತಿ ಭೂಪಾಲನನ್ನು ಕರೆಸಿ ನಾಯಕಿ ಪಟ್ಟವನ್ನು ಕೊಟ್ಟು ಬೇಡರನ್ನು ಉದ್ದಾರಮಾಡಲು ಹಾರೈಸಿದರು. ಅವನಿಗೆ ಬಿಲ್ಲು – ಬಾಣ, ಗಂಡಗೊಡಲಿಗಳನ್ನು ಅವರು ಒಪ್ಪಿಸಿದರು. ಗೋಸಂಪತ್ತನ್ನು ಕಾಪಾಡಬೇಕು, ಒಂಟಿಕೋಡು ಬೆಳ್ಳಿ ಹಸು – ಪಂಪಾದ್ರಿ ಬಸವರು ನಮ್ಮ ವಂಶದ ದೇವತೆಗಳೆಂದು ಸಾರಿದರು. ಬೇಡಪಡೆ, ಬೇಡಜನಾಂಗಕ್ಕೆ ತೊಂದರೆ ಆಗದಂತೆ ಕೆಲಸಮಾಡಲು ಹೇಳಿ ಪಾಳೆಯಗಳ ಎಲ್ಲ ಸ್ತ್ರೀಪುರುಷರು ಸುಖವಾಗಿರಲೆಂದು ಹಾರೈಸಿ ಕ್ರೌಂಚ ಅಡವಿಗೆ ವಾಸಿಸಲು ಹೋದನು.

ಕಾಮಗೇತಿಯವರು ಮಂದಪರಾಜನ ವಂಶದಿಂದ ಬಂದವರು, ಶಿವ, ಪಾರ್ವತಿ ಒಲಿದು ಕಾಮಗೇತಿಗೆ ಬಂಗಾರದ ಕೊಡಲಿ, ಸಿರಿವು, ಸಿದ್ದಕಿ, ಕೋಲು ಕೊಟ್ಟರಂತೆ. ಅಂದಿನಿಂದ ಇವರು ಕಾಪು – ಕಂಪಳದೊಂದಿಗೆ ಕೋಟಿಗೊಂದು ಮಂದ, ನೂರಾಒಂದು ಮಲ್ಲಿನಾಯಕನ ಪಂಗಡಗಳನ್ನು ವೃದ್ಧಿಗೊಳಿಸಿದರು. ಒಮ್ಮೆ ಕಾಳಿ ಎಂಬ ಮಳೆ ಬಂದು ಬೆಟ್ಟ, ಗುಡ್ಡ, ಹಳ್ಳ, ಕೊಳ್ಳ, ಅಡವಿ ತುಂಬಿ ಹರಿದು ಎಂಟು ದಿನಗಳವರೆಗಿತ್ತು. ಆಗ ವಿಷ್ಣು, ಬ್ರಹ್ಮ, ಮಹೇಶ್ವರ ಇದನ್ನು ನೋಡಲು ಬಂದರು. ದುಷ್ಟರನ್ನು ನರಲೋಕಕ್ಕೆ ಕಳುಹಿಸಿ, ಶಿಷ್ಟರನ್ನು ರಕ್ಷಿಸುತ್ತಾರೆ.೧೧ ಹೀಗೆ ಕಾಮಗೇತಿಗಳು ಬುಡಕಟ್ಟು ಚರಿತ್ರೆ ಮತ್ತು ಸಂಸ್ಕೃತಿಯಲ್ಲಿ ಪುರಾಣ, ಐತಿಹ್ಯ, ಜನಪದ, ಕಥೆ, ನಂಬಿಕೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ.

ಕಾಮಗೇತಿಗಳಲ್ಲಿ ಜಾತ್ರೆ ಹಬ್ಬ, ಉತ್ಸವಗಳು ಅನೇಕ. ಇವರಲ್ಲಿ ಬತ್ತಲ ಬಸವಂತಲು ಆಚರಣೆ ಇದೆ. 'ಏಳಜ್ಜನವರು ಎಂಬ ಬೆಡಗಿನ ಹಾಗೂ ಕಾಮಗೇತಿ ಜನಗಳು ಈ ಆಚರಣೆಯಲ್ಲಿ ವಿಶೇಷವಾಗಿ ಭಾಗವಹಿಸಿ ಆಚರಿಸುತ್ತಾರೆ. ಇದು ಬಹುಮಟ್ಟಿಗೆ ಓಕುಳಿ ಆಟದ ರೀತಿಯಲ್ಲಿ ನಡೆಯುತ್ತದೆ. ಈ ಆಚರಣೆಯಲ್ಲಿ ಭಂಡಾರ (ಬುಕ್ಕಿಟ್ಟು) ಹಾಗೂ ಕುಂಕುಮದ ಪುಡಿಯನ್ನು ಬಳಸುತ್ತಾರೆ. ಏಳಜ್ಜನವರ ಗೋತ್ರದ ಗುಂಪು

ಪುಡಿಗಾಸಿ ಹಾಕಿಕೊಂಡು, ಹೂವಿನ ಹಾರಧರಿಸಿ, ಕಾಮಗೇತಿ ಗುಂಪಿಗೆ ಬುಕ್ಕಿಟ್ಟಿನ ಪುಡಿಯಿಂದ ಹೊಡೆಯುತ್ತಾರೆ. ಇದಕ್ಕೆ ಪ್ರತಿಯಾಗಿ ಕಾಮಗೇತಿ ಗೋತ್ರದವರು ಕುಂಕುಮದ ಪುಡಿಯಿಂದ ಏಳಜ್ಜನವರ ಗುಂಪಿಗೆ ಹೊಡೆಯುತ್ತಾರೆ. ಹೀಗೆ ಸ್ಪರ್ಧೆಯ ರೀತಿಯಲ್ಲಿ ಈ ಆಚರಣೆ ನಡೆಯುತ್ತದೆ.

ಚಾರಿತ್ರಿಕ ದಾಖಲೆಗಳ ಪ್ರಕಾರ ಶ್ರೀಮಾನ್, ರಾಜಾಧಿರಾಜ, ರಾಜಾತೇಜೋನಿಧಿ ಅಖಿಲಾಂಡಕೋಟಿ ಬ್ರಹ್ಮಂಡನಾಯಕ, ಕಸ್ತೂರಿತಿಲಕ ಕಾಮಕೇತನ, ಚಂಡಪ್ರಚಂಡ ಕುಲಭೇರುಂಡ, ನರಪತಿ ಮಂಡಲಾಧರ ಶ್ರೀಮಾನ್ 'ನಾಯಂಕ ವಂಶ'. ನಿತ್ಯಾಚಾರ ಸತ್ಯಾಚಾರ ಲಿಂಗಾಚಾರ ಪ್ರವರ್ತನ ಸದ್ಧರ್ಮವುಳ್ಳ ಚಂದ್ರವಂಶ ಮಹೀಮತಿಗೋತ್ರ ಮನುಮುನಿಸೂತ್ರ ಸಂಜಿನಿತರಾದ ಮಂಜಪ್ಪನಾಯ್ಕ ಭೂಮೀಪತಿಯ ಶ್ರೀಲಕ್ಷ್ಮೀದೇವಿ ಹಿರೇರಾಜರ ಪೆಟ್ಟಿಗೆಯನ್ನು ಪೂಜಿಸುತ್ತಾ ಪಂಪಾಕ್ಷೇತ್ರ ನಿವಾಸಿಗಳಾದ ಹರಿಹರಸ್ವಾಮಿಗಳವರ ವರವಂಪಡೆದು ಸುಖದಿಂದ ರಾಜ್ಯಪಾಲನೆ ಮಾಡುತ್ತಿದ್ದರು ಎಂಬ ಇತ್ಯಾದಿ ವಿವರಗಳಿವೆ. ಈ ಬಗ್ಗೆ ಇದೊಂದು ಉದಾಹರಣೆ ಅಷ್ಟೇ. ಇನ್ನು ಅನೇಕ ದಾಖಲೆಗಳು ಈ ಬಗ್ಗೆ ಲಭ್ಯ ಇವೆ.

ಈ ಜಯರೇಖೆಯ ನಕಲಿನಲ್ಲಿ ಕಾಣಬರುವ ೧. ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ ಎಂಬುದು ಕ್ಷಾತ್ರಧರ್ಮವಲಂಬಿಗಳಾದವರು ಪರಶುರಾಮನ ಭಯದಿಂದ, ಕ್ಷತ್ರಿಯ ನಾಮವನ್ನು ಆ ದೇವನ ಹೆಸರಿನಲ್ಲಿ ಮಾರ್ಪಾಡು ಮಾಡಿ ನಾಯಕರಾದರೆಂಬುದಕ್ಕೂ ೨. ಕಾಮಕೇತನ, ವಾಲ್ಮೀಖಿಯ ಮಗನಾದ ಕಾಮಕೇತನ ಎಂಬುವನ ಅನ್ವಯಾಂತರಿಗಳಾಗಿರುವುದಕ್ಕು ೩. ಬದಲಾಯಿಸಿರುವ ವಂಶದ ಹೆಸರಿಗೂ ೪ – ೫ ಈ ವಂಶದವರು ಮನುವಿನ ಪರಂಪರೆಯಿಂದ ಬಂದ ಚಂದ್ರವಂಶದವರೆಂಬುದಕ್ಕೂ, ೬. ಆನೆಗೊಂದಿಯೇ ಮುಂತಾದ ಕಡೆಗಳಲ್ಲಿ ಪಾಳೆಯಗಾರರಾಗಿ ಪ್ರಭುತ್ವ ಮಾಡಿದವರು ನಾಯಕ ವಂಶಕ್ಕೆ ಸೇರಿದವರೇ ವಿನಃ ಬೇರೆ ಯಾವ ವಂಶಕ್ಕೂ ಸೇರಿದವರಲ್ಲವೆಂಬ ಸಂಗತಿ ದೃಢಪಟ್ಟಿದೆ. ಈ ನಾಯಕ ವಂಶದವರು ಕರ್ನಾಟಕ ಸಿಂಹಾಸನ ಸ್ಥಾಪನೆಯಾಗುವ ಮೊದಲೇ ಇಲ್ಲಿ ನೆಲೆಸಿದ್ದರು.[4] ಸರ್ವವನ್ನು ತ್ಯಾಗಮಾಡಿದ ಇವರು 'ದೇಶಸೇವೆಯೇ ಈಶ ಸೇವೆ' ಎಂಬ ವಾದಕ್ಕೆ ಬದ್ಧರಾಗಿದ್ದರು. ಹೀಗೆ ಕಾಮಗೇತಿ ನಾಯಕರು ಕುಮ್ಮಟ ನಾಯಕ ಅರಸರು, ವಿಜಯನಗರದ ನಂತರ ಪಾಳೆಯಗಾರರಾಗಿ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿರುವುದು ಸ್ಮರಣೀಯ.

ಚಿತ್ರದುರ್ಗ ಪ್ರದೇಶವನ್ನು ಎರಡು ಶತಮಾನಗಳಿಗೂ ಹೆಚ್ಚು ಕಾಲ ಆಳಿದವರು ನಾಯಕ ಬುಡಕಟ್ಟಿನ ವಾಲ್ಮೀಖಿ ಗೋತ್ರದ ಕಾಮಗೇತಿ ವಂಶದ ಬೆಡಗಿನವರು. ಇವರಿಗೆ ಮಹಾ ನಾಯಕಾಚಾರ್ಯ, ಗಾದ್ರಿಮಲೆಹೆಬ್ಬುಲಿ, ರಾಜಾವೀರ, ಕಸ್ತೂರಿ ಕುಲತಿಲಕ ಎಂಬ ಬಿರುದುಗಳಿದ್ದವು. ತಿಮ್ಮಣ್ಣ ನಾಯಕ ಮೊದಲ ಅರಸನಾಗಿದ್ದ ಹಾಗೂ ರಾಜ್ಯವಾಳಿದ. ಇವನು ವಿಜಯನಗರದ ಅಧೀನದಲ್ಲಿದ್ದ. ಇವನ ನಂತರ ಓಬಣ್ಣನಾಯಕ ಸ್ವತಂತ್ರ ಆಳ್ವಿಕೆ ನಡೆಸುತ್ತಾನೆ. ತರುವಾಯ ಕಸ್ತೂರಿ ರಂಗಪ್ಪನಾಯಕನು ಮಾಯಕೊಂಡ, ಸಂತೆಬೆನ್ನೂರು, ಹೊಳಲ್ಕೆರೆ, ಅಣಜಿ ಮೊದಲಾದ ಸ್ಥಳಗಳನ್ನು ಜಯಿಸಿ ರಾಜ್ಯ ವಿಸ್ತರಿಸಿದನು. ಈ ಪಾಳೆಯ ಪಟ್ಟನ್ನು ವಿಸ್ತರಿಸಿ ನಾಲ್ಕು ಪ್ರಾಂತ್ಯಗಳಲ್ಲಿ ವಿಂಗಡಿಸಿ ಅಧಿಕಾರಿಗಳನ್ನು ನೇಮಿಸಿದ ಕೀರ್ತಿ ಎರಡನೆಯ ಮದಕರಿನಾಯಕನಿಗೆ ಸಲ್ಲುವುದು. ಇವನಾದ ಮೇಲೆ ಭರಮಪ್ಪನಾಯಕ ಬೆಟ್ಟದ ಮೇಲೆ ಮಠವನ್ನು ಕಟ್ಟಿಸಿ, ರಾಜ್ಯದಲ್ಲಿ ೩೦ ದೇವಾಲಯಗಳನ್ನೂ, ೪ ಅರಮನೆಗಳನ್ನೂ, ೫ ಬಲಿಷ್ಟವಾದ ಕೋಟೆಗಳನ್ನು ಅನೇಕ ಕೆರೆಗಳನ್ನು ಕಟ್ಟಿಸಿದ್ದು ಕೀರ್ತಿಗೆ ಪಾತ್ರನಾಗಿದ್ದಾನೆ. ಹಿರೇಮದಕರಿನಾಯಕ ಮೊಳಕಾಲ್ಮೂರುವಿನವರೆಗೆ ರಾಜ್ಯ ವಿಸ್ತರಿಸಿದ್ದ. ಚಿತ್ರದುರ್ಗ ಸಂಸ್ಥಾನ ಸರ್ವತೋಮುಖ ಅಭಿವೃದ್ಧಿ ಕಂಡದ್ದು ಕಿರಿಯ ಮದಕರಿನಾಯಕನ ಕಾಲದಲ್ಲಿ. ಹೈದರಾಲಿಯಿಂದ ಚಿತ್ರದುರ್ಗ ಅವನತಿಯಾಗಿದ್ದು ಚರಿತ್ರೆ. ಪ್ರಾಚೀನ ಕಾಲದ ಕಾಮಕೇತನ (ನಲ್ಲಕೇತನ ಎಂಬುದು ನಲಗೇತಿ ಆದಂತೆ) ವಿವಿಧ ಕಾಲಘಟ್ಟಗಳಲ್ಲಿ ಬೇರೆ ಬೇರೆ ಸ್ವರೂಪ ಪಡೆಯಿತು. ಮಧ್ಯಕಾಲದಲ್ಲಿ ಸಂತತಿ, ಬೆಡಗು, ಸಂಘಟನೆ, ರಾಜವಂಶ, ವಿಶಿಷ್ಟ ಜನಶಕ್ತಿಯಾಗಿ ಬೆಳೆದಿತ್ತು.

ಕಾಮಗೇತಿಯರನ್ನು ಎರಡು ಬಗೆಯಲ್ಲಿ ಅಧ್ಯಯನ ಮಾಡಬಹುದು. ಒಂದು ಬುಡಕಟ್ಟು ನೆಲೆಯಲ್ಲಿಯಾದರೆ, ಮತ್ತೊಂದು ಚಾರಿತ್ರಿಕ ನೆಲೆಯ ಹಿನ್ನೆಲೆಯಲ್ಲಿ ಈ ವಂಶವನ್ನು ಅಧ್ಯಯನ ಮಾಡುವ ಅಗತ್ಯವಿದೆ.

## ೧.೪. ಕಾಮಗೇತಿ, ನಲಗೇತಿ ಬೆಡಗುಗಳ ಪರಿಚಯ

ಬುಡಕಟ್ಟು ನೆಲೆಯಲ್ಲಿ ಚೆಲ್ಲಾಪಿಲ್ಲಿಯಾಗಿರುವ ಬೆಡಗುಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕಾಗಿದೆ. ಈ ಬಗ್ಗೆ ಅಧ್ಯಯನಗಳಾಗಿರುವುದು ವಿರಳ. ಈಗಾಗಲೇ ಪಂಡಿತ ರೇವಣ್ಣಶಾಸ್ತ್ರಿಗಳು ಬೇಡರ ಬೆಡಗುಗಳನ್ನು ಹೀಗೆ ಗುರುತಿಸುತ್ತಾರೆ: ಬಂಟ್ರು, ಹಳ್ಳಿ, ಹಾಲು, ಹನುಮರು, ಮ್ಯಾಸನಾಗಿ – ಮ್ಯಾಸಬೇಡರು, ಸಾಧುಬೇಡರು, ಸಲೆಯನ್, ತೆಲುಗು, ಊರಬೇಡರು,ಯಮಳೋರು – ಯನುಮಲ ಮುಂತಾಗಿ ಆಧುನಿಕ ಪ್ರಭೇದಗಳಿವೆ ಎಂದು ತಿಳಿಸುತ್ತಾರೆ.[5] ಬೇಡ – ನಾಯಕರಲ್ಲಿ ರಾಜ್ಯಾಳ್ವಿಕೆ ಮಾಡಿದ ಕೀರ್ತಿ ಕಾಮಗೇತಿಯವರಿಗೆ ಸಲ್ಲುವುದು.

‘ಕಾಮಗೇತಿ’ ಇದೊಂದು ಬೇಡರ ಬೆಡಗು. ಕ್ರಮೇಣ ವ್ಯಕ್ತಿ, ಸ್ಥಳ, ಜಾತಿಯಾಗಿ ಹಾಗೂ ವಿವಿಧ ಬಗೆಯಲ್ಲಿ ಮಾರ್ಪಾಡಾಗುತ್ತಾ ಬಂದಿದೆ. ನಾಮಪದವಾಗಿ ಬಳಸುವಾಗ ಕಾಮಗೇತ್ಲಾರು, ಕಾಮಗೇತಿಮನೆ, ಕಾಮಗೇತ್ಲುದೇವರು, ಕಾಮಗೇತ್ಲುಹಳ್ಳಿ, ಕಾಮಗೇತ್ಲು ವೀಳ್ಯೆ, ಕಾಮಗೇತ್ಲುಕೇರಿ, ಹೀಗೆ ತಮ್ಮನ್ನು ಅನನ್ಯವಾಗಿ ಸಮಾಜದಲ್ಲಿ ಗುರುತಿಸಿಕೊಂಡಿದ್ದಾರೆ. ನಲಗೇತಿಗಳು ನಲಗೇತನಹಳ್ಳಿಯಲ್ಲಿದ್ದಾರೆ. ಚನ್ನಕೇಶವ ಇವರ ದೇವರು.

ಕಾಮಗೇತಿಲೋರು ಮತ್ತು ಕುಕ್ಕನೋರು (ಚಿತ್ರಲಿಂಗದೇವರು), ಕಾಮನೋಡು (ಕಂಪಳದೇವರು), ಕಾಮಗೆತ್ತಲರು, ಕಾಮಕೇತಲವರು, ಕಾಮಲವರು, ಕಾಂಗೆತ್ತಲರು, ಸೂರ್ಯಕಾಮ (ಮಾದೇಲಿಂಗದೇವರು), ಕಾಮಗೇತಿ ಬುಲ್ಲುಡ್ಲು (ಚಂದ್ರವಂಶ – ಮಂದವಾರು) ಇತ್ಯಾದಿಯಾಗಿ ಕರೆದುಕೊಂಡಿದ್ದಾರೆ. ನಲ್ಲೆತೀರ, ಕಿರಾತಕರು, ಕಸ್ತೂರಿ, ಕಲ್ಯಾನದವರು, ನಲ್ಲಬೋತುಲವಾರು, ನಲಕೇತಲವರು, ಸಹಕೇತರು, ಯರಗೋತಿ ಮೊದಲಾದ ಬೆಡಗುಗಳಲ್ಲಿ ಗುರುತಿಸಿಕೊಂಡಿರುತ್ತಾರೆ. ಇವೆಲ್ಲ ‘ಕಾಮಗೇತಿ’ ಬೆಡಗಿನಂತೆ ಸಮನಾದ ಮತ್ತು ಪರ್ಯಾಯವಾದ ಇತರ ಬೆಡಗುಗಳು.

ಕಾಮಗೇತಿಗಳು ಪ್ರಾಚೀನಕಾಲದಲ್ಲಿ ಹರಿಣಮುನಿಯ ಮೂಲಕ ತೇರಸಾಮಂತಗೋತ್ರದಿಂದ ಉದಯಿಸಿದರು. ತೇರಸಾಮಂತ, ಔರಸಗೋತ್ರಗಳಲ್ಲಿ ಕಾಮ್ಗೇತಿ, ಮಾತುಲಗೋತ್ರವು ಪ್ರಸಿದ್ಧವಾಗಿರುವುದು. ಇದರ ಉಪಗೋತ್ರಗಳು – ಚನ್ನರು, ನಲ್ಲಗೇತ್ಲರು, ಬಿಬ್ಲರು, ಗೊಡಗುದಾಸರು, ನಗರದವರು, ಕ್ಯಾಸಯ್ಯರು, ಚಿತ್ರಯ್ಯರು, ಮಾಡ್ಲರು, ಬುಡ್ಡು ಬೋರ್ನರು, ಕೊತ್ತುಬ್ಬುರು, ಕುರುಲವರು ದೌಹಿತ್ರಿಜಂಪ್ಲರು ಇವೇ ಕಾಮ್ಗೇತಿ ಉಪಗೋತ್ರಗಳು.[6] ಮೇಲಿನ ಗೋತ್ರಗಳಿಗೆ ಚಿತ್ರದೇವರು, ನರಸಿಂಹದೇವರು ಕುಲದೇವರುಗಳಿವೆ. ಕಾಟಯ್ಯ (ಕಾಟಪ್ಪನಹಟ್ಟಿ) ಉಪದೇವರು.

ಇವರಿಗೆ ಕಾಮ್ಗೇತಲಹಳ್ಳಿ, ಚಳ್ಳಕೆರೆ, ಚಿತ್ರದುರ್ಗ ಮೊದಲಾದ ಸ್ಥಳಗಳಲ್ಲಿ ಗುಡಿಕಟ್ಟೆಗಳಿರುವವು. ಸೋಮವಾರ ಮನೆದೇವರವಾರ. ಮಂಗಳವಾರ ಹೆಣ್ಣುದೇವರ ವಾರ. ಬೇಡರು ಇಂದಿಗೂ ಆಚರಣೆ, ಸಂಪ್ರದಾಯಗಳನ್ನು ಪಾಲಿಸಿಕೊಂಡು ಬಂದಿರುವರು.

[1] ಎಂ.ಎಸ್. ಪುಟ್ಟಣ್ಣ : ಚಿತ್ರದುರ್ಗದ ಪಾಳೆಯಗಾರರು, ಪು.೧

[2] ನೋಡಿ. ಪಿ. ಅಬ್ದುಲ್ ಸತ್ತಾರ್, ‘ತರೀಕೆರೆಯ ಪಾಳೆಯಗಾರರು’, ಪು. ೬-೭

[3] ಪಂಡಿತ ಶ್ರೀ ರೇವಣ್ಣಶಾಸ್ತ್ರಿಗಳು : ವಾಲ್ಮೀಕ ಪುರಾಣವು, ೧೯೫೯, ಪು. ೨೬

[4] ಹರತಿ ವೀರನಾಯಕ: ಕ್ಷಾತ್ರಾಂಶ ಪ್ರಭೋದ, ೧೯೮೭, ಪು.೯-೧೦

[5] ವಾಲ್ಮೀಕರ ಪುರಾಣವು, ಪು.೪೩

[6] ಅದೇ ಪು.೨೩

# ೩. ಬೇಡ – ನಾಯಕರ ಕಟ್ಟೆಮನೆಗಳ ಸ್ಥಾಪನೆ ಹಾಗೂ ನ್ಯಾಯಪಂಚಾಯ್ತಿ

ಮಾನವ ಬೇಟೆ, ಪಶುಪಾಲನೆ ಮತ್ತು ಕೃಷಿಯಿಂದ ಸ್ಥಿತ್ಯಂತರಗೊಂಡಾಗ ಜೀವನಕ್ರಮದಲ್ಲಿ ಹಲವು ಮಾರ್ಪಾಟುಗಳಾದವು. ಅವುಗಳಲ್ಲಿ ಪ್ರಮುಖವಾದುದು ಆಹಾರ ಹುಡುಕುವ (ಸಂಗ್ರಹಣೆಯ) ಬದುಕು. ಕ್ರಮೇಣ ಜನಜೀವನದಲ್ಲಿ ಸಂಭವಿಸುವ ಘಟನೆಗಳಿಗೆ ನ್ಯಾಯ, ತೀರ್ಮಾನ, ಪಂಚಾಯ್ತಿಗಳನ್ನು ತಾವೇ ರೂಪಿಸಿಕೊಂಡಿದ್ದು ಗಮನಾರ್ಹ. ಹೀಗೆ ಭೂಮಿಯ ಮೇಲೆ ವಾಸಿಸುವ ಪ್ರತಿಯೊಂದು ಬುಡಕಟ್ಟು ಸಮುದಾಯವು ತನ್ನದೇ ಅಥ ನ್ಯಾಯ ತೀರ್ಮಾನದ ವ್ಯವಸ್ಥೆಯನ್ನು ಹೊಂದಿರುತ್ತದೆ. ಇಂಥಾ ನ್ಯಾಯಪಂಚಾಯ್ತಿ ಕಾರ್ಯವಿಧಾನ ಇತರೆ ಸಮುದಾಯಗಳಲ್ಲಿದ್ದರೂ ಬುಡಕಟ್ಟುಗಳಲ್ಲಿ ಮಾತ್ರ ವಿಶಿಷ್ಟ ಸ್ಥಾನ ಪಡೆದಿದ್ದು ಆ ವ್ಯವಸ್ಥೆಗೆ ಹೊಂದಿಕೊಂಡಿರುತ್ತದೆ. ಕರ್ನಾಟಕದಲ್ಲಿರುವ ಬುಡಕಟ್ಟುಗಳ ಪೈಕಿ (೫೦) ಬೇಡರ ಬುಡಕಟ್ಟು ಜನಸಂಖ್ಯೆಯಲ್ಲಿ ಮೊದಲನೆಯದಾಗಿದ್ದೂ, ಚರಿತ್ರೆ ಮತ್ತು ಸಂಸ್ಕೃತಿಯಿಂದ ಅತೀ ಮಹತ್ವ ಹೊಂದಿದೆ. ಇವರು ಕರ್ನಾಟಕದ ಉದ್ದಗಲಕ್ಕೂ ನೆಲಸಿದ್ದರೂ ಮಧ್ಯಕರ್ನಾಟಕದಲ್ಲಿ ಮಾತ್ರ ವಿಶೇಷವಾಗಿ (ಹೆಚ್ಚಿನ ಪ್ರಮಾಣದಲ್ಲಿ) ಕಂಡುಬರುತ್ತಾರೆ. ಈ ಬಗ್ಗೆ ಲಭ್ಯ ಇರುವ ಮಾಹಿತಿಯನ್ನು ಚಾರಿತ್ರಿಕ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಇಲ್ಲಿ ರಾಜಪ್ರಭುತ್ವದ ನ್ಯಾಯಾಂಗತ ಪದ್ಧತಿಯನ್ನು ಹೊರತುಪಡಿಸಿ, ಜನಸಾಮಾನ್ಯರ ದೃಷ್ಟಿಕೋನದಿಂದ ಅಧ್ಯಯನಮಾಡಲಾಗಿದೆ. ಚಿತ್ರದುರ್ಗ, ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿನ ಈ ಸಮುದಾಯದ ಸಾಮಾಜಿಕ, ನ್ಯಾಯಾಂಗದ ಕಟ್ಟುಪಾಡುಗಳನ್ನು ವಿಶ್ಲೇಷಿಸುವ ಉದ್ದೇಶ ಇಲ್ಲಿದೆ.

ಬೇಡರು ಆದಿಯಿಂದಲೂ ಸಂಸ್ಕೃತಿ ಮತ್ತು ಆಚರಣೆಗಳ ಹೆಸರಿನಲ್ಲಿ ಶೀಲ, ಶಿಸ್ತು, ನಡವಳಿಕೆಗಳನ್ನು ಉಳಿಸಿಕೊಂಡು ಬಂದಿರುವುದು ಗಮನಾರ್ಹ. ಆದರೆ ಇತ್ತೀಚಿನ ಸಂದರ್ಭಗಳಲ್ಲಂತೂ ಇವರ ಜೀವನ ವಿಧಾನದಲ್ಲಿ ಏಕ ಪ್ರಕಾರತೆ ಉಳಿದಿಲ್ಲ. ಚದುರಿ ಹೋಗಿರುವ ಇವರು ಕರ್ನಾಟಕದ ಮೂಲೆ – ಮೂಲೆಗಳಲ್ಲಿ ಅಂದರೆ ತಮಗಿಷ್ಟವಾದ ನೆಲೆಗಳಲ್ಲಿ ವೈವಿಧ್ಯಮಯವಾದ ಬದುಕನ್ನು ನಡೆಸುತ್ತಿದ್ದಾರೆ. ರಾಜಪ್ರಭುತ್ವಗಳು ಕೈತಪ್ಪಿದಾಗ ಗ್ರಾಮ, ಜನಸಂಖ್ಯೆಗೆ ಅನುಗುಣವಾಗಿ ವಿಶೇಷ ಜವಾಬ್ದಾರಿಗಳನ್ನು ಇವರು ಹಂಚಿಕೊಂಡಿರುತ್ತಾರೆ. ಕರ್ನಾಟಕದಲ್ಲಿನ ಬೇರೆ ಬೇರೆ ಸಮುದಾಯಗಳಲ್ಲಿರುವಂತೆ ಬೇಡರಲ್ಲಿಯೂ ಕಟ್ಟೆಮನೆಗಳಿದ್ದವು. ನಾಯಕರ ಕಟ್ಟೆಮನೆಗಳ ಹೆಸರುಗಳು ಆ ಜನಾಂಗದ ಹಿರಿಯ ವ್ಯಕ್ತಿಗಳು ಹೆಸರಿನ ಜೊತೆ ಸೇರಿರುವ ಉಲ್ಲೇಖಗಳಿವೆ. ಉದಾಹರಣೆಗೆ ತೇಜಸ್ವಿ ಕಟ್ಟೀಮನೆ, ಆರ್.ವಿ. ಕಟ್ಟೀಮನೆ, ಪರಮೇಶ್ವರಪ್ಪ ಕಟ್ಟೆಮನೆ, ಕಟ್ಟೆಬಸಣ್ಣ, ದೊರೆ, ನಾಯಕ, ಗುರಿಕಾರ, ಕಟ್ಟೆನಾಯಕ, ತಳವಾರ ಇತ್ಯಾದಿ. ರಾಜಪ್ರಭುತ್ವದಲ್ಲಿ ಜನಸಾಮಾನ್ಯರಿಗೆ ನ್ಯಾಯ ದೊರಕಿಸಲು ಇಂಥಾ ಕಟ್ಟೆಮನೆಗಳು ಸಹಾಯಕವಾಗಿದ್ದವು. ಇಂದಿನ ವ್ಯವಸ್ಥೆಯಲ್ಲಿ ತಾಲ್ಲೂಕು, ಜಿಲ್ಲಾ ನ್ಯಾಯಾಲಯಗಳು ಇದ್ದಂತೆಯೇ ಈ ಕಟ್ಟೆಮನೆಗಳು. ಇಂದಿನ ನ್ಯಾಯಪಂಚಾಯ್ತಿ ವ್ಯವಸ್ಥೆಯ ಊರುಚಾವಡಿ, ಪೊಲೀಸ್ ಠಾಣೆ, ಕೋರ್ಟುಗಳಲ್ಲಿ ಭಾರತದ ಸಂವಿಧಾನದನ್ವಯವಿರುವುದು ಎಲ್ಲರಿಗೂ ತಿಳಿದ ವಿಚಾರ.

'ಕಟ್ಟೆಮನೆ' ಎಂದರೆ ಜಾತಿಯ ಶ್ರೇಣಿ – ಸಂಘ, ಸಂಸ್ಥೆ ಎಂದು ತಿಳಿಸಲಾಗಿದೆ. ಇಂದು ಕಟ್ಟೆಮನೆಯನ್ನು 'ಪಂಚಾಯತಿ ಕಟ್ಟೆ' ಎಂದು ಕರೆಯುವುದೇ ಹೆಚ್ಚು. ಹೀಗೆಂದರೆ: ಚಾವಡಿ; ಅಪರಾಧಿಯನ್ನು ನೀನು ಕಟ್ಟೆಮನೆ, ಗುರುಮನೆ – ಅರಮನೆಗಳಿಗೆ ವಿಧೇಯನೋ – ಅವಿಧೇಯನೋ ಎಂದು ಕೇಳುವವರು ನಾನು ಹಿಂದೆಂದೂ ಅಪರಾಧ ಮಾಡಿರಲಿಲ್ಲವೆಂದೂ, ಹಳ್ಳಿಯ ಕಟ್ಟೆಮನೆ ಮುಚ್ಚಳಿಕೆ ನೀಡಿತೆಂಬ ವಿವರಕೊಡುತ್ತಾರೆ. ಇನ್ನೊಂದು ಅರ್ಥದಲ್ಲಿ ಕಟ್ಟೆಮನೆ ಗ್ರಾಮಾಧಿಕಾರಿಯ ಮನೆ; ಊರ ಮುಖಂಡರ ಮನೆ ಎಂದಾಗುತ್ತದೆ. ಬುಡಕಟ್ಟು ಸಮುದಾಯಗಳಲ್ಲಿ ಕಟ್ಟೆಮನೆ ಯಜಮಾನನು ಊರಿನ – ಜಾತಿಯ ಮುಖಂಡನೂ ಆಗಿರುತ್ತಿದ್ದ.

ಕರ್ನಾಟಕದಲ್ಲಿ ನೆಲಸಿರುವ ಬೇಡರು ತಮಗೆ ಇಷ್ಟವಾದ ಸ್ಥಳದಲ್ಲಿ ಸಾಮೂಹಿಕ ಭೋಜನ, ವಿವಾಹ, ಹಬ್ಬ – ಹರಿದಿನಗಳನ್ನು ಮಾಡುತ್ತಿದ್ದರು. ಜನಸಂಖ್ಯೆ ಹೆಚ್ಚಿದಂತೆ ಜಾತಿಯಲ್ಲಿ ಕಲಹ, ಸಂಘರ್ಷಗಳು ಹುಟ್ಟಿಕೊಂಡವು. ಅನೈತಿಕ, ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆಗಟ್ಟಲು ಜನಾಂಗದ ಹಿರಿಯರ ನೇತೃತ್ವದಲ್ಲಿ ನ್ಯಾಯಾಂಗವನ್ನು ಭದ್ರಪಡಿಸಲು ಮುಂದಾದರು. ಅದಕ್ಕೆ ತನು ಮನಧನಗಳನ್ನು ಅರ್ಪಿಸುವ ಸಂಕಲ್ಪ ಕೈಗೊಳ್ಳಲಾಯಿತು. ಇದು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮಾಡಿಕೊಂಡ ವ್ಯವಸ್ಥೆಯೇ ಆಗಿತ್ತು.

ಬೇಡ ಜನಾಂಗ ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುವ ಹಂತದಲ್ಲಿರುವಾಗಲೇ ದೊರೆ ಯರಮಂಚಿನಾಯಕ, ದಳವಾಯಿ ಮೊದಲಾದವರು ಸೇರಿ ಬೇಡ ಜನಾಂಗದ ಕಟ್ಟುಪಾಡು, ನೀತಿ – ನಿರ್ಬಂಧಗಳ ಬಗ್ಗೆ ಚಿಂತಿಸುತ್ತಾರೆ. ಜಾತಿ ಕಲಹ (Caste Conflict), ಕೋಮು ಗಲಭೆ (Communal Conflict), ಗೋತ್ರಗಳ ಕಲಹ, ಗುರು – ಪೂಜಾರಿಗಳ, ಆಯಾ ದೇವರುಗಳ ಐಕ್ಯತೆಗಾಗಿ ಮತ್ತು ಎಲ್ಲ ವಿಧವಾದ ವಿವಾದಗಳನ್ನು ಪರಿಹರಿಸಿಕೊಳ್ಳಲು ಕಟ್ಟೆಮನೆಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದ್ದರು. ಹೀಗೆ ಸ್ಥಾಪಿಸಲ್ಪಡುವ ಗುಡಿಕಟ್ಟೆ, ಕಟ್ಟೆಮನೆಗಳಿಗೆ ಯಜಮಾನರುಗಳನ್ನು ನೇಮಕ ಮಾಡುತ್ತಿದ್ದರು. ಅವರಿಗೆ ಗೋತ್ರದ ವಿವಾದಗಳನ್ನು ಬಗೆಹರಿಸುವಂತೆ ಕಾರ್ಯಸೂಚಿ ಸಿದ್ಧಪಡಿಸಿದ್ದರು. ಇದರ ನೇತೃತ್ವವನ್ನು ವಹಿಸಿದ್ದ ಯರಮಂಚಿನಾಯಕ, ಗಾದರಿ ಪಾಲನಾಯಕ, ರಪ್ಪಲಸೂರಿ ಇತರರು ವಹಿಸಿದ್ದರು. ಗೋದಾವರಿ ನದಿ ಪ್ರದೇಶದಲ್ಲಿರುವಾಗ ಕಟ್ಟೆಮನೆಗಳನ್ನು ಸ್ಥಾಪಿಸುವ ವಿಚಾರ ಮಾಡಿದ್ದರು. ಮೂಲತಃ ಆಂಧ್ರದಲ್ಲಿನ ಧಾರ್ಮಿಕ ಕ್ಷೇತ್ರಗಳನ್ನು ಆರಾಧಿಸುವ ಬೇಡರು ವಿಜಯನಗರದ ತರುವಾಯ ನಮಗೆ ದಿಕ್ಕು ತಪ್ಪಿದಂತಾಗಿ ಆನೆಗೊಂದಿ 'ನರಪತಿ ಸಂಸ್ಥಾನ'ದ ಆಶ್ರಯ ಪಡೆಯಬೇಕಾಯಿತು. ನರಪತಿಗಳು ಅರಮನೆ ಮತ್ತು ಗುರುಮನೆಗಳಿಗೆ ಒಡೆಯರಾಗಿದ್ದರು. ಹೀಗಿರುವಾಗ ಬೇಡರ ೧೨ ಪೆಟ್ಟಿಗೆ ದೇವರುಗಳನ್ನು ಆನೆಗೊಂದಿ ಕೋಟೆಯಲ್ಲಿ ಬಂಧಿಸಿಡುತ್ತಾರೆ. ಯರಮಂಚಿನಾಯಕ ಹಾಗೂ ಇತರ ಬೇಡರ ಹಿರಿಯರ ಆದೇಶದಂತೆ ವೀಳ್ಯೆ ಹಿಡಿದು ಕೊಡಗಲುಬೊಮ್ಮ ಎಂಬ ವೀರ ಈ ೧೨ ಪೆಟ್ಟಿಗೆ ದೇವರುಗಳನ್ನು ಕೋಟೆಯನ್ನು ಬೇಧಿಸಿ ತರುತ್ತಾನೆ. ಆಗ ಅವನು ಬೇಡರ ಕಟ್ಟೆಮನೆ ಧಾರ್ಮಿಕ ಹಾಗೂ ಇತರೆ ಕಾರ್ಯಗಳಿಗೆ ಕಾರಣನಾದ. ಇವರು ಕಿರುಪಾಳೆಯಗಾರನಾದರೂ ಬಹಳಷ್ಟು ದಿನ ಇರಲಿಲ್ಲ. ಪಾಳೆಯ ಪಟ್ಟುಗಳ ರಾಜಕೀಯದಿಂದ ಕಟ್ಟೆಮನೆಗಳು ಭಿನ್ನವಾಗಿರುವಂತವು. ಆರಂಭದಲ್ಲಿ ಎಲ್ಲ ಕಡೆ ಕಟ್ಟೆಮನೆಗಳಿದ್ದರೂ ಅವುಗಳ ಅಸ್ತಿತ್ವ ಕಾಪಾಡಿಕೊಂಡಿದ್ದು ಕೆಲವೇ ಮಾತ್ರ. ನಾಯಕನಹಟ್ಟಿ, ಜರಿಮಲೆ, ಗುಡಿಕೋಟೆಗಳು ಪಾಳೆಯಪಟ್ಟುಗಳಾದರೂ ನನ್ನಿವಾಳ, ಗೋನೂರು, ನಾಯಕನಹಟ್ಟಿ ಕಟ್ಟೆಮನೆಗಳಾಗಿದ್ದವು. ನಾಯಕರಲ್ಲಿ ಅತ್ಯಾಚಾರ ನಡೆದಾಗ, ಕುಲ ಕೆಟ್ಟವರನ್ನು, ಹಾದರತನ, ಕಳ್ಳತನ, ಕೆಟ್ಟ ಕೆಲಸ ಮಾಡುವವರನ್ನು ಕುಲದಿಂದ ಹೊರಹಾಕುತ್ತಿದ್ದರು. ಊರಿನ ಪವಿತ್ರ ಸ್ಥಳದಲ್ಲಿ ದೇವಾಲಯ ಕಟ್ಟಿ ಪಂಚಾಯ್ತಿ ಚಾವಡಿಗಳಲ್ಲಿ ಬೇಡ ಸಮುದಾಯದವರು ಸೇರಿ ನಡೆಸುವ ನ್ಯಾಯ ಪಂಚಾಯ್ತಿ ಸ್ಥಳಕ್ಕೆ 'ಕಟ್ಟೆಮನೆ' ಎಂದು ಹೆಸರಾಯಿತು. ಕಟ್ಟೆಮನೆಗಳು ಬೇಡರ ಸರ್ವತೋಮುಖ ಅಭಿವೃದ್ಧಿಯನ್ನು ಧ್ಯೇಯವಾಗಿಟ್ಟುಕೊಂಡಿದ್ದವು ಎಂಬುದರಲ್ಲಿ ಎರಡು ಮಾತಿಲ್ಲ.

ಚಿತ್ರದುರ್ಗ ಜಿಲ್ಲೆ ಮತ್ತು ಅದರ ಆಸುಪಾಸಿನಲ್ಲಿ (ಚಿನ್ನಹಗರಿ ನದಿ ಪರಿಸರ ಮತ್ತು ಬೇಡರನಾಡು) ಬೇಡನಾಯಕರ ಕಟ್ಟೆಮನೆಗಳಿದ್ದವು. ೧೨ ಪೆಟ್ಟಿಗೆ ದೇವರುಗಳ ಸ್ಥಳಗಳನ್ನೇ ಹೋಲುವ ಕಟ್ಟೆಮನೆಗಳಿದ್ದವೆಂದು ಹೇಳಲಾಗಿದೆ. ಆದರೆ ಬೇಡರಲ್ಲಿ ಕ್ರಮೇಣ ೩ ಕಟ್ಟೆಮನೆಗಳು ಮಾತ್ರ ಉಳಿದಿವೆ (ಗೋನೂರು, ನನ್ನಿವಾಳ ಮತ್ತು ನಾಯ್ಕನಹಟ್ಟಿ). ಉತ್ಪ್ರೇಕ್ಷೆಗೆ ೧೨ ಕಟ್ಟೆಮನೆಗಳನ್ನು ಹೇಳಿಕೊಳ್ಳುತ್ತಾರೆ.

**ಆ ೧೨ ಕಟ್ಟೆಮನೆಗಳೆಂದರೆ :**

೧. ರಾಯಲುಕಟ್ಟೆ : ಪದಿಮುತ್ತಿಗಾರು ಕಟ್ಟೆಮನೆ, ಪದಿನಾರು ದೇವರುಹಟ್ಟಿ, ಮೊಳಕಾಲ್ಮೂರು ತಾಲೂಕು.

೨. ರಾಗಿಮಾನುಕಟ್ಟೆ : ಕಂಪಳದೇವರ ಕಟ್ಟೆಮನೆ, ಕಂಪಳ ದೇವರಹಟ್ಟಿ, ಮೊಳಕಾಲ್ಮೂರು ತಾಲೂಕು.

೩. ರಚ್ಚಕಟ್ಟೆ : ಕಲ್ಲೇದೇವರಪುರ ಕಟ್ಟೆಮನೆ, ಕಲ್ಲೇದೇವರಪುರ, ಜಗಳೂರು ತಾಲೂಕು

೪. ಮೊಲಕಾಲಕಟ್ಟೆ : ಚಿಂತಗುಂಟ್ಲು ಕಟ್ಟೆಮನೆ, ಕುದಾಪುರ, ಚಳ್ಳಕೆರೆ ತಾಲೂಕು.

೫. ನಾಯಕನಹಟ್ಟಿ (ನೂಕಲಕಟ್ಟೆ) : ಹಟ್ಟಿ ಮಲ್ಲಪ್ಪನಾಯಕ ಕಟ್ಟೆಮನೆ, ನಾಯಕನಹಟ್ಟಿ, ಚಳ್ಳಕೆರೆ ತಾಲೂಕು.

೬. ಗೋನೂರು (ಏಕಲುಕಟ್ಟೆ) : ಸೂರಪ್ಪನಾಯಕ ಕಟ್ಟೆಮನೆ, ಹೊಡೇಂ (ಗೋನೂರು / ಚಿತ್ರದುರ್ಗ) ಕೂಡ್ಲಿಗಿ ತಾಲೂಕು

೭. ಪೋಕಲಕಟ್ಟೆ : ಚಿನ್ನಪಾಲನಾಯಕ ಕಟ್ಟೆಮನೆ, ನನ್ನಿವಾಳ, ಚಳ್ಳಕೆರೆ ತಾಲೂಕು.

೮. ಆಚಾರಕಟ್ಟೆ : ಕಾಮಗೇತನಹಳ್ಳಿ ಕಟ್ಟೆಮನೆ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ.

೯. ಗಿರಿಕಲಕಟ್ಟೆ : ಜಂಬುದ್ವೀಪಗಳಗುಡ್ಡೆ ಕಟ್ಟೆ ಮನೆ, ಥಳಕು (ಬಂಜಗೆರೆ) ಚಳ್ಳಕೆರೆ ತಾಲೂಕು ಈ ಬಗ್ಗೆ ಇನ್ನೂ ೩ ಕಟ್ಟೆಮನೆಗಳ ಹೆಸರು ಮಾತ್ರ ಪುನರಾವರ್ತನೆಯಾಗುತ್ತವೆ. ಯಾವುದೋ ಒಂದು ಹಂತಕ್ಕೆ ಬೇಡ ಜನಾಂಗ ಇಬ್ಭಾಗವಾದಾಗ ದೊರೆ ಯರಮಂಚಿ ನಾಯಕ ಐವೋದಿ (ಗೌರಸಮುದ್ರ) ಮಠವನ್ನು ಕೇಂದ್ರಸ್ಥಾನವಾಗಿ ಮಾಡಿಕೊಂಡು ಅಧಿಕಾರ ನಡೆಸುತ್ತಿದ್ದ. ಆ ಕಟ್ಟೆಮನೆಗಳ ವಿವರ ಇಂತಿದೆ :

೧. ನಲ್ಲಚೆರುವು ಓಬಳದೇವರು ಕಟ್ಟೆಮನೆ (ರುದ್ರಮ್ಮನಹಳ್ಳಿ)

೨. ಪೆದ್ದತಿರುಮಲ ದೇವರ ಕಟ್ಟೆಮನೆ (ಪದಿಮುತ್ತಿಗಾರ) (ಬೇಡರೆಡ್ಡಿಹಳ್ಳಿ)

೩. ಸೂರಲಿಂಗನ ಕಾಮಗೇತನಹಳ್ಳಿ ಕಟ್ಟೆಮನೆ (ಆಚಾರ) (ಕಾಟಪ್ಪನಹಟ್ಟಿ – ವಿಚಾರದ ಕಟ್ಟೆಮನೆ)

೪. ಕಂಪಳದೇವರ ಕಟ್ಟೆಮನೆ (ಕಂಪಳದೇವರಹಟ್ಟಿ)

೫. ಕಲ್ಲೇದೇವರಪುರದ ರಚ್ಚೆ ಕಟ್ಟೆಮನೆ (ಕಲ್ಲೇದೇವರಪುರ)

೬. ಜಂಬುದ್ವೀಪದ ಗಿಲುಕಲು ಕಟ್ಟೆಮನೆ (ಕುದಾಪುರ – ತಳಕು – ಬಂಜಗೆರೆ) ಇತ್ಯಾದಿ.

**ಕ್ರಮೇಣ ೩ ಕಟ್ಟೆಮನೆಗಳಾದ ಬಗ್ಗೆ ಉಲ್ಲೇಖವಿದೆ (ಆಂಧ್ರದಿಂದ ವಲಸೆ ಬಂದಾಗ)**

೧. ಪೆನ್ನೊಬಳ ದೇವರ ಕಟ್ಟೆಮನೆ – ಸುರಪತಿ

೨. ಅಹೋಬಲ ದೇವರ ಕಟ್ಟೆಮನೆ – ನರಪತಿ

೩. ಬುಗ್ಗೋಬಳ ದೇವರ ಕಟ್ಟೆಮನೆ – ಗಜಪತಿ (ಹೊಸಹಟ್ಟಿ ಕೂಡ್ಲಿಗಿ) ಮುಖಂಡರಾಗಿದ್ದರು. ಓರಿಸ್ಸಾದ (ಕಳಿಂಗ) ಗಜಪತಿ, ವಾರಂಗಲ್ಲಿನ ಕಾಕತೀಯ, ಆನೆಗೊಂದಿ ನರಪತಿ ಮತ್ತು ರಾಯಲ ಸೀಮೆ, ಬಯಲು ಸೀಮೆಗಳನ್ನು ಈ ಕಟ್ಟೆಮನೆಗಳು ಹೊಂದಿವೆ.

ಈ ಸಂದರ್ಭದಲ್ಲಿ ೩ ಕಟ್ಟೆಮನೆಗಳು, ೩ ಜನ ಪೂಜಾರಿ, ೩ ಮಂದಿ ನಾಯಕ, ೩ ಮಂದಿ ದಾಸರು, ೭ ಜನ ಹಿರಿಯರು, ೭೭ ಮಂದಿ ಮನ್ನೆಗಾರರನ್ನು ಮತ್ತು ಕಿಲಾರಿಗಳನ್ನು ದೊರೆಗಳು ನೇಮಿಸಿದ್ದರು.

**ಕರ್ನಾಟಕದ ಬೇಡರ ೩ ಕಟ್ಟೆಮನೆಗಳು (ಆನೆಗೊಂದಿ ರಾಜರ ಅಪ್ಪಣೆಯಂತೆ ಸ್ಥಾಪನೆ)**

೧. ನನ್ನಿವಾಳ – ನಲ್ಲಗೇತಿ – ಗಟ್ಟಿಮುತ್ತಿನಾಯಕ – ದೊರೆಬಯ್ಯಣ್ಣ

೨. ನಾಯಕನಹಟ್ಟಿ – ಕಾಮಗೇತಿ – ಮೀಸಲುನಾಯಕ – ದೊರೆತಿಪ್ಪೇಸ್ವಾಮಿ

೩. ಗೋನೂರು – ಬುಲ್ಲುಡುಲೋರು – ಬೋಸೆನಾಯಕ – ಪಾಪನಾಯಕ

ನಾಯಕರು ಪಾಳೆಯಗಾರರಾಗಿ ಮುಂದುವರೆದಾಗ ನಿಡಗಲ್ಲು, ರತ್ನಗಿರಿ ಮತ್ತು ಹರತಿ ಕೋಟೆಗಳನ್ನು ಕಟ್ಟೆಮನೆಗಳಾಗಿ ಹೊಂದಿದ್ದರೆಂದು ತಿಳಿದುಬರುತ್ತದೆ. ಕೆಲವು ಸಂಸ್ಥಾನಗಳಲ್ಲಿ ಇಂದಿಗೂ ಕಟ್ಟೆಮನೆಯ ಪರಿಸ್ಥಿತಿ ಬಗ್ಗೆ ರಾಜಪರಂಪರೆಯವರು ವಿಶ್ಲೇಷಿಸುತ್ತಾರೆ.

**೩. ಜನ ಪೂಜಾರಿಗಳು (ಆನೆಗೊಂದಿರಾಜರ ಅಪ್ಪಣೆಯಂತೆ ನೇಮಕ)**

೧. ಕಾಮಗೇತಿ

೨. ನಲ್ಲಗೇತಿ

೩. ಬುಲ್ಲುಡುಲು (ಎರಿಪೋತಿ)

**೩ ಜನ ದಾಸಯ್ಯನವರು (ಆನೆಗೊಂದಿ ರಾಜರ ಅಪ್ಪಣೆಯಂತೆ ನೇಮಕ)**

೧. ಮುಂಡಾಸು ದಾಸರಿ

೨. ಗೊಡಗು ದಾಸರಿ

೩. ಬೋಡಿ ದಾಸರಿ

**೭ ಜನ (ಪೆದ್ದಲು) ಹಿರಿಯರು (ಆನೆಗೊಂದಿ ರಾಜರ ಅಪ್ಪಣೆಯಂತೆ ನೇಮಕ) ಬೇಡರ ವ್ಯಾಜ್ಯಗಳು ಈ ೭ ಜನ ಹಿರಿಯರ ಸಮ್ಮುಖದಲ್ಲಿ ತೀರ್ಮಾನವಾಗುತ್ತಿದ್ದವು.**

೧. ಕಾಟಬ್ಬನವರು

೨. ಯರಗೊಡ್ಲವನು

೩. ನಳಬಾಳಸಿವಾಡು

೪. ಗಡಗಿಲೋಡು

೫. ವರಗನೋಡು

೬. ಚಿನ್ನಮುತ್ತಿವಾಡು

೭. ಜೂಗನೋಡು

ಈ ಏಳು ಜನ ಹಿರಿಯರಿಗೆ ತೆಲುಗಿನಲ್ಲಿ ‘ಪೆದ್ದಲು’ ಎಂದು ಕರೆಯುತ್ತಾರೆ. ಬೋಡಿಕಾಟ ನಾಡು, ಗಾದಿಪ್ಪಲಾರು, ಪಡ್ಲೋಡು, ಪರಮೇಶ್ವರನಾರು, ಕುರುಬಲೋರು, ಗೂನೋಡು ಮತ್ತು ಕಾಮನಾಡು ಎಂಬ ಈ ಏಳುಜನ ಹಿರಿಯರು ನಾಯಕ ಸಮುದಾಯದ ಸಾಂಸ್ಕೃತಿಕ ನಾಯಕರಾಗಿಯೂ ಪ್ರಮುಖ ಪಾತ್ರ ವಹಿಸುತ್ತಾರೆ.

**೯ ಜನ ಮುತ್ತಿಗಾರರು (ಶ್ರೀಶೈಲ ಮಲ್ಲಿಕಾರ್ಜುನನ ವರಪ್ರಸಾದದಿಂದ ದೇವರೆತ್ತುಗಳನ್ನು ಮೇಯಿಸಿಕೊಂಡು ಬಂದವರು)**

೧. ಕಗ್ಗಲಾರು – ಮಲ್ಲೂರರು

೨. ಗಜಗನಾರು – ಬೆದನೂರು (ಮಂದಲ)

೩. ಗವಿನಹಟ್ಟಿನೂರು

೪. ಬೋಡಿ ಬೋರವನವರು, ಯರಬೊಮ್ಮನವರು

೫. ಮಾಸಿನವರು – ಪರಮೇಶಿನವರು

೬. ಮಲ್ಲಮುತ್ತೆ

೭. ಪೆಯಿಲುಮುತ್ತೆ, ನಲ್ಲಟಬ್ಬನೂರು

**೧೨ ಪೆಟ್ಟಿಗೆ ದೇವರುಗಳು**

ಬೇಡರ ಬದುಕೇ ವಲಸೆಯಿಂದ ಕೂಡಿದ್ದಿತು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವಾಗ ಪುಟ್ಟಿಯಲ್ಲಿ ದೇವರನ್ನು ಇಟ್ಟು ಹೊತ್ತೊಯ್ಯುತ್ತಿದ್ದರು. ಹೀಗೆ ಹಂಪೆ – ಆನೆಗೊಂದಿ ನರಪತಿ ಸಂಸ್ಥಾನದಲ್ಲಿ ೧೨ ಪೆಟ್ಟಿಗೆ ದೇವರುಗಳು ಹುಟ್ಟಿವೆ.

೧. ಪಚ್ಚಪದಿ ದೊಡ್ಡ ತಿರುಮಲದೇವರು – ಬೇಡರೆಡ್ಡಿಹಳ್ಳಿ – ಚಳ್ಳಕೆರೆ – ತಾ ||

೨. ಕಾಪು ಕಂಪಳ ರಂಗಸ್ವಾಮಿ – ಕಂಪಳದೇವರಹಟ್ಟಿ – ಮೊಳಕಾಲ್ಮುರು – ತಾ ||

೩. ದಡ್ಲು ಮಾರಮ್ಮ – ದೇವರಹಳ್ಳಿ – ಚಳ್ಳಕೆರೆ – ತಾ ||

೪. ಚೆಂತಗುಂಟ್ಲ ಬೋರದೇವರು – ಕುದಾಪುರ – ಚಳ್ಳಕೆರೆ – ತಾ ||

೫. ಮಂದಬೊಮ್ಮದೇವರು – ದೊಣಮಂಡಲಹಟ್ಟಿ – ಚಳ್ಳಕೆರೆ – ತಾ ||

೬. ಪೆದ್ದಕ್ಕ ರಾಯಮ್ಮ – (ಮಾರಮ್ಮ) ಗೌರಸಮುದ್ರ – ಚಳ್ಳಕೆರೆ – ತಾ ||

೭. ಮಂಗಪೋಟೆ ಓಬಳದೇವರು – ತಾಳಿಕೆರೆ – ರಾಯದುರ್ಗ – ಅನಂತಪುರ ಜಿಲ್ಲೆ ||

೮. ನಲ್ಲಚೆ(ಜೆ)ರವು ಓಬಳದೇವರು – ವರವು – ಚಳ್ಳಕೆರೆ – ತಾ ||

೯. ಮಲ್ಲಿನಾಯಕ ಬೊಮ್ಮದೇವರು – ವರವು – ಚಳ್ಳಕೆರೆ – ತಾ ||

೧೦. ಬಂಗಾರಿ ದೇವರು – ಬಂಗಾರ ದೇವರಹಟ್ಟಿ – ನನ್ನಿವಾಳ – ಚಳ್ಳಕೆರೆ – ತಾ ||

೧೧. ಬೋಸೇದೇವರು – ಬೋಸೇದೇವರಹಟ್ಟಿ – ಚಳ್ಳಕೆರೆ – ತಾ ||

೧೨. ಮಾಕನಡಕು ಓಬಳದೇವರು – ಮಾಕನಡಕು – ಕೂಡ್ಲಿಗಿ – ತಾ ||

ಈ ಕೆಳಗಿನ ನಾಲ್ಕು ಪೆಟ್ಟಿಗೆ ದೇವರುಗಳು ಕಾಮಗೇತಿಗೆ ಸೇರಿವೆ: ಚಿತ್ರದೇವರು – ಉಡೇಗೋಲ ರಾಯದುರ್ಗ – ತಾಲೂಕು, ಕಾಟಮಲಿಂಗೇಶ್ವರ – ಕಾಟಪ್ಪನಹಟ್ಟಿ, ಪದಿನಾನ ದೇವರು – ರಾಯಪುರ, ಗೆದ್ದಲಗಟ್ಟೆ – ಓಬಳದೇವರು ದಾಸರಮುತ್ತೇನಹಳ್ಳಿ ಇವುಗಳನ್ನು ಪೆಟ್ಟಿಗೆ ದೇವರುಗಳ ಸಾಲಿಗೆ ಸೇರಿಸುತ್ತಾರೆ.

ಈ ಮೇಲಿನಂತೆ ೩ ಕಟ್ಟೆಮನೆ, ೩ ಜನ ಪೂಜಾರಿ, ೩ ಜನ ದಾಸರು, ೩ ಜನ ನಾಯಕರು, ೭ ಜನ ಹಿರಿಯರು, ೯ ಜನ ಮುತ್ತಿಗಾರರು, ೧೨ ಪೆಟ್ಟಿಗೆ ದೇವರುಗಳು ಬೇಡರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿವೆ. ಇವುಗಳಿಂದ ಜನಾಂಗದ ಪರಿವರ್ತನೆ, ಅಭಿವೃದ್ಧಿ ಆದದ್ದು ನಿಜ. ಪ್ರಾದೇಶಿಕ, ಸಾಮಾಜಿಕ, ಸಾಂಸ್ಕೃತಿಕ ಕಾರಣಗಳಿಂದ ಹಾಗೂ ನಂಬಿಕೆ, ಆಚರಣೆ, ಆದರ್ಶ ಮೌಲ್ಯಗಳಿಂದ ಮೇಲಿನಂತೆ ಎಲ್ಲ ಹಂತಗಳ ನ್ಯಾಯಾಂಗ ವ್ಯವಸ್ಥೆಯನ್ನು ರೂಪಿಸಿಕೊಂಡಿರುತ್ತಾರೆ. ಈ ವ್ಯವಸ್ಥೆ ಇಂದಿನ ಪೊಲೀಸ್ ಠಾಣೆ, ಕೋರ್ಟ್, ಕಚೇರಿಗಳಿದ್ದಂತೆ ಎಂದು ಮತ್ತೊಮ್ಮೆ ಹೇಳಬೇಕಾಗಿಲ್ಲ. ನಾಯಕರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಕಟ್ಟೆಮನೆ ಸ್ಥಾಪಿಸಿದ್ದು ನಿಜ. ಅವು ಚಾರಿತ್ರಿಕ – ಸಾಂಸ್ಕೃತಿಕವಾಗಿ ಮಹತ್ವ ಪಡೆದಿದ್ದು ಇತ್ತೀಚೆಗೆ ಪ್ರತಿಯೊಂದು ವಿಚಾರಕ್ಕೂ ಕಟ್ಟೆಮನೆಯ ಯಜಮಾನ ನಿರ್ಣಾಯಕ ವ್ಯಕ್ತಿಯಾಗಿರುತ್ತಾನೆ. ೭ ಜನ ಹಿರಿಯರಿಂದ ಕುಲಸಾವಿರ ಅಥವಾ ಕೋಮುದಾರರು ಕಟ್ಟೆಮನೆಗಳಿಗೆ ಸೂಕ್ತ ಸಲಹೆ – ನಿರ್ದೇಶನ ನೀಡುತ್ತಾರೆ.

**೩.೧. ನನ್ನಿವಾಳ ಕಟ್ಟೆಮನೆ**

'ನನ್ನಿವಾಳ' ಚಳ್ಳಕೆರೆ ತಾಲೂಕಿನ ಒಂದು ಗ್ರಾಮ. ಚಳ್ಳಕೆರೆಯಿಂದ ಚಿತ್ರದುರ್ಗಕ್ಕೆ ರಾಮಜೋಗಿಹಳ್ಳಿ – ಹಾಯ್ಕಲ್ ಮಾರ್ಗವಾಗಿ ಹೋದರೆ ಈ ನನ್ನಿವಾಳ ಸಿಗುತ್ತದೆ. ಇಲ್ಲಿ ಗಾದರಿಪಾಲನಾಯಕ, ಬಂಗಾರುದೇವರು ಮತ್ತು ಜಗಳೂರು ಪಾಪಜ್ಜನಿಗೆ ಸಂಬಂಧಿಸಿದ ಧಾರ್ಮಿಕ ನೆಲೆಗಳಿವೆ. ಇಂಥಾ ಗ್ರಾಮದಲ್ಲಿ ಕಟ್ಟೆಮನೆ ಸ್ಥಾಪನೆಯಾದದ್ದು ಅಷ್ಟೇ ಮಹತ್ವವಾದ ಘಟನೆಯಾಗಿದೆ.

ಯರಮಂಚಿನಾಯಕ ಒಮ್ಮೆ ಗೆದ್ವಾಲ್ ಸೀಮೆಯ ಮುಸಲ್ಮಾನ ಅರಸನನ್ನು (ಆದಿಲ್‌ಷಾಹಿ ಅಥವಾ ನಿಜಾಮ?) ಅಂತ್ಯಗೊಳಿಸಿ ಮಳೆಲು ರಾಜನನ್ನು ಬಿಡುಗಡೆ ಮಾಡಿಕೊಂಡು ಬರುವಾಗ ಆ ರಾಜನ ಮಗಳು ನನ್ನಮ್ಮನನ್ನು ಕರೆತರುತ್ತಾನೆ. ಬೇಡ ಕಂಪಳದ ನನ್ನುಲ ಚಿನ್ನಪಾಲನಾಯಕನಿಗೂ – ನನ್ನಮ್ಮನಿಗೂ ಪ್ರೀತಿ ಬೆಳೆದು ಯರಮಂಚಿನಾಯಕನ ನೇತೃತ್ವದಲ್ಲಿ ಅವರಿಬ್ಬರು ಒಂದಾಗುತ್ತಾರೆ. ಒಮ್ಮೆ ನನ್ನಮ್ಮ ಚಿನ್ನಪಾಲನಾಯಕನಿಗೆ ನಿನ್ನ ಕುಲದಲ್ಲಿ ಸೇರಿ ನಿನ್ನವಳಾಗಿ ಬಾಳಿಬದುಕಿದೆ. ಆದರೆ ನಿನ್ನಿಂದ ನನ್ನ ಕುಲಕ್ಕೆ ಏನಾದರೂ ಕೊಡುಗೆ ಸಲ್ಲಿಸೆಂದು ಬೇಡುತ್ತಾಳೆ. ನಾಯಕ ನನ್ನಮ್ಮನಿಗೆ ಏನು ಬೇಕು ಕೇಳೆಂದು ಹೇಳುತ್ತಾನೆ. ಅದರಂತೆ ಅವಳು ನನ್ನ ಹೊಟ್ಟೆಯಲ್ಲಿ ಹುಟ್ಟಿದ ಗಂಡುಮಕ್ಕಳಿಗೆ ಮುಂಜಿ ಮಾಡಿಸಬೇಕು. ನೀನು ದರ್ಭಾರಿನಲ್ಲಿರುವಾಗ ನಮ್ಮ ತಂದೆಯವರಂತೆ ಒಂದು ಕೈಯಿಂದ ಸಲಾಂ ತೆಗೆದುಕೊಳ್ಳಬೇಕು. ನನ್ನ ವಂಶದ ಹೆಸರು ನಾನಿರುವ ಕಡೆ ಉಳಿಯಬೇಕು ಎಂದಳು. ನಾಯಕನು ಅವಳ ವ್ಯಾಮೋಹಕ್ಕೆ ಒಳಗಾಗಿ ಕೇಳಿದ ಬೇಡಿಕೆಗಳೆಲ್ಲವನ್ನು ಈಡೇರಿಸಲು ಒಪ್ಪಿಕೊಂಡ. ಆ ಗ್ರಾಮಕ್ಕೆ ನನ್ನಿವಾಳವೆಂದು ಹೆಸರಿಟ್ಟು, ಮಕ್ಕಳಿಗೆ ಕಟ್ಟೆಮನೆ ಅಧಿಕಾರ, ಮುಂಜಿ

ಮಾಡುವ ಪದ್ಧತಿ ಇತ್ಯಾದಿ ಬೇಡಿಕೆಗಳ ಜೊತೆಗೆ ನನ್ನಮ್ಮನನ್ನೂ ನನ್ನಿವಾಳದ ದೊರೆಸಾನಿಯೆಂದು ಕರೆದನು. ಈ ನನ್ನಿವಾಳದ ಕಟ್ಟೆಮನೆ ವ್ಯಾಪ್ತಿಯಲ್ಲಿ ಅನೇಕ ಗ್ರಾಮಗಳು ಬರುತ್ತಿವೆ. ಬಂಗಾರು ದೇವರಹಟ್ಟಿ ತೊಡಲಾರಹಟ್ಟಿ, ಪೆತ್ತಮ್ಮಾರಹಟ್ಟಿ, ಬೋರಪ್ಪನಹಟ್ಟಿ, ಕರೆಕಲ್ಲಾಟ್ಟಿ, ದೊರೆಗಳಟ್ಟಿ, ಚಿತ್ರೈಯ್ಯನಹಟ್ಟಿ ಮೊದಲಾದವು. ಈ ಕಟ್ಟೆಮನೆಗೆ ಅನೇಕ ಮಂದಿ ನಾಯಕರು ಆಗಿ ಹೋಗಿದ್ದು, ಈಗ ಈ ಕಟ್ಟೆಮನೆಗೆ ನಾಯಕನಾಗಿ ದೊರೆ ಬಯ್ಯಣ್ಣನನ್ನು ಮತ್ತು ಪೂಜಾರಿ ಸೂರಯ್ಯನನ್ನು ಮುಖಂಡರು ನೇಮಿಸಿದ್ದಾರೆ (ಮಧ್ಯಕಾಲೀನ ಕರ್ನಾಟಕದಲ್ಲಿ ಇದಕ್ಕೆ ಪೂರಕವೆಂಬಂತೆ ಅಂತರ್ಜಾತೀಯ ವಿವಾಹ, ವರ್ಣಸಂಕರ, ಸಂಕೀರ್ಣ ಜಾತಿಗಳಾಗಿದ್ದು ಕಂಡುಬರುವುದು ಬೇಡರಲ್ಲಿ ವಿಶೇಷವಾಗಿದೆ). ಮ್ಯಾಸಬೇಡರು ಜಾತ್ಯಾತೀತ ಲಕ್ಷಣಗಳನ್ನು ಹೊಂದಿರುವುದು ವಿಶೇಷ. ಅವರ ದೂರದೃಷ್ಟಿ, ಮನೋವೈಶಾಲ್ಯತೆ ತೋರುತ್ತದೆ.

**೩.೧. ಗೋನೂರು ಕಟ್ಟೆಮನೆ**

ಚಿತ್ರದುರ್ಗ ನಗರಕ್ಕೆ ಸಮೀಪದಲ್ಲಿರುವ ಗ್ರಾಮ ಗೋನೂರು. ದುರ್ಗದಿಂದ ಹಾಯ್ಕಲ್‌ಗೆ ಬರುವ ಮಾರ್ಗದಲ್ಲಿ ಈ ಗ್ರಾಮ ಸಿಗುತ್ತದೆ. ಚಾರಿತ್ರಿಕ ಮಹತ್ವ ಪಡೆದ ಗ್ರಾಮ ಗೋನೂರಿಗೆ ಒಂದು ತಿರುವು ಸಿಕ್ಕಿದ್ದು ಕಟ್ಟೆಮನೆ ಆದ ಮೇಲೆಯೇ. ಈ ಕಟ್ಟೆಮನೆಯ ಯಜಮಾನ ಸೂರಪ್ಪನಾಯಕ. ನಂತರ ಆತನ ವಂಶಸ್ಥರಿಂದ ಈ ಸಂಸ್ಕೃತಿ ಮುಂದುವರೆದಿದೆ. ಹೂಡೇಂ ಗ್ರಾಮದ (ಕೂಡ್ಲಿಗಿ – ತಾ|| ಬಳ್ಳಾರಿ – ಜಿಲ್ಲೆ) ಬೋಸೆಮಲ್ಲನಾಯಕ ಇದರ ನಾಯಕನಾಗಿದ್ದ. ಅವರು ದಿವಂಗತರಾದ ಮೇಲೆ ಹಿರಿಯ ಮಗನಾದ ಪಾಪನಾಯಕನು ಕಟ್ಟೆಮನೆ ದೊರೆಯಾಗಿ (ನಾಯಕ)ರುವನು. ಹಿಂದೆ ಗೋನೂರಿನಲ್ಲಿ ಪಿಂಜಾರ ಬುಡ್ಡಯ್ಯನ ಮಗಳ ಸಂಬಂಧ ಬೆಳೆಸಿದ್ದರಿಂದ ಆ ಹೆಸರನ್ನೇ ಕಟ್ಟೆಮನೆಗೆ ಇಟ್ಟಿದ್ದ. ಬೇಡರ ಸಂಸ್ಕೃತಿಗೆ ವಿರುದ್ಧವಾಗಿ ನಡೆದುಕೊಂಡಿದ್ದರಿಂದ (ಏಕಲಕಟ್ಟೆ) ೧೨ ಪೆಟ್ಟಿಗೆಗಳ ಪಟ್ಟಿಯಿಂದ ಇದನ್ನು ತೆಗೆದು ಹಾಕಿದರಂತೆ. ಗೋನೂರು ದೊರೆ ಸೂರಪ್ಪನಾಯಕನಿಗೆ ಅವಮಾನ ಸಹಿಸಿಕೊಳ್ಳಲಾಗಲಿಲ್ಲ. ಇತ್ತ ಹಟ್ಟಿ ಮಲ್ಲಪ್ಪನಾಯಕ, ನನ್ನಿವಾಳದ ಚಿನ್ನಪಾಲನಾಯಕ ಚರ್ಚಿಸಿ ಯರಮಂಚಿ ನಾಯಕರನ್ನು ಅವಮಾನಗೊಳಿಸಿ ಮ್ಯಾಸ ಮಂಡಲದಿಂದ ದೂರಮಾಡುವ ಸಂಚು ರೂಪಿಸಿದರು. ಇದರ ವ್ಯಾಪ್ತಿಗೆ ೩೩ ಹಳ್ಳಿ, ೭೭ ಹಟ್ಟಿ ದೊರೆಗಳು ಸೇರಿದ್ದವು.

ಸಾಸಲಹಟ್ಟಿ, ಮುತ್ತೈನಹಟ್ಟಿ, ಮಲ್ಲಾಪುರ, ಹೊಸಮಾಳಿಗೆ, ಕೂನಬೇವು, ಚಿಂತಲಕಟ್ಟೆ, ಬೆಳಗಟ್ಟೆ, ಹಾಯ್ಕಲ್ ಇತರ ಸ್ಥಳಗಳು ಗೋನೂರು ಕಟ್ಟೆಮನೆ ವ್ಯಾಪ್ತಿಗೆ ಸೇರಿದ್ದವು. ಅನೇಕ ಘಟನೆ, ಸಂಘರ್ಷಗಳನ್ನು ಪಂಚಾಯ್ತಿ ಮೂಲಕ ತೀರ್ಮಾನಗೊಳಿಸಿದ ಕೀರ್ತಿ ಈ ಕಟ್ಟೆಗೆ ಸಲ್ಲುತ್ತದೆ.

**೩.೩. ನಾಯಕನಹಟ್ಟಿ ಕಟ್ಟೆಮನೆ**

ನಾಯಕ ಜನಾಂಗದ ೩ ಕಟ್ಟೆಮನೆಗಳಲ್ಲಿ ನಾಯಕನಹಟ್ಟಿಯು ಒಂದು. ಇದು ಚಳ್ಳಕೆರೆ ತಾಲೂಕಿನ ಐತಿಹಾಸಿಕ ಸ್ಥಳ ಹಾಗೂ ಹೋಬಳಿ ಕೇಂದ್ರ. ನಾಯಕನಹಟ್ಟಿಯನ್ನು ಆಳಿದ ಪಾಳೆಯಗಾರರ ವಂಶಸ್ಥರೇ ಈ ಕಟ್ಟೆಮನೆಯ ಯಜಮಾನ. ಅಥವಾ ನಾಯಕರಾಗಿರುವುದು ವಿಶೇಷ. ಅನೇಕ ಬಗೆಯ ವ್ಯಾಜ್ಯಗಳನ್ನು ಈ ಕಟ್ಟೆಮನೆಯಿಂದ ತೀಮಾನಿಸಲಾಗಿದೆ. ಇದಕ್ಕೆ ಸಂಬಂಧಿಸಿದ ವಂಶಸ್ಥರು ನಾಯಕನಹಟ್ಟಿ, ಪರುಶುರಾಂಪುರ, ಚಿತ್ರದುರ್ಗ ತಾಲೂಕಿನ ಮಲ್ಲಾಪುರ ಗ್ರಾಮದಲ್ಲಿದ್ದಾರೆ. ಇದರ ವ್ಯಾಪ್ತಿಗೆ ಬೋಸೇದೇವರಹಟ್ಟಿ, ನಲಗೇತಲಹಟ್ಟಿ, ದೊಣಮಂಡ್ಲಹಟ್ಟಿ, ಜಾಗನೋರಹಟ್ಟಿ, ಇತರ ಸ್ಥಳಗಳು ಸೇರಿದ್ದವು. ನಾಯಕನಹಟ್ಟಿ ಕಟ್ಟೆಮನೆ ವ್ಯಾಪ್ತಿಯಲ್ಲಿ ಕಾಮಗೇತಿಗೆ ಪೂಜಾರಿ ಹಕ್ಕು ಕೊಟ್ಟಿರುತ್ತಾರೆ.

ಮುತ್ತಿಗಾರಹಳ್ಳಿ ಸಂಸ್ಥಾನ ಇದರಮತೆ ಶೈವ ಪಂಥದ ನಾಯಕರಿಗೆ ಕೇವಲ ಕಟ್ಟೆಮನೆಗಳೇ ಅಲ್ಲದೆ ಇಡೀ ಸಮಾಜಕ್ಕೆ ಧಾರ್ಮಿಕ ನೆಲೆ ಮತ್ತು ಗುರುಸ್ಥಾನವಾದ ಕಂಪಳದೇವರಹಟ್ಟಿಯು (ಚಿಕ್ಕುಂತಿ) ನ್ಯಾಯಪಂಚಾಯಿತಿಯ ಸರ್ವೋನ್ನತ ಸ್ಥಾನ ಪಡೆದಿತ್ತು. ಬುಡಟ್ಟು ಜನರಿಗೆ ಧಾರ್ಮಿಕ ನೆಲೆಯಾಗಿರುವುದು ಸ್ಪಷ್ಟ. ಮ್ಯಾಸ ಮಂಡಳಿಯ ಮುಖಂಡರು ಇಲ್ಲಿನ ಕಾರ್ಯವೈಖರಿಗಳನ್ನು ಮಾಡುತ್ತಾರೆ. ಮೊಗಲಹಳ್ಳಿ, ಕೊಂಡ್ಲಹಳ್ಳಿ, ಕೋನಸಾಗರ, ಕೊಮ್ಮನಪಟ್ಟೆ, ಹಾನಗಲ್ಲು, ರಾಯಾಪುರ, ಯರವ್ವನಹಳ್ಳಿ, ಪದಿನಾರುದೇವರಹಟ್ಟಿ, ಮಾರನಹಳ್ಳಿ,

ಕರಿನಾರಹಟ್ಟಿ, ಕಪ್ಪಡಬಂಡಹಟ್ಟಿ, ಕುಂಟೋಬಯ್ಯನಹಟ್ಟಿ, ಹಾನಗಲ್ಲು, ಸೂರವ್ವನಹಳ್ಳಿ, ಉಡೆಗೊಳ, ಪೂಜಾರಹಳ್ಳಿ, ಹೂಡೇಂ ಮೊದಲಾದ ಸ್ಥಳಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ.

ಮೇಲೆ ಹೇಳಿದ ಕಟ್ಟೆಮನೆಗಳಲ್ಲದೆ, ರತ್ನಗಿರಿ, ನಿಡಗಲ್ಲು ಮತ್ತು ಹರ್ತಿಕೋಟೆಗಳು ಒಂದು ಕಾಲಕ್ಕೆ ನಾಯಕರ ಕಟ್ಟೆಮನೆಗಳೆಂದು ಖ್ಯಾತಿ ಪಡೆದಿದ್ದವು. ಹೀಗೆ ಉತ್ತರ ಕರ್ನಾಟಕದಲ್ಲಿ ಸುರಪುರ, ಅರಕೇರಾ, ಗುರಗುಂಟಾ, ಹುಲಿಹೈದರ, ಕನಕಗಿರಿ ಮೊದಲಾದ ಸಂಸ್ಥಾನಗಳ ದೊರೆಗಳು ನ್ಯಾಯಪಂಚಾಯ್ತಿಯನ್ನು ಮುಂದುವರೆಸಿಕೊಂಡು ಬಂದಿರುವುದು ಗಮನಾರ್ಹ.

**ಕಟ್ಟೆಮನೆ ನ್ಯಾಯಪಂಚಾಯ್ತಿಯ ಪ್ರಮುಖ ಸಂಗತಿಗಳು**

ಕಟ್ಟೆಮನೆಯ ಕಾರ್ಯಸ್ವರೂಪ ಜನಾಂಗದ ಆಚಾರ – ವಿಚಾರ ರೂಢಿ ಮತ್ತು ಸಂಪ್ರದಾಯಗಳನ್ನು ಕೇಂದ್ರೀಕರಿಸಿಕೊಂಡಿರುತ್ತದೆ. ಹಟ್ಟಿ ಅಥವಾ ಬೇಡಕಂಪಳದಲ್ಲಿ ಉದ್ಭವಿಸುವ ಜಗಳ, ಹೊಡೆದಾಟ, ಸಂಘರ್ಷ, ವ್ಯಾಜ್ಯ, ನ್ಯಾಯಗಳನ್ನೂ ತೀರ್ಮಾನಿಸಿಕೊಳ್ಳಲು ಕಟ್ಟೆಮನೆಯ ಒಗ್ಗಟ್ಟು ಅಗತ್ಯ. ಕಾಡಿನಲ್ಲಿ ಜೀವನ ನಡೆಸಿದ ಬೇಡರಿಗೆ ಬೆಂಕಿ, ನೀರು, ಗಾಳಿ, ಬೇಟೆ, ಹೆಣ್ಣು, ಇಂಥಾ ಸಂಗತಿಗಳಿಗೂ ಭಯ – ಭೀತಿ, ವೈಮನಸ್ಸು ಬಂದಾಗ ಯಜಮಾನರ ಸಲಹೆ ಅಗತ್ಯವಿತ್ತು. ಪಂಚಾಯ್ತಿಯಲ್ಲಿ ಕಟ್ಟೆಮನೆ, ಹಿರಿಯರು ದೈವದ ತೀರ್ಮಾನದಂತೆ ಎಲ್ಲ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಬಗೆಹರಿಸುತ್ತಿದದರು. ಹೆಂಡ ಅಥವಾ ಸಾರಾಯಿ, ಕೋಳಿ – ಮೊಟ್ಟೆ – ಮಾಂಸ ಸೇವಿಸಿದರೆ; ಈಚಲು ಹಣ್ಣು – ಚಾಪೆ ಬಳಸಿದರೆ ಅಂಥವರಿಗೆ ಕಟ್ಟೆಮನೆಯವರು ದಂಡ ಹಾಕುತ್ತಿದ್ದರು. ಬೇಡರಲ್ಲಿ ಕುಲಕೆಡಿಸುವ ವಾಮಮಾರ್ಗವೆಂದರೆ ಮೆಟ್ಟಿನಿಂದ ಹೊಡೆಯುವುದು. ಪಾದರಕ್ಷೆಯಿಂದ ಹೊಡೆದರೆ ಹೊಡೆಸಿಕೊಂಡವನು – ಹೊಡೆದವನು ಇಬ್ಬರು ಕುಲದಿಂದ ಹೊರಗೆ ಇದ್ದು, ದಂಡ ಕೊಡುತ್ತಾರೆ. ಹೀಗೆ ಮೆಟ್ಟಿನಿಂದ ಹೊಡೆಸಿಕೊಂಡು ಕುಲಗೆಟ್ಟವನು ಕುಲಕ್ಕೆ ಬರಬೇಕಾದರೆ ತನ್ನ ಹಟ್ಟಿ ಯಜಮಾನರಿಗೆ ಬೇಟೆ – ಭತ್ಯೆಗಳನ್ನು ಕೊಡಬೇಕು. ಇಂತಹವರನ್ನು ಅವರು ಊರಿನ ಹೊರಗೆ ತೆಗೆದುಕೊಂಡು ಹೋಗಿ ಅಡುಗೆ ಮಾಡಿಕೊಂಡು ದೇವರೆತ್ತುಗಳ ದೇವರಮನೆ – ಪೂಜಾರಿ – ಕಿಲಾರಿಯಿಂದ ತೀರ್ಥ ಹಾಕಿಸಿಕೊಂಡು ಅವರನ್ನು ಕುಲಕ್ಕೆ ಸೇರಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ನಾಲಿಗೆ ಸುಡಿಸಿ ಎಲ್ಲರೂ ಊಟ ಮಾಡುತ್ತಾರೆ. ಮೆಟ್ಟಿನ ಏಟು ತಿಂದಂತ ಎಲ್ಲರ ಪಜೀತಿಯು ಇದೇ ಬಗೆಯದು. ಹಾಗಾಗಿ ಯಾರೂ ಇಂಥ ಕಠಿಣ ಕಟ್ಟುಪಾಡುಗಳನ್ನು ಎದುರಿಸಲು ಸಿದ್ಧರಿಲ್ಲದ ಕಾರಣ ಮೆಟ್ಟಿಗೆ ಗೌರವವಿದೆ. ಜನರಿಗೆ ಅದರ ಬಗ್ಗೆ ಹೆದರಿಕೆ ಇದೆ ಎಂಬುದು ಸತ್ಯ. ಮೆಟ್ಟಿನಿಂದ ಹೊಡೆಯುವುದು ಬೇಡರಲ್ಲಿ ಘೋರ ಅಪರಾಧವೇ ಸರಿ. ಇವರಲ್ಲಿ ಹೆಣ್ಣು ಉನ್ನತ ಜಾತಿಯವನನ್ನು ಮದುವೆ ಆದರೆ ದಂಡವಿಲ್ಲ, ಆದರೆ ಬೇಡರಿಗಿಂತ ಕೆಳದರ್ಜೆಯವರೊಂದಿಗೆ ಕೂಡಿದರೆ, ಜೊತೆಯಲ್ಲಿ ಊಟಮಾಡಿದರೆ ಬುಡಕಟ್ಟಿನಿಂದಲೇ ಬಹಿಷ್ಕರಿಸುತ್ತಿದ್ದರು. ಹಿಂದೆ ಪ್ರತಿಯೊಂದು ಸಂಗತಿಗೂ ಕಟ್ಟೆಮನೆಗಳಿಗೆ ಹೋಗುವ ಪರಿಪಾಟವಿತ್ತು. ಇವರಲ್ಲಿಯೂ ವಂಶಪರಂಪರೆ ಆಡಳಿತ, ದಾಯಾದಿಗಳ ಕಲಹಗಳಿಂದ ಕಟ್ಟೆಮನೆಗಳು ತಮ್ಮ ಮೂಲ ಆಶಯಗಳಿಗೆ ಧಕ್ಕೆಯನ್ನು ತಂದುಕೊಂಡಿವೆ. ಬೇಡರು ಇಂದು ಪೊಲೀಸ್ ಠಾಣೆ ಮತ್ತು ಕೋರ್ಟುಗಳಿಗೆ ಹೋಗುವುದರಿಂದ ಆಧುನಿಕತೆ ಎಲ್ಲ ರಂಗಗಳಲ್ಲೂ ಪ್ರವೇಶಿಸಿ ಪರಿವರ್ತನೆಗೆ ನಾಂದಿ ಹಾಡಿದೆ. ಆಚಾರದ ಕಟ್ಟೆಮನೆ ಎಂದು ಹೆಸರಾದ ಕಾಮಗೇತನಹಳ್ಳಿ ಸೂರಲಿಂಗೇಶ್ವರ ದೇವರ ವಾರಸುದಾರರು ಮ್ಯಾಸಬೇಡರಿಗೆ ದೀಕ್ಷೆ ನೀಡಿ ತಮ್ಮ ಕುಲಕ್ಕೆ ಹೀನ ಕುಲದವರನ್ನು ಸೇರಿಸಿಕೊಂಡು ಸಮಾನತೆಯನ್ನು ಮೆರೆದಿದ್ದಾರೆ.

ಬೇಡರಲ್ಲಿ ಅತ್ಯಾಚಾರ ನಡೆದಾಗ ಕುಲಕೆಟ್ಟವರನ್ನು, ಕೆಟ್ಟ ಕೆಲಸ ಮಾಡಿದವರನ್ನು ತಮ್ಮ ಕುಲದಿಂದ ಹೊರಹಾಕುತ್ತಿದ್ದರು. ತಮ್ಮ ದೇವರುಗಳನ್ನು ಬೇರೆ ಕಡೆ ಕೊಂಡೊಯ್ಯುತ್ತಿದ್ದರು. ಗೋನೂರು ಕಟ್ಟೆಮನೆದೇವರು, ಸಾಲಿಗ್ರಾಮ, ಶಂಖು, ಆಯುಧಗಳನ್ನು ದೇವರ ಗಂಜಿಗಟ್ಟೆ ಗಾದರಿಪಾಲನಾಯಕ ಮಹಾ ಸಂಸ್ಥಾನಕ್ಕೆ ತೆಗೆದುಕೊಂಡು ಹೋಗಿ ಪುನೀತಗೊಳಿಸುತ್ತಾರೆ. ಇವರಲ್ಲಿ ಎಡ ಮತ್ತು ಬಲಮುರಿ ಶಂಖು, ನಾಗಮುರಿಬೆತ್ತ, ಎತ್ತಿನ ತುರಾಯಿ, ಸೂರ್ಯನಂದನ ಅಲಗು, ಧರ್ಮಗಿರಿ ಗದ್ದಿಗೆ, ಭೂಚಕ್ರದ ಗೊಡಗು, ಕೋರಿನಿಶಾನಿ, ಕಂಡುಗನಗಂಟೆ ಮೂಲೆ ಮೂಲೆಯಿಂದ ಬಂದು ಸೇರುತ್ತದೆ. ನಂತರ ಎಲ್ಲ ಮ್ಯಾಸ ಮಂಡಳಿಯ ಕಂಪಳಗಳು ಸೇರಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ. ಆ ನಿರ್ಣಯಕ್ಕೆ ಎಲ್ಲರೂ ಬದ್ಧರಾಗುತ್ತಾರೆಂದು ತಿಳಿಸಲಾಗಿದೆ.

**ಕಟ್ಟೆಮನೆಯಲ್ಲಿ ತೀರ್ಮಾನಕ್ಕೆ ಬಂದ ಫಿರ್ಯಾದುಗಳು (ಅರ್ಜಿ, ಸಮಸ್ಯೆ, ಇತರ ವಿಷಯಗಳು)**

ಬೇಡರ ಕಟ್ಟೆಮನೆಗಳಿಗೆ ಬಂದ ಸಮಸ್ಯೆ ಅಥವಾ ಫಿರ್ಯಾದುಗಳು ಇಂದಿಗೆ ಕ್ಷುಲ್ಲಕ ಎಂದು ಕಂಡುಬಂದರೂ ಅವರಲ್ಲಿ ಅವು ಮಹತ್ವ ಪಡೆದಿರುತ್ತವೆ. ಊಟ ಮತ್ತು ವೈವಾಹಿಕ ಸಂಬಂಧದಲ್ಲಿ ವ್ಯತ್ಯಯವಾದರೆ ಅಪವಿತ್ರರಾಗುವರೆಂಬ ನಂಬಿಕೆಯಿದೆ. ಕಟ್ಟೆಮನೆ ನಾಯಕನಿಗೆ ವಿಶೇಷವಾದ ಗೌರವದ ಸಂಬೋಧನೆಯಿತ್ತು. ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ, ನಾಯ್ಕಚಾರ್ಯ – ನನ್ನಿವಾಳದ ದೊರೆ ಪಾಲನಾಯ್ಕರು, ದಡ್ಡಿನಾಯ್ಕ ಜನ್ನಳ್ಳಿ ಪಾಲನಾಯಕ, ಕುರೇಲ ಸಣ್ಣಪಾಪಯ್ಯ, ಯರಗಾಡ್ಲ ಪಾಪಯ್ಯ, ಕಟ್ಟೆಮನಿ ಬುಲ್ಲುಡ್ಲು, ಸಣ್ಣ ಕಾಟಯ್ಯ ಬುಲ್ಲುಡ್ಕು ದೊಡ್ಡಕಾಟಯ್ಯ, ಯತ್ತಿನಗೌಡ ಚಿನ್ನಯ್ಯ, ಮುತ್ತೈಯ್ಯನ ಎತ್ತುಗಳ ಕಿಲಾರಿ ಪಾಪಯ್ಯ, ರಾಯ್ಬೊರ ಹಿರಿಯ ಪಾಪಯ್ಯ ಮುಂತಾದ ಕುಲ ಸಾವಿರದವರು ಚಳ್ಳಕೆರೆ ಕಾರೇರ ತಾತಯ್ಯನು ಬರೆದುಕೊಂಡ ಮನವಿ……….. ಎಂಬಾತನು…… ಬೈಲು ಮಗಳನ್ನು ರಖಾವು ಮಾಡಿಕೊಂಡು ಅಲ್ಲಿಯೋ ಬಳಕೆ ಭೋಜನ ಮಾಡಿಕೊಂಡು ಇರುತ್ತಾನೆ. ಝುಂಡಾ ಗೋವಿಂದಯ್ಯನು ಕರ್ಕುದ್ರಯ್ಯನು ತನ್ನ ಮಗಳ ಲಗ್ನದಲ್ಲಿ ಸಮ್ಮಿಶ್ರ ಮಾಡಿಕೊಂಡು ಇರುತ್ತಾರೆ. ಹೀಗೆ ಇನ್ನು ವಿವರವಿದೆ. ಇಂಥಾ ಅನಾಚಾರಗಳನ್ನು ತಡೆಗಟ್ಟಿ ತಮ್ಮ ಮತದ ಶ್ರೇಷ್ಠತೆ ಕಾಪಾಡಿಕೊಳ್ಳಲು ಮನವಿ ಮಾಡಿಕೊಂಡಿದ್ದಾರೆ.

ಬೇಡರ ಕಟ್ಟೆಮನೆಗಳಲ್ಲಿ ಪಂಚಾಯ್ತಿ ಮಾಡುವ ವಿಚಾರಗಳೆಲ್ಲವೂ ಆಯಾ ಹಟ್ಟಿಗಳ ಕೊಟ್ಟುಕೊಳ್ಳುವ ಸಂಬಂಧವನ್ನೇ ಸಂಕೇತಿಸುತ್ತವೆ.

೧. ದಿನಾಂಕ ೮.೮.೧೯೪೧ರಲ್ಲಿ ನನ್ನಿವಾಳ ಕಟ್ಟೆಮನೆಗೆ ಪತ್ರ ಬರೆದು ಲಗ್ನಕ್ಕೆ ಸಂಬಂಧಿಸಿದಂತೆ ಪಿರ್ಯಾದು ಸಲ್ಲಿಸಿದ್ದಾರೆ.

೨. ೧೬.೫.೧೯೪೨ ನಾಯ್ಕರ್ ೩ಕಟ್ಟೆಮನೆಗಳ ಅಧಿಕಾರಿ, ಯಜಮಾನರಿಗೆ ಮತ್ತು ಕುಲಸಾವಿರದ (೨೬ ಜನರ ಹೆಸರು) ವರಿಗೆ – ಹೊಳಲ್ಕೆರ ತಾಲೂಕು ಕಾಮಸಮುದ್ರದ ಹಾವಳಿಕಟ್ಟೆ ಊರುನಾಯ್ಕರ ಮತದ…. ಮನೆಯಲ್ಲಿ ಬಳಕೆ ಭೋಜನೆ ಮಾಡಿದ ಬಗ್ಗೆ ಫಿರ್ಯಾದು – ನೋಟಿಸು, ಗುರು ಹಿರಿಯರಿಂದ ತಿರಸ್ಕಾರ, ಅಪರಾಧಿಗಳು ಶುಭಕಾರ್ಯಗಳಿಗೆ ಬಹಿಷ್ಕಾರ ಇತರ ವಿವರಗಳಿವೆ.

೩. ೧೦ – ೯ – ೧೯೫೮ ಮ್ಯಾಸ ಮಂಡಳ ಗುರುಮೂರ್ತಿ ಶ್ರೀ ಶ್ರಿ ದೊರೆಪಾಲನಾಯ್ಕ ಮಹಾಸ್ವಾಮಿಯವರ…. ಉರಿಮೆ ಬಡಪ್ಪ ಮಾಡುವ ನಮಸ್ಕಾರ, ಊಟಕ್ಕಾಗಿ ಆಯಾಗಾರರ ಹತ್ತಿರ ಹೋದರೆ ಏನೂ ಕೊಡಲಿಲ್ಲ.

೪. ದೇವರೆತ್ತುಗಳನ್ನು ಕಾಯುವ ಬಗ್ಗೆ ಕಟ್ಟೆಮನೆಗೆ ದೂರು (ನೀರಿಲ್ಲ – ಮೇವು ಇಲ್ಲ)

ಕಟ್ಟೆಮನೆಗಳಿಗೆ ಸಲ್ಲಿಸಿದ ಫಿರ್ಯಾದಿಗಳಿಗೆ ನೋಟಿಸು ಕೊಟ್ಟು ಪಂಚಾಯ್ತಿ ವಿಚಾರಣೆ ನಡೆಯುವುದು ಸಹಜ. ಹೀಗೆ ಪಂಚಾಯ್ತಿಯಲ್ಲಿ ಕೆಲವೊಮ್ಮೆ ಸೋಲು – ಗೆಲುವುಗಳಾಗಿರುತ್ತವೆ. ಇಲ್ಲಿ ಕೆಲಸ ಕಾರ್ಯಗಳಲ್ಲಿ ಒಂದೇ ರೂಪವನ್ನು ಹೋಲುತ್ತಿದ್ದರೂ ಕಟ್ಟೆಮನೆ ಮತ್ತು ಗುರುಸ್ಥಾನಗಳು ಬೇರೆಬೇರೆ. ಬೇಡರಹಟ್ಟಿಯ ಜಗಳ, ಗಲಾಟೆ, ಸಂಘರ್ಷ, ಸಂಭವಿಸಿದರೂ ಒಮ್ಮೆ ಕಟ್ಟೆಮನೆ – ಗುರುಮನೆಗೆ ಬರುವಂತಿಲ್ಲ. ಕಟ್ಟೆಮನೆಗೆ ಬರುವ ಸಮಸ್ಯೆಗಳು ಬಹುತೇಕ ವೈಯಕ್ತಿಕವಾದವುಗಳು. ಮತ್ತೊಮ್ಮೆ ಸಂಸ್ಕೃತಿಯ ಗಟ್ಟಿತನವನ್ನು ಬೆಳೆಸಲು ದೇವರ, ಕುಲಗೋತ್ರಗಳ ವ್ಯಾಜ್ಯಗಳನ್ನು ಹೆಚ್ಚಾಗಿ ಗುರು ಸಂಸ್ಥಾನಗಳಲ್ಲಿ ಪರಿಗಣಿಸುತ್ತಾರೆ. ಕಟ್ಟೆಮನೆಯಲ್ಲಿ ನ್ಯಾಯ ಸಿಗದಿದ್ದರೆ ಗುರುಸ್ಥಾನದಲ್ಲಿ ಕೇಳುವುದು ವಾಡಿಕೆ. ಉದಾ: ಹೊಳಲ್ಕೆರೆ ತಾಲೂಕಿನ ಮಾಳೆನಹಳ್ಳಿಯ ಊರು ನಾಯಕರಿಗೆ ಕುಂಚಿಗನಹಾಳು ಮ್ಯಾಸಬೇಡರಿಗೆ ಕಟ್ಟೆಮನೆಯವರು ಎಲ್ಲವನ್ನು ಪರಿಶೀಲಿಸಿ ಬಹಿಷ್ಕಾರ ಹಾಕಿದ್ದರು. ತರುವಾಯ ಅವರು (ಕುಂಚಿಗನಹಾಳು) ಗುರುಸ್ಥಾನದಲ್ಲಿ ನ್ಯಾಯ ಕೇಳಿದರು (ಇದರ ಕೇಂದ್ರಸ್ಥಳ ಕಂಪಳದೇವರಹಟ್ಟಿ. ಬೇಡರ ತಪ್ಪುಗಳನ್ನು ತಿದ್ದಲು ಕರಿಸಿ ಬುದ್ಧಿವಾದ ಹೇಳಲು ಕಟ್ಟೆಮನೆ, ಗುರುಮನೆಗಳು ಆಧಾರಸ್ತಂಭಗಳಾಗಿರುತ್ತವೆ). ಇವರಿಬ್ಬರು ಮ್ಯಾಸಬೇಡರೆಂದು ಆಧಾರ ಕಂಡುಬಂದ ಹಿನ್ನಲೆಯಲ್ಲಿ ಗುರುಸ್ಥಾನದ ಪಂಚಾಯ್ತಿಯವರು ಇಬ್ಬರಿಗೂ ಗೆಲುವಾಗಲು ನೆರವಾದರು.

ಬೇಡರ ಹೆಣ್ಣು ಮಕ್ಕಳ ಬಗ್ಗೆ ನ್ಯಾಯ, ನೀತಿ, ಕಾನೂನುಗಳಿವೆ. ಇವಳು ಉನ್ನತ ವ್ಯಕ್ತಿಯೊಡನೆ ಅನೈತಿಕ ಸಂಬಂಧ ಬೆಳೆಸಿದ್ದರೂ ಜೊತೆಗೆ ಒಂದೇ ತಟ್ಟೆಯಲ್ಲಿ ಊಟ ಮಾಡುವಂತಿಲ್ಲ. ಆದರೆ ಆ ವ್ಯಕ್ತಿಯ ಜೊತೆ ಇದ್ದರು ಅಂಥ ಕಠಿಣ ಕ್ರಮಗಳೇನು ಇಲ್ಲ. ಊಟದ ವಿಚಾರದಲ್ಲಿ ವಿರುದ್ಧವಾಗಿ ನಡೆದುಕೊಂಡರೆ ಅವಳನ್ನು ಕುಲದಿಂದ ಬಹಿಷ್ಕರಿಸುತ್ತಿದ್ದರು. ಸುಳ್ಳು ಪತ್ರ ಬರೆದು ಬೆಳಗಟ್ಟದ ಮಹಿಳೆ ಬಗ್ಗೆ ವಿಚಾರಣೆ ನಡೆಸಿದ ಕಟ್ಟೆಮನೆಯವರು ಅಪರಾಧಿಯಲ್ಲದ ಹೆಣ್ಣಿನ ಬಗ್ಗೆ ಕರುಣೆ ಬಂದು ಹೊಸ ಸೀರೆ – ಕುಪ್ಪಸ ಕೊಡಿಸಿ, ಯರಗಾಟನಾಯಕ ದೇವರಿಗೆ ಎಣ್ಣೆಹಾಕಿಸಲು ತಪ್ಪು ಕಾಣಿಕೆ ೫೦ ರೂಪಾಯಿ ಕೊಟ್ಟ ಪ್ರಸಂಗವಿದೆ.

ಇತ್ತೀಚಿನವರೆಗೆ ಯಾವುದೇ ಗಂಡು ಮದುವೆಯಾಗಬೇಕಾದರೆ ಮುತ್ತಿಗಾರಹಳ್ಳಿ ಗುರುಸ್ಥಾನಕ್ಕೆ ಬಂದು ತೀರ್ಥ (ಹರಿನೀರು) ಹಾಕಿಸಿಕೊಳ್ಳಬೇಕಿತ್ತು. ಹೋಗಲಿಲ್ಲ ಎಂದರೆ ಅವರನ್ನು ಬಹಿಷ್ಕರಿಸಲಾಗುತ್ತಿತ್ತು. ಇಂದು ಆಯಾ ಮನೆದೇವರಿಗೆ ಮಾತ್ರ ಹೋಗಿ ತೀರ್ಥ ಹಾಕಿಸಿಕೊಳ್ಳುತ್ತಾರೆ.

ಶ್ರೀ ಚಿಂತಗುಟ್ಲು ಬೋರೇದೇವರ ಮತ್ತು ಕಂಪಳದೇವರಿಗೆ ಸಂಬಂಧಿಸಿದಂತೆ ೧೪.೩.೧೯೩೧ರಂದು ಕಟ್ಟೆಮನೆಗಳಿಗೆ ಬರೆದ ಪತ್ರ. ಇದೇ ರೀತಿ ಶ್ರೀಮುತ್ತಯ್ಯಗಳ ದೇವರು ಮತ್ತು ಕಟ್ಟೆಮನೆಗೆ ಸೇರಿದ ಪತ್ರ. ಶ್ರೀ ಮಹಾನಾಯಕಚಾರ್ಯ, ನಾಯ್ಕಶಿರೋಮಣಿ, ಕಸ್ತೂರಿ ಕೋಲಾಹಲ ಸದಿಬಾಧ್ಯರಾದ ನಾಯಕನಹಟ್ಟಿ ಸಂಸ್ಥಾನಕ್ಕೆ ಕಾರಣಕರ್ತರಾದ ಶ್ರೀಮಾನ್ ಬಸಪ್ಪನಾಯ್ಕರವರ ಸನ್ನಿಧಾನದಿಂದ ಬರೆದ ಪತ್ರ. ರಾಮಜೋಗಿಹಳ್ಳಿ ತಳವಾರ ಹನುಮಯ್ಯನ ಮಗ ಮಲ್ಲಯ್ಯನಿಗೆ ನೋಟಿಸು. ಕಾಸೋರಹಟ್ಟಿ ಕಂಪಳಯ್ಯ, ರಾಮಜೋಗಿಹಳ್ಳಿ ದೊಡ್ಡ ಓಬಯ್ಯ ೧೩.೧.೧೯೩೦ರಂದು ಕಟ್ಟೆಮನೆ ಕುಲಸಾವಿರದವರ ಸಭೆ (ವ್ಯಾಜ್ಯ) ವಿವರ ಈ ನಿಟ್ಟಿನಲ್ಲಿ ಹಲವು ಮಾಹಿತಿಯನ್ನು ನೀಡುತ್ತವೆ.

ಇವಲ್ಲದ ೧೯೪೨ ಜನವರಿ ೨೩ರಂದು ಚಳ್ಳಕೆರೆ ತಾಲೂಕಿನ ಚಂದ್ರಗಿರಿ ಬೂದಾಳು ಪಟ್ಟಣಕ್ಕೆ ಸೇರಿದ ಗೌಡಗೆರೆ ಗ್ರಾಮದ ಹಿರಿಯರು – ಕುಲಸಾವಿರದವರಿಂದ ಕಟ್ಟೆ ಮನೆಗೆ ಬರೆದ ಪತ್ರ: ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕು ಮ್ಯಾಸಮಂಡಳಿಗೆ ಸೇರಿದ ಗಾರಹಟ್ಟಿಯ ಕೊಡಗಳ್ಳಿ ರಂಗಪ್ಪನ ಮಗ ರಂಗಣ್ಣನಿಗೆ ಗೌಡಗೆರೆಯ ಶ್ರೀ ತಿರುಮಲದೇವರ ಗುಡಿಕಟ್ಟಿಗೆ ಸೇರಿದವನೆಂದು (ಅನುಮಾನ ಬಂದ ಕಾರಣ) ತಿಳಿಸುವ ಜ್ಞಾಪನಾ ಪತ್ರ.

ಚಿಂತಗುಟ್ಲು ಬೋರೇದೇವರಹಟ್ಟಿ ಗ್ರಾಮದವರು ಕಟ್ಟೆಮನೆ ಅಧಿಕಾರಿಗಳಿಗೆ ನನ್ನಿವಾಳದ ಮಜುರೆ ಮುಚ್ಚುಗಂಟೆ ಗ್ರಾಮದಲ್ಲಿನ ತಮ್ಮನ ಮುತ್ತೆಪೂಜಾರಿ ಪಾಪಯ್ಯ ಮಗ ಮಲ್ಲಯ್ಯನಿಗೆ ಕೊಟ್ಟ ಬಹಿಷ್ಕಾರ ಪತ್ರಕ್ರಯದಲ್ಲಿ ಮ್ಯಾಸ (ನಾಯಕರ) ಮಂಡಲಿಯ ಮತಕ್ಕೆ ವಿರೋಧವಾಗಿ ನಡೆದುಕೊಂಡಿದ್ದರಿಂದ ಹೊಳಲ್ಕೆರೆ ತಾಲ್ಲೂಕು ಊರುನಾಯ್ಕರ ರಂಗಯ್ಯನ ಮನೆಯಲ್ಲಿ ಬಳಕೆ ಬೋಜನಾಧಿಗಳಲ್ಲದೆ ಇತರೆ ಕೆಲಸ ವಿಷಯಗಳಿಗೆ ಸಂಬಂಧಿಸಿದಂತೆ ೧೯೨೨ ಆಗಸ್ಟ್ ೩೦ರಂದು ಅಪರಾಧಿಯಾದ ಮಲ್ಲಯ್ಯನಿಗೆ (ಹಿಯರಿಂಗ್) ವಿಚಾರಣೆ ಸಂಬಂಧಿಸಿದಂತೆ ಪತ್ರ ಬರೆದಿರುವುದನ್ನೂ ಗುರುತಿಸಬಹುದು (ಇಂಥ ಅನೇಕ ಪತ್ರಗಳ ವಿವರವಿದೆ).

ಹಿರೇಹಳ್ಳಿ ಕಟ್ಟೆಮನೆಗೆ ಸಂಬಂಧಿಸಿದಂತೆ ಮಾರಮ್ಮನ ಹಳ್ಳಿ ನಲಬಾಪಲ (ಬೇಡರಾದ ಬ್ರಾಹ್ಮಣರು) ಬೈಯಣ್ಣನ ಮಗ ಪಾಪಯ್ಯನು ನಾಯಕರಿಗೆ ಫಿರ್ಯಾದು ಸಲ್ಲಿಸಿದ್ದನ್ನು ತಿಳಿಯಬಹುದು. ಈ ರೀತಿಯಾಗಿ ಕರ್ನಾಟಕದ ಬೇರೆ ಬೇರೆ ಕಡೆ ನಾಯಕರು ನೆಲಸಿದ್ದರೂ ಇಂಥ ಬಿಗಿಕ್ರಮ ಇಲ್ಲ. ಚಿತ್ರದುರ್ಗ ಪರಿಸರದಲ್ಲಿ ಮಾತ್ರ ನ್ಯಾಯಪಂಚಾಯ್ತಿ ಜೀವಂತಿಕೆ ಪಡೆದುಕೊಂಡಿದೆ.

ಈ ಮೊದಲೇ ಚರ್ಚಿಸಿದಂತೆ ಕಟ್ಟೆಮನೆಗಳು ವಿಜಯನಗರೋತ್ತರ ಕಾಲದಲ್ಲಿ ಸ್ಥಾಪನೆಯಾದಂತಿವೆ. ಆನೆಗೊಂದಿ ಅರಸರ ಪ್ರೇರಣೆ ಮತ್ತು ಪ್ರೋತ್ಸಾಹಗಳಿಂದ ಇವು ಕಾರ್ಯನಿರ್ವಹಿಸಿದವು. ಬ್ರಿಟಿಷರ ಆಳ್ವಿಕೆಯಲ್ಲಿ ಅವರ ಕಾಯ್ದೆ ಕಾನೂನುಗಳೇನೇ ಇದ್ದರೂ ತಮ್ಮ ಬುಡಕಟ್ಟಿನ ನ್ಯಾಯಪಂಚಾಯ್ತಿಗಳ ಮೂಲಕ ಸುಲಭವಾಗಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಿದ್ದರು. ಜಟಿಲವಾದವು ಹಾಗೆಯೇ

ಜ್ವಲಂತವಾಗಿರುತ್ತಿದ್ದವು. ಏನೇ ಆದರೂ ಪರಸ್ಪರ ನಂಬಿಕೆ, ವಿಶ್ವಾಸಗಳಿಂದ ಬದುಕು ಸುಂದರವಾಗಿರಲು ಕಟ್ಟೆಮನೆಗಳ ಶ್ರಮ ಸಾರ್ಥಕ ಎನಿಸಿತ್ತು.

ಕಟ್ಟೆಮನೆಗಳು ಚಿತ್ರದುರ್ಗ ಜಿಲ್ಲೆಯಲ್ಲಿಯೇ ಇರುವುದು ವಿಶೇಷ. ಇವು ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳಾಗಿವೆ. ನಾಯಕನಹಟ್ಟಿ, ಗೊನೂರು ಮತ್ತು ನನ್ನಿವಾಳಗಳು ಪ್ರಮುಖ ಕಟ್ಟೆಮನೆಗಳು. ಪ್ರತಿಯೊಂದಕ್ಕೂ ನಾಯಕರಿದ್ದು ಹಿರಿಯರ ಆಜ್ಞೆಯಂತೆ ನ್ಯಾಯ ಪಂಚಾಯ್ತಿಗಳನ್ನು ಮಾಡುತ್ತಾರೆ. ಕಟ್ಟೆಮನೆಯಲ್ಲಿ ಇತ್ಯರ್ಥವಾಗದಿದ್ದರೆ ಅಥವಾ ಸೋಲಾದರೆ ಗುರುಸ್ಥಾನವಾದ ಕಂಪಳದೇವರಹಟ್ಟಿ ನ್ಯಾಯ ಪಂಚಾಯ್ತಿಗೆ ಹೋಗುತ್ತಾರೆ. ಹೀಗೆ ಇಲ್ಲಿ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟಿನ ತೀರ್ಪುಗಳಂತೆ ಬೇಡ ಬುಡಕಟ್ಟಿನ ಯಜಮಾನರ ತೀರ್ಪು ಅಂತಿಮ. ಕರೆಕಂಬಳಿ ಗದ್ದಿಗೆ ಹಾಕಿ ಅದರ ಮೇಲೆ ಎಲೆ – ಅಡಿಕೆ ಇಟ್ಟು ಕುಲ ಸಾವಿರದವರಿಗೆ ಒಂದು ಎಲೆ – ಅಡಿಕೆ ಕೊಟ್ಟರೆ ಸಾಕು ಪಂಚಾಯ್ತಿಗೆ ಬದ್ಧರಾಗುವರೆಂಬ ನಂಬಿಕೆಯಿದೆ. ಎಲೆ – ಅಡಿಕೆ ಪ್ರಾಮಾಣಿಕತೆಯನ್ನು ಇಂದಿಗೂ (ಬೇಡಪರಂಪರೆಯಲ್ಲಿ) ಉಳಿಸಿಕೊಂಡು ಬಂದಿದ್ದಾರೆ.

ಕಟ್ಟೆಮನೆಗಳಿಗೆ ಬರುವ ಸಮಸ್ಯೆಗಳು ಪ್ರಮುಖವಾಗಿ ಜೀವನ ರೂಪಿಸಿಕೊಳ್ಳುವ ನಿಟ್ಟಿನಲ್ಲಿರುತ್ತವೆ. ಇಲ್ಲಿ ಪರಸ್ಪರ ಅರಿವು ತಿಳುವಳಿಕೆಗಳಿದ್ದರೆ ಬಹುಶಃ ಅನೈಕ್ಯತೆ, ಅನೈತಿಕ, ಕಲಹ, ನಿಯಮಬಾಹಿರ ಕೃತ್ಯಗಳನ್ನು ತಡೆಯಬಹುದು. ಇವರಲ್ಲಿ ಕೆಲವರಿಗೆ ಬೇಡರ ಜಾತಿ ಮಾತ್ರ ಶ್ರೇಷ್ಠ. ಉಳಿದವು ಕನಿಷ್ಠ ಎಂಬ ಕಲ್ಪನೆ ಇದ್ದರೂ ಉನ್ನತ ಜಾತಿಗಳೊಂದಿಗೆ ಗುರುತಿಸಿಕೊಳ್ಳುವುದು ನಿಂತಿಲ್ಲ. ಅಂತರ ಭೋಜನೆ, ಅಂತರ್ಜಾತಿ ವಿವಾಹಗಳು ಸುಲಭವಾಗಿ ನಡೆಯುವದಿಲ್ಲ. ಬೇರೆ ಬೇರೆ ಜಾತಿಯವರು ಸೇರಿ ಸಹಭೋಜನ (ಒಂದೇ ತಟ್ಟೆಯಲ್ಲಿ) ಮಾಡುವಂತಿಲ್ಲ. ಹಾಗೇನಾದರೂ ಆದರೆ ಬೇಡರು ಜಾತಿ ಬಾಹಿರರಾಗುತ್ತಾರೆ.

ಬೇಡರ ಹೆಣ್ಣಿಗೆ ಸಮಾಜದಲ್ಲಿ ಉನ್ನತ ಸ್ಥಾನ – ಮಾನವಿದ್ದಂತೆ ಕನಿಷ್ಠ ಸ್ಥಾನ – ಮಾನವು ಇದೆ. ಉನ್ನತ ಜಾತಿಯ ಪುರುಷನು ಇವಳನ್ನು ಪ್ರೀತಿಸಿದರೆ, ಮದುವೆಯಾದರೆ ಇರುತ್ತದೆ. ಆದರ ಅವನೊಂದಿಗೆ ಒಂದೇ ತಟ್ಟೆಯಲ್ಲಿ ಭೋಜನ ಮಾಡುವಂತಿಲ್ಲ. ಮತ್ತು ತನ್ನ ಜಾತಿಗಿಂತ ಕೀಳಾದ ಜಾತಿಯವನೊಂದಿಗೆ ಪ್ರೇಮ ವಿವಾಹ ಬೆಳೆಸುವಂತಿಲ್ಲ. ಒಂದೊಮ್ಮೆ ಆದರೆ ಜಾತಿಬಾಹಿರರಾಗುತ್ತಿದ್ದರು. ಅನಾಥ ಮಹಿಳೆ, ವಿಧವೆ, ನಿರ್ಗತಿಕರು, ವೃದ್ಧರು ಈ ಸಮುದಾಯದಲ್ಲಿ ನಿಕೃಷ್ಟ ಜೀವನ ನಡೆಸುತ್ತಾರೆ. ಕೆಲವೊಮ್ಮೆ ಜಾತಿಯ ಕಟ್ಟುಪಾಡುಗಳನ್ನು ಮೀರಿ ಬದುಕು ಸಾಧ್ಯತೆ ಇದ್ದರೂ ಅವರ ಪಾಡು ಹೇಳತೀರದು.

ಬೇಡರ ನ್ಯಾಯಪಂಚಾಯ್ತಿಗಳು ಭೂಮಿಯ ಮೇಲೆ ಹಕ್ಕು ಸ್ಥಾಪನೆಯಾದಾಗಲೇ ಅಸ್ತಿತ್ವಕ್ಕೆ ಬಂದಂತಿವೆ. ದೇವರು, ಕಟ್ಟೆಮನೆ, ಗುಡಿಕಟ್ಟು ಮೊದಲಾದವುಗಳ ಜವಾಬ್ದಾರಿ ಸ್ಥಾನಗಳಿಗಾಗಿ ಪೈಪೋಟಿ – ಜಗಳಗಳಾಗುತ್ತವೆ. ಆದರೆ ಪರಸ್ಪರ ಒಪ್ಪಂದದ ಮೂಲಕ ಕೆಲವೊಮ್ಮೆ ಇವುಗಳನ್ನು ಬಗೆಹರಿಸಿಕೊಂಡರು ದ್ವೇಷ ಅಸೂಯೆಗಳನ್ನು ಸಾಧಿಸುವುದೇ ಹೆಚ್ಚು.

ಭಾರತ ದೇಶಕ್ಕೆ ಒಂದು ಸಂವಿಧಾನವಿರುವಂತೆ ಆಯಾ ಪ್ರಾದೇಶಿಕತೆಗೆ ತಕ್ಕಂತೆ ನ್ಯಾಯಾಲಯಗಳಿವೆ. ಇಲ್ಲಿ ಜಾತಿಗೊಂದು (ಬೇಡ) ಸಂವಿಧಾನ, ಗುರುಮನೆ, ಅರಮನೆಗಳಿರುವುದು ಗಮನಾರ್ಹ ಸಂಗತಿ. ಬೇಡರ ಕಟ್ಟೆಮನೆ – ಗುಡಿಕಟ್ಟೆಗಳು ಇಂದಿಗೂ ಜೀವಂತವಾಗಿವೆ. ಕರ್ನಾಟಕದ ಚರಿತ್ರೆಯಲ್ಲಿ ನ್ಯಾಯಾಂಗ ವ್ಯವಸ್ಥೆ ಪ್ರಾಚೀನ ಮಧ್ಯಕಾಲ ಮತ್ತು ಆಧುನಿಕ ಕರ್ನಾಟಕದಲ್ಲಿದ್ದರೂ ಇಂಥಾ ಪಂಚಾಯ್ತಿ ತೀರ್ಮಾನಗಳಿಗಾಗಿ ಅನೇಕ ಹೋರಾಟಗಳನ್ನು ಮಾಡಲು ಮುಂದಾಗಿರುತ್ತಾರೆ.

ಬೇಡರ ಕಟ್ಟೆಮನೆಗಳು ನ್ಯಾಯ ಪಂಚಾಯ್ತಿಯಲ್ಲಿ ಹಿರಿಯರ ಮಾತು ಎಲೆ, ಅಡಿಕೆ ದಂಡಹಾಕುವ ಪ್ರಕ್ರಿಯೆ ಪ್ರಮುಖವಾಗಿರುತ್ತದೆ. ಇಂಥ ನಿಯಮಗಳಿಗೆ ಹೆಣ್ಣು – ಗಂಡು ಇಬ್ಬರು ಒಳಪಡುತ್ತಾರೆ. ಹೆಚ್ಚಾಗಿ ದೇವರು – ಹಬ್ಬ – ಜಾತ್ರೆಗಳಲ್ಲಿ ಹಕ್ಕು ಚಲಾಯಿಸುವಾಗ ಇವರ ಅಧಿಕಾರದ ಬಗ್ಗೆ ಸಮಸ್ಯೆಗಳು ಉಲ್ಬಣವಾಗುತ್ತವೆ. ಇಡೀ ನಾಯಕ ಅಥವಾ ಬೇಡ ಜನಾಂಗಕ್ಕೆ ನಾನೇ ನಾಯಕ, ಪೂಜಾರಿ, ದೊರೆ ಎಂಬ

ಪರಿಕಲ್ಪನೆ ವಿವಿಧ ಸಾಮಾಜಿಕ ಆಯಾಮವನ್ನು ಸೃಷ್ಟಿಸಿದೆ. ಮೊದಲೇ ತಿಳಿಸಿರುವಂತೆ ಛಿದ್ರ, ಛಿದ್ರವಾಗಿ ನೆಲಸಿರುವ ಬೇಡರು ತಮ್ಮ ಅನುಕೂಲತೆಗೆ ತಕ್ಕಂತೆ ದೇವರು, ಕಟ್ಟೆಮನೆ, ಗುಡಿಕಟ್ಟೆಗಳನ್ನು ಹೊಂದಿರುವುದು ಸಹಜ. ಪಾರಂಪರಿಕವಾಗಿ ಇಂಥ ನ್ಯಾಯಾಂಗ ವ್ಯವಸ್ಥೆ ಇದ್ದರೂ ಇತ್ತೀಚಿಗೆ ಇದರ ಸದ್ಬಳಕೆ ಆಗುತ್ತಿಲ್ಲ. ಹಳೆತಲೆಮಾರಿನವರಲ್ಲಿ ಮಾತ್ರ ಸಣ್ಣಪುಟ್ಟ ಪಂಚಾಯ್ತಿಗಳಾಗುವುದನ್ನು ಹೊರತುಪಡಿಸಿದರೆ ಅಂಥಾ ಗಮನಾರ್ಹ ಬಳಕೆ – ಬದಲಾವಣೆಗಳು ಕಂಡುಬರುತ್ತಿಲ್ಲ ದಿ. ಹೋ.ಚಿ ಬೋರಯ್ಯ, ದಿ.ಟಿ. ಮಾರಪ್ಪ, ದಿ.ಎ. ಭೀಮಪ್ಪನಾಯಕರ ಕಾಲಕ್ಕೆ ಜನಾಂಗದ ಸಾಮಾಜಿಕ ಸುಧಾರಣೆ ಪರ್ವ ಆರಂಭವಾಯಿತು. ವಿವಿಧ ರೀತಿಯಲ್ಲಿ ಚಾಲ್ತಿಯಲ್ಲಿರುವ ನಾಯಕರ ಕಟ್ಟೆಮನೆ ಪಂಚಾಯ್ತಿಗಳು ಎಲ್ಲೋ ಒಂದು ಕಡೆ ನಿಸ್ವಾರ್ಥ ಸೇವೆಯಿಂದ ಈ ದೇಶದ ಸಂಸ್ಕೃತಿ ಮತ್ತು ನಾಗರಿಕತೆಗೆ ಮಾದರಿಯಾಗುವಂಥ ಕೆಲಸ ಕಾರ್ಯಗಳನ್ನು ಮಾಡುವಲ್ಲಿ ನಿರತವಾಗಿದ್ದವೆಂದರೆ ತಪ್ಪಾಗದು.

ಈ ಕಟ್ಟೆಮನೆಗಳಲ್ಲೆ, ಆಚಾರದ ಕಟ್ಟೆಮನೆಯಾಗಿ ಕಾಮಗೇತನಹಳ್ಳಿ, ವಿಚಾರದ ಕಟ್ಟೆಮನೆಯಾಗಿ ಕಾಟಪ್ಪನಹಟ್ಟಿಗಳು ನಿರ್ಮಾಣವಾದವು. ಇವುಗಳಲ್ಲದೆ ರತ್ನಗಿರಿ, ನಿಡಗಲ್ಲು, ಹರ್ತಿಕೋಟೆಗಳು ಕಟ್ಟೆಮನೆಗಳಾಗಿದ್ದವೆಂದು ತಿಳಿಸಲಾಗಿದೆ. ಕರ್ನಾಟಕದಲ್ಲಿ ಕಾಮಗೇತಿಯರಿಗೆ ಪ್ರತ್ಯೇಕ ದೇವಾಲಯ, ಕಟ್ಟೆಮನೆಗೆ ಸ್ಥಾನ ಇರುವುದು ವಿಶೇಷ. ಕಾಮಗೇತನಹಳ್ಳಿ ಕಟ್ಟೆಮನೆ ಮೂಲಕ ಕಾಮಗೇತಿ ವಂಶದವರ ವಿಕಾಸವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

## ೪. ಕಾಮಗೇತನಹಳ್ಳಿ : ಆಚಾರದ ಕಟ್ಟೆ ಮನೆ ಸ್ಥಾಪನೆ

ದಾವಣಗೆರೆ ಜಿಲ್ಲೆ ಜಗಳೂರು ತಾಲೂಕಿನಲ್ಲಿ ಚಿಕ್ಕ ಗ್ರಮ ಕಾಮಗೇತನಹಳ್ಳಿ. ರಾಷ್ಟ್ರೀಯ ಹೆದ್ದಾರಿ ೧೩ರಲ್ಲಿ ದೊಣ್ಣೆಹಳ್ಳಿಯಿಂದ ಜಗಳೂರಿಗೆ ಹೋಗುವ ದಾರಿ ಮಧ್ಯದ ಬಲಭಾಗಕ್ಕೆ (ಉತ್ತರಕ್ಕೆ) ಈ ಗ್ರಾಮವಿದೆ. ಜಗಳೂರಿಗೆ ೧೦ ಕಿ.ಮೀ ಅಂತರದಲ್ಲಿದ್ದು, ಬಸ್‌ಸ್ಟಾಂಡ್ (ಗೇಟ್)ನಿಂದ ೧ ಕಿ.ಮೀ. ನಡೆದುಹೋಗಬೇಕು. ಗ್ರಾಮದಲ್ಲಿ ಊರಿಗೆ. ಮ್ಯಾಸಬೇಡರೆ (ಕಾಮಗೇತಲಾರು) ಹೆಚ್ಚಾಗಿ ವಾಸಿಸುವ ಕಾರಣ ಕಾಮಗೆತನಹಳ್ಳಿ ಎಂದು ಹೆಸರಾಗಿದೆ. ಇಲ್ಲಿ ಸೂರ್ಯಲಿಂಗೇಶ್ವರ ದೇವಾಲಯವಿದೆ. ಸಹಸ್ರಾರು ಭಕ್ತರನ್ನು ಅನುಯಾಯಿಗಳನ್ನು ಹೊಂದಿರುವ ಈ ನೆಲೆ ಮ್ಯಾಸಬೇಡರ ಆಚಾರದ ಕಟ್ಟೆಮನೆ ಆಗಿದೆ.

ಮ್ಯಾಸಬೇಡರ ಕಾಪು – ಕಂಪಗಳ ಹೆಚ್ಚಾದಂತೆ ತಮ್ಮ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವ – ಸಾಮರಸ್ಯ ಮೂಡಿಸಲು ಸಲುವಾಗಿ ಕಟ್ಟೆಮನೆಗಳನ್ನು ಹಿರಿಯರು ಸ್ಥಾಪಿಸಲು ಮುಂದಾಗುತ್ತಾರೆ. ಎಲ್ಲರ ಒಪ್ಪಿಗೆಯಂತೆ ಮ್ಯಾಸಬೇಡರ (ನಾಯಕ)ದೊರೆ ಯರಮಂಚಿ ನಾಯಕ, ಗಗ್ಗರಿದಾಸ ಹಾಗೂ ಒಂಬತ್ತು ಜನ ಹಿರಿಯರ (ಅಜ್ಜಂದಿರು – ಮುತ್ತಿಗಾರು) ಸಮ್ಮುಖದಲ್ಲಿ ಆಚಾರದ ಕಟ್ಟೆಮನೆಯನ್ನು ಸ್ಥಾಪಿಸಿರುತ್ತಾರೆ. ಶ್ರೀಮಾನ್ ಮಹಾನಾಯಕಚಾರ್ಯ ನಾಯಕ ಶಿರೋಮಣಿಗಳಾದ ಕಾಮಗೇತಿ ಮಠದ ಆಚಾರದ ಕಟ್ಟೆಮನೆಯನ್ನು ಕಾಮಗೇತನಹಳ್ಳಿಯಲ್ಲಿ ಏಕಚಕ್ರಾಧಿಪತಿ, ಮ್ಯಾಸನಾಯಕರ ಮೂಲ ಪುರುಷ, ಸೂರ್ಯವಂಶದ ಮಲ್ಲನಾಯಕ ಸಂತತಿಯ ದೊರೆ ಯರಮಂಚಿನಾಯಕ ತನ್ನ ಸಾರ್ಥಕ ಸೇವೆಯನ್ನು ಇದಕ್ಕೆ ಸಲ್ಲಿಸಿ ಸ್ಥಾಪಿಸಿದ್ದ. ಇವನ ಕಾಲದ ಇತರ ಕಟ್ಟೆಮನೆಗಳೆಂದರೆ : ನನ್ನಿವಾಲ, ಗೋನೂರು ಮತ್ತು ನಾಯಕನಹಟ್ಟಿ. ಇವು ಸಮಸ್ತ ಮ್ಯಾಸನಾಯಕರಿಗೆ ಸಂಬಂಧಪಟ್ಟಂತವು. ಆದರೆ ಕಾಮಗೇತನಹಳ್ಳಿ ಮತ್ತು ಕಾಟಪ್ಪನಹಟ್ಟಿಗಳನ್ನು ಆಚಾರದ ಮತ್ತು ವಿಚಾರದ ಕಟ್ಟೆಮನೆಗಳಾಗಿ ಕ್ರಮೇಣ ಮಾಡಿಕೊಳ್ಳಲಾಗಿದೆ.

ಇಲ್ಲಿರುವ ಸೂರಪ್ಪನಾಯಕದೇವರು ಮೂಲತಃ ಬುಡಕಟ್ಟುವೀರ. ವೀರಮರಣ ಹೊಂದಿದ ನಂತರ ಆತನನ್ನು ದೈವತ್ವಕ್ಕೇರಿಸಿದ್ದಾರೆ. ಸೂರಪ್ಪ, ಸೂರ್ಯಲಿಂಗೇಶ್ವರ ಎಂದು ಆಕಾಶದಲ್ಲಿರುವ ಸೂರ್ಯನನ್ನು ತಮ್ಮ ವಂಶಕ್ಕೆ ಹಾಗೂ ದೇವರಿಗೆ ಹೆಸರಿಟ್ಟಿರುವ ಮ್ಯಾಸನಾಯಕರ ಸಂಸ್ಕೃತಿ ಅಮೋಘವು ಅಷ್ಟೇ ದೈವಾರಾಧನೆಗೆ ಪ್ರತೀಕವೂ ಆಗಿದೆ. ಈ ಸೂರಪ್ಪನನ್ನು ಗಾದರಿಪಾಲನಾಯಕ ಹಾಗೂ

ಜಗಳೂರು ಪಾಪನಾಯಕನ ತಂದೆಯೆಂದು ಸಹಾ ಕರೆಯುತ್ತಾರೆ. ಒಟ್ಟಾರೆ ನಾಯಕ ಶಿರೋಮಣಿ, ಮ್ಯಾಸಮಂಡಳಿ ಸಂಸ್ಥಾಪಕನಾದ ಯರಮಂಚಿನಾಯಕನಿಗೆ ಸೂರಪ್ಪ ಚಿಕ್ಕಪ್ಪನಾಗುತ್ತಾನೆ.

ಒಂದು ಕಾಲದಲ್ಲಿ ವೈಭವದಿಂದ ಮೆರೆದ ಕೋಟೆ, ಬುರುಜು, ದ್ವಾರಗಳು ಶಿಥಿಲಗೊಂಡು ಕೇವಲ ಅವಶೇಷಗಳಷ್ಟೆ ಮೂಕಸಾಕ್ಷಿಯಾಗಿವೆ. ಇಲ್ಲಿರುವ ದೇವಾಲಯವು ಸಹಸ್ರಾರು ಭಕ್ತರಿಗೆ ಧಾರ್ಮಿಕ ಕ್ಷೇತ್ರವಾಗಿ ಲೋಕಕಲ್ಯಾಣ ಸೇವೆಯಲ್ಲಿ ತೊಡಗಿದೆ. ಈ ದೇವರಿಗೆ ಪೂಜಾರಿ ಮತ್ತು ಪಟ್ಟಾಧ್ಯಕ್ಷರು ಇದ್ದು ಆತನ ಹೆಸರು ನಿಜಲಿಂಗಪ್ಪನವರು. ಇವರು ಸಹಾ ಹೆಸರಿಗೆ ತಕ್ಕಂತೆ ನಿಷ್ಠೆ, ಪ್ರಾಮಾಣಿಕತೆಯಿಂದ ದೇವರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಮ್ಯಾಸನಾಯಕ ಬುಡಕಟ್ಟಿನಲ್ಲಿ ಕುಲಕೆಟ್ಟರೆ (ಮೆಟ್ಟಿನಿಂದ ಹೊಡೆದರೆ – ನಾಯಿಕಚ್ಚಿದರೆ – ನಿಷೇದಿತ ಜಾತಿಗಳಲ್ಲಿ ರಕ್ತ ಸಂಬಂಧ ಬೆಳೆಸಿದರೆ) ಅಥವಾ ಯಾವ ಬಗೆಯಲ್ಲಾದರೂ ತೊಂದರೆಗಳಾದರೆ ಅವರಿಗೆ ಸಾಂತ್ವಾನ ಹೇಳಿ ದೇವರ ನೀರುಹಾಕಿಸಿ ಕಳುಹಿಸುತ್ತಿದ್ದರು. ಕೆಲವರು ತಮ್ಮ ಕುಲ – ಗೋತ್ರಗಳನ್ನು ಇವರಿಂದ ತಿಳಿದುಕೊಳ್ಳಲು ಆಸ್ಪದವಾಗಿದೆ. ಇವರು ಜ್ವಲಂತ ಸಮಸ್ಯೆ, ವಾದ – ವಿವಾದಗಳನ್ನು ನ್ಯಾಯತೀರ್ಮಾನಗಳ ಮೂಲಕ ಬಗೆಹರಿಸಿಕೊಂಡಿದ್ದಾರೆ. ಹುಣ್ಣಿಮೆ, ಅಮವಾಸೆಗಳಂದು ದೇವಾಲಯದಲ್ಲಿ ಭಕ್ತರಿಗೆ ವಿಶೇಷ ಸೌಲಭ್ಯವನ್ನು ಒದಗಿಸಲಾಗುತ್ತದೆ. ಕುಲಕೆಟ್ಟ ವ್ಯಕ್ತಿಯನ್ನು ಸಿದ್ಧಿಗೊಳಿಸಿ (ಪವಿತ್ರ) ಜನಾಂಗದ ಅಭಿವೃದ್ಧಿಗೆ ಶ್ರಮಿಸುವಂತೆ ಪ್ರೇರೇಪಿಸುವ ಮಹಾಧಾರ್ಮಿಕ ಕ್ಷೇತ್ರವಾಗಿದೆ ಕಾಮಗೇತನಹಳ್ಳಿ.

**೪.೧. ಮ್ಯಾಸನಾಯಕರ ಮೌಖಿಕ ಪರಂಪರೆಯಲ್ಲಿ ಕಾಮಗೇತನಹಳ್ಳಿ ನಿರ್ಮಾಣ**

ಮ್ಯಾಸನಾಯಕರ ಗುರು – ಹಿರಿಯರೆಲ್ಲ ತಮ್ಮ ಬುಡಕಟ್ಟಿನ ವಲಸೆಯಿಂದ ಬೇಸತ್ತು ಒಂದೆಡೆ ನೆಲಸಬೇಕೆಂಬ ತೀರ್ಮಾನಕ್ಕೆ ನಾಂದಿಹಾಡಿದರು. ನೆಲಸುವ ತಾಣಕ್ಕಾಗಿ ಹುಡುಕಾಟದಲ್ಲಿದ್ದಾಗ ಒಂಟಿಕೋಡು ಬೆಳ್ಳಿಹಸು ಪಂಪಾದ್ರಿ ಬಸವರೊಂದಿಗೆ ದನ – ಕರುಗಳಿಗೆ ರೊಪ್ಪ ಹಾಕಿ, ಮೇಯಿಸುತ್ತಿದ್ದರಂತೆ. ನೋಡಲು ಹೊರಟಾಗ ನೆಗ್ಗಿಲಮುಳ್ಳು (ನೆಲದಲ್ಲಿ ಚಿಕ್ಕಗಾತ್ರದ ಲೆಗ್ಗಿಲಮುಳ್ಳು) ದಾರಿಯಲ್ಲಿ ಬಿದ್ದಿದ್ದು ಕೆಲವರು ಸ್ವಚ್ಛ ಮಾಡಿದಾಗ ಅವರನ್ನು ಹಿಂಬಾಲಿಸಿದರಂತೆ. ಅಲ್ಲಿಗೆ ಹೋದ ಹಿರಿಯರೆಲ್ಲ ಸೇರಿ ಪಚ್ಚಪದಿಕೋಟೆಯನ್ನು ಮತ್ತು ಅದಕ್ಕೆ ಏಳುಬಾಗಿಲುಗಳನ್ನು ನಿರ್ಮಾಣಮಾಡಿದರೆಂದು ತಿಳಿಯುತ್ತದೆ. ಪಕ್ಕದಲ್ಲಿ ಹರಿಯುತ್ತಿದ್ದ ಹಳ್ಳದಲ್ಲಿ ಒಂಬತ್ತು ಚಿಲುಮೆಗಳನ್ನು ತೋಡಿ ಬಂದ ಜಲದಲ್ಲಿ ತಮ್ಮಲ್ಲಿದ್ದ ನಾರಾಯಣನ ಸಾಲಿಗ್ರಾಮವನ್ನು ಗಂಗಾಸ್ಥಾನ ಮಾಡಿಸಿ ಪ್ರಮುಖ ಪೂಜೆಗಳಾದ ಮೇಲೆ ಅದಕ್ಕೆ ಸೂರಪ್ಪನೆಂದು (ಲಿಂಗ – ಒಡೆಯ) ಹೆಸರಿಟ್ಟರು. ಕಾಮಗೇತಿ ವಂಶದ ಸಹೋದರ ಸಂಬಂಧಿಗಳು ಸೇರಿ ಪೂಜನೀಯ ಸ್ಥಳವನ್ನು ನಿರ್ಮಾಣ ಮಾಡಿದ ಜಾಗದಲ್ಲಿ ನೆಲಸಿದ ತಳಕ್ಕೆ 'ಕಾಮಗೇತನಹಳ್ಳಿ' ಎಂದು ಹೆಸರಿಟ್ಟರು.

ಈ ಗ್ರಾದಲ್ಲಿ ಬಹುತೇಕ ನೆಲಸಿದವರೆಲ್ಲ ಮ್ಯಾಸನಾಯಕರೇ. ತಮ್ಮ ಸೂರಪ್ಪದೇವರು ನೆಲಸಿದ್ದ ಕಾರಣ ಈ ಸ್ಥಳಕ್ಕೆ ಎಲ್ಲಿಲ್ಲದ ಮೆರುಗು ಬಂದಿದೆ. ಸೂರಪ್ಪ ದೇವರಿಗೆ 'ನಳ್ಳಟಬ್ಬ' ಬೆಡಗಿನವನನ್ನು ಪೂಜಾರಿಯಾಗಿ ಪೂಜಾರಿಕೆ ಮಾಡುತ್ತಾರೆ. ಮ್ಯಾಸಮಂಡಳಿಯಲ್ಲಿ ಮೂರು ಜನ ನಾಯಕರು, ೩ ಜನ ಪೂಜಾರಿಗಳು, ೭ ಜನ ಹಿರಿಯರು ಇರುತ್ತಾರೆ. ಇವರಲ್ಲಿ ನಲಗೇತಿ, ಕಾಮಗೇತಿ ಮತ್ತು ಬುಲ್ಲುಡ್ಲು (ಯರಪೋತಿ) ಪೂಜಾರಿಗಳಾಗಿರುತ್ತಾರೆ. ಕಾಮಗೇತಿ ವಂಶದ ದೇವರಿಗೆ ಅದೇ ವಂಶದವನನ್ನು ಪೂಜಾರಿಯಾಗಿ ಮಾಡದೆ ಬೇರೆ ಬೆಡಗಿನವರನ್ನು ಆಸ್ಥಾನಕ್ಕೆ ನೇಮಿಸಿರುವುದು ವಿಶೇಷವಾಗಿದೆ.

ಕಾಮಗೇತಿಯರು ಕರ್ನಾಟಕದಲ್ಲಿ ಯಾವ ಭಾಗದಲ್ಲೇ ನೆಲಸಿರಲಿ ತಮ್ಮ ಮೂಲಸ್ಥಳ, ಮನೆದೇವರನ್ನು ಸಂದರ್ಶಿಸದೇ ಇರುವುದಿಲ್ಲ. ವರ್ಷಕ್ಕೊಮ್ಮೆ, ಒಂದೆರಡುಬಾರಿ ದೇವರ ದರ್ಶನ ಪಡೆಯುತ್ತಾರೆ. ಈ ಭಾಗದಲ್ಲಿ ಸೂರಪ್ಪ ಅಥವಾ ಸೂರಲಿಂಗೇಶ್ವರನನ್ನು ಹಲವು ಸಮಾಂತರ ಹೆಸರುಗಳಿಂದ ಕರೆದು ಸಮಾನವಾಗಿ ಕರೆಯುವುದು ವಾಡಿಕೆ. ಸೂರಲಿಂಗೇಶ್ವರ, ಕಾಟೇಲಿಂಗೇಶ್ವರ, ಚಿತ್ರಲಿಂಗೇಶ್ವರ (ಚನ್ನಕೇಶವ), ನಲ್ಲಚೆರುವು ಓಬಳ ದೇವರು ಕಮತ್ತು ರಾಯಾಪುರ ಮ್ಯಾಸರಹಟ್ಟಿಯ ಪದಿನಾನ ದೇವರನ್ನು ಸಹಾ ಇವರು ಪೂಜಿಸುತ್ತಾರೆ.

ಇವರು ಸೂರ್ಯ ಮತ್ತು ಚಂದ್ರವಂಶದ ದೇವರುಗಳನ್ನು ಆರಾಧಿಸುವುದುಂಟು. ಬಹುತೇಕ ಸೂರ್ಯದೇವರನ್ನೇ ಕಾಮಗೇತಲಾರು ಪೂಜಿಸುವುದು ಪ್ರಚಲಿತವಿದೆ.

ಕಾಮಗೇತಿ ಸಹೋದರ ಸಂಬಂಧಿಗಳು ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿದ್ದರು. ಶೈವ ಧರ್ಮಕ್ಕೆ ಸೇರಿದ ಮೇಲಿನ ಐದು ದೇವರುಗಳನ್ನು ಇವರು ಪೂಜಿಸುತ್ತಾರೆ. ಮತ್ತು ಈ ಎಲ್ಲಾ ದೇವರುಗಳು ಒಂದೇ ಆಗಿರುವುದರಿಂದ ದೇವರ ಭಕ್ತರು, ಭಾದ್ಯಸ್ಥರು (ಪದ್ನಿದೇವರಹಟ್ಟಿ) ಎಲ್ಲ ದೇವಾಲಯಗಳಿಗೂ ಸಮನಾಗಿ ನಡೆದುಕೊಳ್ಳುತ್ತಾರೆ.

ದೊರೆ ಯರಮಂಚಿನಾಯಕ, ದಳವಾಯಿ ಗಗ್ಗರಿದಾಸರಿ ಜತೆ ೩ ಜನ ನಾಯಕರು, ೩ ಜನ ಪೂಜಾರಿಗಳು, ೩ ಜನ ದಾಸಯ್ಯಗಳು ಮತ್ತು ೭೭ ಮಂದಿ ಮನ್ನೆಗಾರರ ಪ್ರಯತ್ನದ ಫಲ ಎಲ್ಲರೂ ಸೇರಿ ನಿರ್ಣಯದ ಸೂರಪ್ಪ ದೇವರ ಕ್ಷೇತ್ರವಾದ ಕಾಮಗೇತನಹಳ್ಳಿ ಸಮಸ್ತನಾಯಕ ಬುಡಕಟ್ಟಿನವರಿಗೆ ಆಚಾರದ ಕಟ್ಟೆಮನೆಯಾಗಿ ಪ್ರವರ್ಧಮಾನಕ್ಕೆ ಬಂದು ನಿಂತಿದೆ.

**೪.೧. ಕಾಮಗೇತಿಯವರ ಹಕ್ಕು – ಬಾಧ್ಯತೆಗಳು**

ಮ್ಯಾಸನಾಯಕರಲ್ಲಿ ಹಬ್ಬ – ಹರಿದಿನಕ್ಕಿಂತ ಮದುವೆಯ ಆಚರಣೆಗೆ ಹೆಚ್ಚಿನ ಆದ್ಯತೆ ಕೊಡುತ್ತಾರೆ. ಮದುವೆಯ ವಿವಿಧ ಕಾರ್ಯಕ್ರಮಗಳಲ್ಲಿ ಕಂಬಳಿ ಹಾಸುವ ಮತ್ತು ವೀಳ್ಯೆ ಹಿಡಿಯುವ ಮೊದಲ ಹಕ್ಕು ಕಾಮಗೇತಿಗೆ ಸೇರುತ್ತದೆ. ಇವರಿಗೆ ಅರಮನೆ ವೀಳ್ಯೆ ಎಂದಾಗ ಕಾಮಗೇತಿ ವ್ಯಕ್ತಿ ಅದನ್ನು ನಡೆಯುತ್ತಾನೆ. ಒಂದು ವೇಳೆ ಕಾಮಗೇತಿಯವರು ಆ ಮದುವೆಯಲ್ಲಿ ಭಾಗವಹಿಸಿರಲಿಲ್ಲ ಎಂದಾಗ ಜಿಂಪಲರಿಗೂ ಈ ವೀಳ್ಯೆ ಕೊಡುತ್ತಾರೆ. ಕಾಮಗೇತಿ ಇದ್ದರೆ ಮದುವೆ ಕಾರ್ಯಕ್ಕೆ ಪುರೋಹಿತನ ಅಗತ್ಯವಿಲ್ಲ. ಮದುವೆ ಕಾರ್ಯಕ್ರಮಗಳನ್ನು ಇವರೇ ನೆರವೇರಿಸಿಕೊಡುತ್ತಾರೆ. ಇದಕ್ಕೆ ಕಾರಣ ಮ್ಯಾಸ ಮಂಡಳಿಯ ಧಾರ್ಮಿಕ ಪರಂಪರೆಯಲ್ಲಿ ಕಾಮಗೇತಿಯವರಿಗೆ ಪೂಜಾರಿಯ ಹಕ್ಕನ್ನು ಕೊಟ್ಟಿರುತ್ತಾರೆ. ಕೆಲವು ಪೂಜಾರಿಗಳು ಮೈಗೆ ಮುದ್ರೆ ಹೊತ್ತಿಸಿಕೊಂಡು ಪಟ್ಟಾಭಿಷೇಕ ಮಾಡಿಸಿಕೊಳ್ಳುವ ಸಂಪ್ರದಾಯವಿದೆ.

'ಮಳೆಲರ ಗೋತ್ರಕ್ಕೆ ಕಾಮ್ಗೇತಿ ಪಾಳೆಯಗಾರರು ಕೋಲುಕಾರರೆಂತಲೂ ಹಾಗೂ ತಳವಾರರೆಂತಲೂ, ಕರೆದು ತಮ್ಮ ಸಂಸ್ಥಾನದ; ಪ್ರತಿ ಊರಿನ ಸ್ಥಳ ವಿಚಾರವನ್ನು ಇವರ ಕಡೆಯಿಂದ ತಿಳಿದುಕೊಳ್ಳುತ್ತಿದ್ದರು.

[1] ನಾಯಕರಹಟ್ಟಿ ಕಟ್ಟೆಮನೆ ವ್ಯಾಪ್ತಿಗೆ ಬರುವ ಎಲ್ಲ ಹಳ್ಳಿಗಳ ದೇವಾಲಯಗಳಿಗೆ ಕಾಮಗೇತಿಯನ್ನೂ ಪೂಜಾರಿಯಾಗಿ ನೇಮಿಸಿದ್ದರು. ಮದುವೆ, ದೇವರ ಕಾರ್ಯಗಳಲ್ಲಿ ಇವರು ಮುಖ್ಯಸ್ಥರಾಗಿರುತ್ತಾರೆ. ಮಳೆಲಾರು ಗದ್ದಿಗೆ ಹಾಕುವ ಅಧಿಕಾರ ಹೊಂದಿದ್ದರು. ಇವರು ಗದ್ದಿಗೆ ಏರುವ ಅಧಿಕಾರ ಹೊಂದಿದ್ದರು.

**೪.೨ ಗಾವು ಜಿಗಿಯುವುದು**

ದಾವಣಗೆರೆ ಜಿಲ್ಲೆ ಜಗಳೂರು ತಾಲೂಕಿನ ಆಕನೂರು ಗ್ರಾಮದಲ್ಲಿ ಕಾಮಗೇತಲಾರು ನೆಲಸಿದ್ದಾರೆ. ಇವರಲ್ಲಿ ಕೆಲವರು ಹಿಂದಿನಿಂದಲೂ ಗಾವು ಜಿಗಿಯುವು ಹಕ್ಕು – ಭಾದ್ಯತೆಗಳ ಕ್ರಿಯಾ ವಿಧಾನಗಳನ್ನು ಹೊಂದಿರುವುದರಿಂದ 'ಪೋತುರಾಜ'ರೆಂದು ಕರೆಯುತ್ತಾರೆ. ಅಂದರೆ ಚಿತ್ರದುರ್ಗ, ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳ ಮ್ಯಾಸನಾಯಕರ ಹಟ್ಟಿ ಅಥವಾ ಇತರೆ ಗ್ರಾಮಗಳಲ್ಲಿ ಆಚರಿಸುವ ಶಕ್ತಿದೇವತೆಯ ಹಬ್ಬದಲ್ಲಿ ಕರೆ ಹೋತನ್ನು ಜೀವಂತವಾಗಿ ತನ್ನ ಬಾಯಿಂದ ಕಡಿದು ಒಂದೊಂದೇ ಅಂಗವನ್ನು ಬೇರ್ಪಡಿಸುವುದನ್ನು ಗಾವು ಜಿಗಿಯುವ ಕಾರ್ಯ ಎಂದು ತಿಳಿಯಬಹುದಾಗಿದೆ. ಬಲಿಷ್ಟನಾದ ಪೋತುರಾಜನು ಗುರುವಾರವೇ ಉಪವಾಸವಿದ್ದು (ಒಂದೊತ್ತು) ಅಂದು ಸಂಜೆ ೪ ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಸ್ನಾನ – ಗಂಗೆ ಪೂಜೆ ಇತರ ಕಾರ್ಯಕ್ರಮಗಳನ್ನು ಪೂರೈಸುತ್ತಾನೆ. ಬೇಡ ಬುಡಕಟ್ಟಿನಲ್ಲಿ ಇಂಥ ವಿಶಿಷ್ಟ ಆಚರಣೆ ವೈದಿಕಶಾಹಿಯ ಪ್ರಭಾವದಿಂದ ಆಗಿರುವಂತಿದೆ.

### ೪.೪. ಕಾಮಗೇತಿಯವರ ಭೌಗೋಳಿಕ ವಿಸ್ತರಣೆ

ಕರ್ನಾಟಕದಲ್ಲಿ ಕಾಮಗೇತಿಯವರು ತಮಗಿಷ್ಟವಾದ ನೆಲೆಗಳಲ್ಲಿದ್ದು, ದಕ್ಷಿಣ ಭಾರತದ ಇತರ ಬುಡಕಟ್ಟುಗಳಂತೆ ಗಿರಿಗಳಲ್ಲಿ, ಕಾಡುಗಳಲ್ಲಿ ನಾಗರಿಕತೆ ಸಂಪರ್ಕದಿಂದ ದೂರ ವಾಸಿಸುತ್ತಾರೆ. ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ನೆಲೆಸಿರುವ ಕಾಮಗೇತಿಯವರು ಹಳ್ಳಿ, ಹಟ್ಟಿ, ಹೋಬಳಿ, ತಾಲೂಕು, ಪಟ್ಟಣ ನಗರಗಳಲ್ಲಿ ಇತ್ತೀಚೆಗೆ ವಾಸಿಸುತ್ತಿದ್ದಾರೆ. ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳ ಗಡಿಯಾಗಿ ಹರಿಯುವ ಚಿನ್ನಹಗರಿ ನದಿ ಪರಿಸರದಲ್ಲಿ ಇವರು ವ್ಯಾಪಕವಾಗಿ ನೆಲಸಿದ್ದಾರೆ. ಚಿತ್ರದುರ್ಗ ನಗರ, ಚಳ್ಳಕೆರೆ ಪಟ್ಟಣ, ಮೊಳಕಾಲ್ಮೂರು, ನಾಯಕನಹಟ್ಟಿ ಪರಿಸರಗಳಲ್ಲಿ ಇವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕಂಪಳದೇವರಹಟ್ಟಿ ಸುತ್ತಮುತ್ತ ಇವರು ದೇವರ ಪೂಜಾರಿಗಳಾಗಿದ್ದಾರೆ. ಮೊಳಕಾಲ್ಮೂರು ತಾಲೂಕು ತುಮಕೂರ್ಲಹಳ್ಳಿ ಗ್ರಾಮದಲ್ಲಿ ಕಾಮಗೇತಲಾರು ಬೆಡಗಿನ ಸು.೪೦ ಮನೆಗಳಿವೆ. ಸಣ್ಣೋಬಯ್ಯ ತಂದೆ ದಾಸರೋಬಯ್ಯ (೬೫), ನಾಯಕರು, ಕಾಮಗೇತಲಾರು ಬೆಡಗಿನವರು. ಇವರಿಗೆ ಮಾಸಿಲುವಾಡು, ಮಂಗಪೋಟಿ ಮಾಸಿಲು ಎನ್ನುವರು. ಈತ ಶ್ರೀಕಂಪಳರಂಗಸ್ವಾಮಿಗೆ ದಾಸಯ್ಯನಾಗಿರುವನು. ೩೨ ವರ್ಷಗಳಿಂದ ದಾಸಯ್ಯನಾಗಿದ್ದು, ಕಂಪಳ ದೇವರಿಗೆ ಇವರು ರತ್ನಗಂಬಳಿ ಹಾಸುವುದು, ಒಡಿಕೆ, ಪೂಜೆ ಆಗಬೇಕಾದರೆ ಮೊದಲು ಕಾಸು ಇಡುತ್ತಾರೆ. ಕಾಮಗೇತನಹಳ್ಳಿ ಸೂರಪ್ಪ ಇವರ ಮನೆದೇವರು. ಗುಡೇಕೋಟೆ ಪರಿಸರದಲ್ಲಿ ಕೃಷಿಯನ್ನು ಅವಲಂಭಿಸಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ ಜಗಳೂರು ತಾಲೂಕಿನಲ್ಲಿಯೂ ಕಾಮಗೇತಿಗಳು ಹೆಚ್ಚಾಗಿದ್ದಾರೆ. ಕಾಮಗೇತಲಾರು ನೀರು – ರಸ್ತೆ – ವಿದ್ಯುತ್ ದೀಪಗಳಿಂದ ಈವರೆಗೆ ದೂರ ಇದ್ದರು. ಇಂದು ನಾಗರಿಕತೆಗೆ ಒಗ್ಗಿ ಹೋದ ಇವರು ಬದುಕಿನಲ್ಲಿ ಸಾಕಷ್ಟು ಪರಿವರ್ತನೆಗಳನ್ನು ಕಂಡಿದ್ದಾರೆ. ಇನ್ನು ಕೆಲವರು ರಸ್ತೆ, ನೀರು, ಫೋನು, ವಿದ್ಯುತ್ ಇಲ್ಲದ ಏಕಾಂತ ಸ್ಥಳ, ಕಾಡು, ಬಂಜರು ಭೂಮಿಯಲ್ಲಿ ನೆಲಸಿದ್ದಾರೆ. ಎಲ್ಲಿ ನೆಲಸಿರಲಿ ತಮ್ಮ ಮನೆದೇವರಾದ ಕಾಮಗೇತನಹಳ್ಳಿ ಸೂರಪ್ಪನಿಗೆ ವರ್ಷಕ್ಕೆ ಒಂದೆರಡು ಬಾರಿ ಬಂದು ದರ್ಶನ ಪಡೆಯುತ್ತಾರೆ.

ಸೂರ್ಯಲಿಂಗೇಶ್ವರ ದೇವರು ಮತ್ತು ಆಚಾರದ ಕಟ್ಟೆಮನೆಗೆ ನಡದುಕೊಳ್ಳತಕ್ಕ ಕಾಮಗೇತಿ ಭಕ್ತರು ಇರುವ ಹಳ್ಳಿಗಳು ಇಂತಿವೆ : ಗಲಗಲ್ಲು, ಮಾರಮ್ಮನಹಳ್ಳಿ, ರಾಯಾಪುರ, ತುಮಕೂರ್ಲಹಳ್ಳಿ, ಹಿರೇಹಳ್ಳಿ, ಬಿ.ಜಿ.ಕೆರೆ, ರುದ್ರಮ್ಮನಹಳ್ಳಿ, ಮಲ್ಲೂರಹಳ್ಳಿ, ಗುಂತಕೋಲೇಮನಹಳ್ಳಿ, ತೊರೆಕೋಲೆಮನಹಳ್ಳಿ, ಚಿಕ್ಕಮಲ್ಲನಹೊಳೆ, ಕಾತ್ರಿಕೆಹಟ್ಟಿ, ಪೂಜಾರಹಳ್ಳಿ, ಸಿಡೆಗಲ್ಲು, ಗುಡೇಕೋಟೆ, ಯರಗುಂಡ್ಲಹಟ್ಟಿ, ಕೆ.ದಿಬ್ಬಹಳ್ಳಿ, ಹಾಲಸಾಗದರಟ್ಟಿ, ಕಾಮಲಾಪುರ, ಉಬ್ಬಲಗಂಡಿ, ರಾಜಾಪುರ, ಹನುಮಾಪುರ, ಬಾಂಡ್ರಾವಿ, ತುಳಸಿಕೆರೆ, ಸಂತೆಗುಡ್ಡ, ಮಲೆತುಂಬರ ಗುದ್ದಿ, ಯರ್ರೋನಹಳ್ಳಿ, ಗೌರೀಪುರ, ನರಸಾಪುರ, ಸೊಂಡೂರು, ಸಿದ್ದಾಪುರ, ಹಾರಕಬಾವಿ, ಜುಟ್ಟುಲಿಂಗನಹಟ್ಟಿ, ಜೋಗಿಹಳ್ಳಿ, ಮಾಕನಡಕು, ನರಸಿಂಹಗಿರಿ, ನುಂಕನಹಳ್ಳಿ, ಸೂಲದಹಳ್ಳಿ, ಕೋನಸಾಗರ, ಉಡೆಗೋಳ, ವಲಸೆ ಕರ್ನಾರಹಟ್ಟಿ, ವಲಸೆ, ಚಿನ್ನೋಬನಹಳ್ಳಿ, ನಿಂಗನಾಯಕನಹಳ್ಳಿ, ಮಾಡನಾಯಕನಹಳ್ಳಿ, ತಿಮ್ಮಾಲಾಪುರ, ಮಾದಮುತ್ತೇನಹಳ್ಳಿ, ಕಾನಕಟ್ಟೆ, ಜಾಗನೋರಹಟ್ಟಿ, ಎತ್ತಿನಹಟ್ಟಿ, ಪೆಯಿಲಾರಹಟ್ಟಿ, ಕಾಟವ್ವನಹಳ್ಳಿ, ಮುಚ್ಚುಗುಂಟೆ, ಚಿತ್ರದುರ್ಗ, ಚಳ್ಳಕೆರೆ, ಜಾನುಕೊಂಡ, ಬಂಜಗೆನಹಳ್ಳಿ, ಅವಳೆಹಟ್ಟಿ, ರಾಮಗಿರಿ, ಅರೆಹಳ್ಳಿಹಟ್ಟಿ, ಕೊಡಗಳಟ್ಟಿ, ಗುಡ್ಡದ ಮಲ್ಲಿಗೆನಹಳ್ಳಿ, ನಲ್ಲೂರು ಹಿರೆಕಂದ್ವಾಡಿ, ಹಳಿಯೂರು, ಬಿ.ದುರ್ಗ, ಸಾದರಹಳ್ಳಿ, ಬಳ್ಳೆಕಟ್ಟೆ, ವಿಜಾಪುರ, ಚಿಕ್ಕಹಾಲಘಟ್ಟ, ಅಳಗವಾಡಿ, ಪಳಕಿಹಳ್ಳಿ, ಬಾವಿಹಾಳು, ಕೈದಾಳು, ಕಾಶೀಪುರ,ಲೋಕಿಕೆರೆ, ಮಳಲಕೆರೆ, ಶಾಗಲಿ, ಕಬ್ಬೂರು, ವಿಟ್ಲಾಪುರ, ಹೂವಿನಮಡು, ಎರವ್ವನಾಗ್ತಿಹಳ್ಳಿ, ದಾವಣಗೆರೆ, ಮಲ್ಲಾಪುರ, ಮ್ಯಾಸರಹಳ್ಳಿ, ಬಾದ್ದೂರುಘಟ್ಟ, ನಂದಿಹಳ್ಳಿ, ಗೋಡೆಬಿಳಿಚೋಡು, ಪಾಲನಾಯಕನಕೋಟೆ, ಸೂರಗೊಂಡೇನಹಳ್ಳಿ, ಹೊಸದುರ್ಗ, ಬುಲ್ಲನಹಳ್ಳಿ, ಕಸ್ತೂರಿಪುರ, ಗೋಪಗುಂಡನಹಳ್ಳಿ, ಕೆಳಗೋಟೆ, ಬಸವಾಪುರ, ಐನಳ್ಳಿ, ಲಕ್ಕಂಪುರ, ಜಗಲೂರು ಗೊಲ್ಲರಹಟ್ಟಿ, ಜಗಳೂರು ಮೊದಲಾದವು. ಕಾಮಗೇತಲಾರು ಮಂದ ಸಂತತಿಗೆ ಸೇರಿದವರು. ಇವರು ಹೆಣ್ಣು ತರುವುದು ಮಲ್ಲಿನಾಯಕ ಸಂತತಿಯಿಂದ. ಕೊಟ್ಟು – ಕೊಳ್ಳುವ ಸಂಬಂಧ ಇವೆರಡರಲ್ಲಿದೆ. ಉದಾ: ಮಂದಕ್ಕೆ ಸೇರಿದವರೆಂದರೆ: ಮಳೆಲಾರು, ಪಾಮುಡ್ಲಾರು, ಬುಟ್ಟುಗಲಾರು, ಪಟ್ಟಪುವಲಾರು. ಇವರನ್ನು ಏಳುಮನೆ ಬೀಗರೆಂದು ಕರೆಯುವರು.

**೪.೫ ಕಾಮಗೇತಿಗಳ ದೈವರಾಧನೆ ಮತ್ತು ಸೂರ್ಯಲಿಂಗೇಶ್ವರ**

ದೊಣೆಹಳ್ಳಿ ಹತ್ತಿರ ಚಿಕ್ಕಹಳ್ಳಿಯಲ್ಲಿ ಕೆಲವು ಕಾಲ ಸೂರ್ಯಲಿಂಗ ದೇವರು ವಾಸಿಸಿ ನಂತರ ತಿಮ್ಮಲಾಪುರ ನಂತರ ಕಾಮಗೇತನಹಳ್ಳಿಯಲ್ಲಿ ಪ್ರತಿಷ್ಠಾಪನೆಗೊಂಡಿದೆ.

ಸೂರ್ಯಲಿಂಗದೇವರ ಐದು ಲಿಂಗಗಳೆಂದರೆ : ಸೂರ್ಯಲಿಂಗ, ಕಾಟಮಲಿಂಗ, ಚಿತ್ರಲಿಂಗ, ಪೋತಲಿಂಗ ಮತ್ತು ಮಾದೇಯಲಿಂಗ. ಸ್ಥಳಗಳೆಂದರೆ : ಕಾಮಗೇತನಹಳ್ಳಿ, ಕಾಟಪ್ಪನಹಟ್ಟಿ, ಊಡೇಗೋಳ, ಆಕನೂರು ಮತ್ತು ಹಿರೇಮಲ್ಲನಹೊಳೆ.

ಮತ್ತೊಂದು ಮಾಹಿತಿಯ ಪ್ರಕಾರ ೬ ದೇವರುಗಳ ವಿವರ ದೊರೆಯುತ್ತದೆ.

೧. ಕಾಟಮಲಿಂಗೇಶ್ವರ – ಕಾಟಪ್ಪನಹಟ್ಟಿ, ಚಳ್ಳಕೆರೆ – ತಾ ||

೨. ಚಿತ್ರದೇವರು – ಉಡೇಗೋಳ, ರಾಯದುರ್ಗ, ಆಂಧ್ರಪ್ರದೇಶ

೩. ಸೂರಲಿಂಗೇಶ್ವರ – ಕಾಮಗೇತನಹಳ್ಳಿ, ಜಗಳೂರು – ತಾ ||

೪. ಚನ್ನಕೇಶವ – ನಲಗೇತನಹಟ್ಟಿ, ಚಳ್ಳಕೆರೆ – ತಾ ||

೫. ಪದ್ಮಿನದೇವರು – ರಾಯಪುರ ಮ್ಯಾಸರಹಟ್ಟಿ, ಮೊಳಕಾಲ್ಮೂರು – ತಾ ||

೬. ನಲುಚೆರವು ಓಬಳದೇವರು – ರುದ್ರಮ್ಮನಹಳ್ಳಿ, ಚಳ್ಳಕೆರೆ – ತಾ ||

ಈ ಮೇಲಿನ ೬ ಸ್ಥಳಗಳಿಗೆ ಕಾಮಗೇತಿ ನಾಯಕರು ನಡೆದುಕೊಳ್ಳುತ್ತಾರೆ.

**೧. ಕಾಮಗೇತನಹಳ್ಳಿ ಸೂರಪ್ಪದೇವರ ಪೂಜಾರಿ ಪರಂಪರೆ**

ಅನೇಕ ತಲೆಮಾರುಗಳಿಂದ ಪೂಜಾರಿಕೆಯ ಪರಂಪರೆ ವಿಕಾಸಗೊಂಡಿದೆ. ಕಳೆದ ಶತಮಾನದಲ್ಲಿ ಕುಂಟ ಬಯ್ಯಣ್ಣ ಪಟ್ಟದ ಪೂಜಾರಿಯಾಗಿದ್ದನು. ಇವರ ತರುವಾಯ ಪಾಲುಪೂಜಾರಿ (ಪಟ್ಟದ)ಗೆ ಪಟ್ಟಾಭಿಷೇಕ ಆಗುತ್ತದೆ. ಇವರು ಅದ ಮೇಲೆ ಪೂಜಾರಿ ಪಾಲಯ್ಯನಿಗೆ ಪೂಜಾರಿಕೆ ಹೋಗುತ್ತದೆ. ಆದರೆ ಇವರಿಗೆ ಪಟ್ಟಾಭಿಷೇಕ ಆಗಿರುವುದಿಲ್ಲ. ಈ ಪೂಜಾರಿ ಪಾಲಯ್ಯನ ಳನೇ ಮಗನೇ ಈಗಿರುವ ನಿಜಲಿಂಗಪ್ಪ. ಇವರಲ್ಲಿ ಪೂಜಾರಿಕೆ ಸಂಸ್ಕಾರ ಆದ ಮೇಲೆ ವಿವಾಹವಾಗುವ ಸಂಪ್ರದಾಯವಿದೆ.

**೨. ಪೂಜಾರಿಗೆ ಪಟ್ಟಾಭಿಷೇಕ ಮಾಡುವ ವಿಧಿ – ವಿಧಾನಗಳು**

ನಾಲ್ಕು ಕಾಮಗೇತಿ ಮಠದವರಿಂದ, ಗುರುಹಿರಿಯರಿಂದ, ಒಪ್ಪಿಗೆ ಪಡೆದು ದೊರೆಗಳ ಒಪ್ಪಿಗೆ ಪಡೆದು, ಸಾವಿರದವರ ಒಪ್ಪಿಗೆ ಪಡೆದು ೯ಅಜ್ಜನವರ ಒಪ್ಪಿಗೆ ಪ್ರಕಾರ ಉಜ್ಜಿನಿ ಗುರುಪೀಠ ಹಿರೇಮಠದ ಗುರುಗಳಾದ ಪರಮೇಶ್ವರಪ್ಪ ತಿಪ್ಪೇಸ್ವಾಮಿ ಇವರ ಸಮ್ಮುಖದಲ್ಲಿ ಪಟ್ಟ ಆಗುವ ಮಗುವಿನ ತಂದೆ – ತಾಯಿಯ ಒಪ್ಪಿಗೆ ಪಡೆದು ಆ ಮಗುವನ್ನು ತಂದೆ – ತಾಯಿಯ ಎದುರಿನಲ್ಲಿ ಉಡುದಾರವನ್ನು ಹರಿದು ಸಾವಿರದವರ ಮುಖಾಂತರ ಆ ಮಗುವಿನ ದೀಕ್ಷೆ, ಸಂಸ್ಕಾರವನ್ನು ಕೊಟ್ಟ ನಂತರ ಶ್ರೀ ಸ್ವಾಮಿಯನ್ನು ಹಿರೇಮಠದ ಗುರುಗಳ ಹಸ್ತದಿಂದ (ದೇವರು) ಈ ಸ್ವಾಮಿಯನ್ನು ತಲೆಯ ಮೇಲಿಡಲಾಗುತ್ತದೆ. ತಲೆಯ ಮೇಲೆ ಇಡುವವರು ನಾಯಕನಹಟ್ಟಿ ಹಿರೇಮಠದವರು ಮತ್ತು

ಇಳಿಸುವವರು ಅದೇ ಗುರುಗಳೇ, ಸ್ವಾಮಿ ಹೊರಗಡೆ ಹೋದಾಗ ಈ ಸ್ವಾಮಿಗಳೇ ಮುಂದೆ ಇರಬೇಕು. ಸ್ವಾಮಿಯ ಬೆಟ್ಟಕ್ಕೆ ಹೋದಾಗ ಬೆಟ್ಟದ ದೊಣಿಯಲ್ಲಿ ಅಕ್ಕರಾಯಮ್ಮ ಎಂಬ ದೇವತೆಯ ಗಂಗಾಪೂಜೆ ಸ್ವಾಮಿಗೂ ಪೂಜೆ, ೧೦೧ ಎಡೆ ಹೊಂಡದ ಸುತ್ತ ಹಾಕಲಾಗುತ್ತದೆ. ಆನಂತರ ಸ್ವಾಮಿ ಪೂಜೆ ಮುಗಿಸುತ್ತಾರೆ. ಇವರ ನೇತೃತ್ವದಲ್ಲಿ ಸ್ವಾಮಿ ಮರಳಿ ಬಂದು ಗುಡಿ ಸೇರುತ್ತದೆ.

ಪೆಯಿಲು ಮುತ್ತೆಯವರ ನಿಯಮ ಈ ಸ್ವಾಮಿಯ (ಸೂರಲಿಂಗೇಶ್ವರ) ಹಸುಗಳ ಕರುಗಳನ್ನು ಪಶುಪಾಲನೆ ಮಾಡಿ ಆ ಸ್ವಾಮಿಗೆ ಪ್ರಸಾದ ಅಂದರೆ ಕಡಬನ್ನು ಸ್ವಂತಾಗಿ ಸ್ವಾಮಿಗೆ ಅರ್ಪಿಸುತ್ತಾರೆ. ಇದಕ್ಕೆ ಇವರಿಗೆ ಪೆಯಿಲು ಮುತ್ತೆವರೆಂದು ಕಾಮಗೇತರಲ್ಲಿ ಕರೆದುಕೊಂಡಿದ್ದಾರೆ. ಈ ಮಠದಲ್ಲಿ ಸೂರ್ಯಲಿಂಗೇಶ್ವರ ಸ್ವಾಮಿಗೆ ಹೊರಗಡೆ ಬಂದ ನಂತರ ಈ ಸ್ವಾಮಿಯ ಗಂಟೆ – ಧೂಪಾರತಿಯನ್ನು ಮಲಮುತ್ತೆಯರ ಕೈಯಲ್ಲೇ ಇರುವುದು. ಇವರು ಸ್ವಾಮಿಯ ಪ್ರಸಾದವನ್ನು ಅಂದರೆ ಕಡುಬನ್ನು ಗುಗ್ಗರಿಯನ್ನು ಬಾಯಿಕಟ್ಟಿಕೊಂಡು ಪ್ರಸಾದವನ್ನು ಮಾಡತಕ್ಕವರು ಇವರೇ. ದೇವರ ಬಾಗಿಲಲ್ಲಿ (ದ್ವಾರ) ಕಾದು ಕುಳಿತಿರುತ್ತಾರೆ. ಪೂಜಾರಪ್ಪನವರು ಇವರೇ. ದೇವರ ಬಾಗಿಲಲ್ಲಿ (ದ್ವಾರ) ಕಾದು ಕುಳಿತಿರುತ್ತಾರೆ. ಪೂಜಾರಪ್ಪನವರು ಹೊರಗೆ ಹೋಗುವಾಗ ಬೀಗವನ್ನು ಇವರ ಕೈಯಲ್ಲಿ ಕೊಟ್ಟು ಹೋಗುತ್ತಾರೆ. ಇವರು ಸಹ ಕಾಮಗೇತಲಾರು. ಇವರನ್ನು ಮಲ್ಲಮುತ್ತೆ ಪೂಜಾರಿ ಎಂದು ಕರೆಯುತ್ತಾರೆ.

**೩. ಪೂಜಾರಿ ನಿಜಲಿಂಗಪ್ಪನ ಪಟ್ಟಾಭಿಷೇಕ**

ಈಗಿನ ಪೂಜಾರಿ ನಿಜಲಿಂಗಪ್ಪನವರು ೧೯೩೬ರಲ್ಲಿ ಹುಟ್ಟಿದರು. ೧೯೪೭ರಲ್ಲಿ ಇವರಿಗೆ ಪಟ್ಟಾಭಿಷೇಕವಾದಾಗ ಮುಸ್ಟೂರಿನ ಶ್ರೀ ಓಂಕಾರ ಹುಚ್ಚನಾಗಲಿಂಗ ಸ್ವಾಮಿಗಳಿಂದ ದೀಕ್ಷೆ – ಸಂಸ್ಕಾರ ಪಡೆದಿರುತ್ತಾರೆ. ಒಂಬತ್ತು ಅಜ್ಜನವರು, ದೊರೆಗಳು ಒಪ್ಪಿಗೆ ಮೇರೆಗೆ ಮೇಲಿನ ಸಂಸ್ಕಾರ ಪಡೆದವರು. ನಾಯಕನಹಟ್ಟಿ ಹಿರೇಮಠದ ಪರಮೇಶ್ವರಪ್ಪ ಉಜ್ಜೀನಿಮಠಕ್ಕೆ ಸೇರಿದವರು. ಇವರು ಒಪ್ಪಿಗೆ ಕೊಟ್ಟಿದ್ದರಿಂದ ಪೂಜ್ಯನಾದ ನಿಜಲಿಂಗಪ್ಪನವರಿಗೆ ಪಟ್ಟಾಭಿಷೇಕವಾಗಿತ್ತು (೧೯೪೭). ಆಗಿನಿಂದಲೂ ದೇವರ ಕಟ್ಟೆಮನೆ ಕಾರ್ಯ ಮಾಡಿಕೊಂಡು ಬಂದಿದ್ದಾರೆ. ದಿ : ೨೩ – ೧೧ – ೧೯೮೬ರಲ್ಲಿ ಕಲ್ಲಿನ ದೇವಾಲಯವನ್ನು ಪೂಜಾರಿ ನಿಜಲಿಂಗಪ್ಪನವರ ನೇತೃತ್ವದಲ್ಲಿ ನಿರ್ಮಾಣವಾಯಿತು. ದೊರೆ, ಭಕ್ತಾಧಿಗಳು, ಹೆಣ್ಣು ಮಕ್ಕಳು ಕೊಟ್ಟ ಕಾಣಿಕೆಯಿಂದ ದೇವಾಲಯ ನಿರ್ಮಾಣವಾಗಿರುತ್ತದೆ. ಕಾಮಗೇತಿ ಪೂಜಾರಿಗೆ ಮಧ್ಯ – ಮಾಂಸ ನಿಷಿದ್ಧ. ಸರ್ವಸಂಗ ಪರಿತ್ಯಾಗ ಮಾಡಿದ ವ್ಯಕ್ತಿಗೆ ಪಟ್ಟಾಭಿಷೇಕ ಆಗುತ್ತಿತ್ತು.

**೪.೬. ಪೂಜಾರಹಳ್ಳಿ ಬಸವಣ್ಣನ ಪೂಜಾರಿಗಳು**

ಆಯಾ ನೆಲೆಗಳಲ್ಲಿ ಶಾಶ್ವತವಾಗಿ ತಳವೂರಿರುವ ಕಾಮಗೇತಿಗಳು ಇಂದು ಸಾಮಾಜಿಕ ಒತ್ತಡಗಳಿಗೆ ಮಣಿದು ಹೋಗಿದ್ದಾರೆ. ಉದಾಹರಣೆಗೆ ಕೂಡ್ಲಿಗಿ ತಾಲೂಕಿನಲ್ಲಿರುವ ಹಟ್ಟಿಗಳಲ್ಲಿ ಕಾಮಗೇತಿಗಳು ಭಿನ್ನಬಗೆಯ ಬದುಕನ್ನು ಸವೆಸುತ್ತಿದ್ದಾರೆ. ಆ ಪೈಕಿ ಪೂಜಾರಹಳ್ಳಿ ಬಸವಣ್ಣನ ಪೂಜಾರಿಗಳು ಕಾಮಗೇತಿಗಳೇ. ಇವರು ಮೂಲತಃ ಚಿತ್ರದುರ್ಗ, ಚಳ್ಳಕೆರೆ ಓರುಗಲ್ಲು ಪಟ್ಟಣ (ಕಾಟಪ್ಪನಹಟ್ಟಿ), ಏಳುಮಂಡಲ ರಾಯಾಪುರದ ಕೆರೆ ಅಂಗಳ, ಗುಡೇಕೋಟೆ ಹತ್ತಿರ ಚಕ್ಕೆಬಂಡೆ (ಸನ್ಯಾಸಪ್ಪನಮಠ) ಗವಿಗಳಲ್ಲಿ ನೆಲಸಿದ ನಂತರ ಗುಡಿಕೋಟೆ, ಮಾಡ್ಲನಾಯಕನಹಳ್ಳಿ ಸಮೀಪ ಪ್ಯಾಟೇಹಳ್ಳಿ – ಗೆದ್ದಲಗಟ್ಟೆಗಳಲ್ಲಿ ನೆಲಸಿ ಅಲ್ಲಿ ಬಸವಣ್ಣನ ಗುಡಿ ನಿರ್ಮಿಸಿದ್ದರು (ಗೆದ್ದಲಗಟ್ಟೆ ಹತ್ತಿರ). ಮಾಡನಾಯಕನಹಳ್ಳಿ ಸಮೀಪದ ಅಡವಿಯಲ್ಲಿ ನೆಲಸಿರುವುದಕ್ಕೆ ಇಂದಿಗೂ ಕುರುಹುಗಳಿವೆ. ಅಲ್ಲಿ ಮನೆಗಳನ್ನು ಕಟ್ಟಿಕೊಂಡು, ಬಸವಣ್ಣ ದೇವಾಲಯ ನಿರ್ಮಿಸಿಕೊಂಡು, ೧೦೧ ಪತ್ರೆಮರ, ತೋಪು ಬೆಳೆದರು. ಕಾಲಕ್ರಮೇಣ ಪ್ಯಾಟೆಬಿಟ್ಟು ದಕ್ಷಿಣಾಭಿಮುಖವಾಗಿ ಕಡೆಕೊಳ ನಂತರ ಕರೆಪೂಜಾರ ಹಳ್ಳಿಗೆ ಬಂದು ನೆಲೆಸುತ್ತಾರೆ. ಈ ಕೆರೆ ಪೂಜಾರಹಳ್ಳಿ ಗ್ರಾಮವನ್ನು ಮ್ಯಾಸನಾಯಕರದೊರೆ ಯರಮಂಚಿನಾಯಕ ಕೋಟೆಕಟ್ಟಿ, ಬುಡ್ಡೆಕಲ್ಲು ಹಾಕಿ ಸ್ಥಾಪಿಸಿದ್ದನು. ಇಂಥ ಊರಲ್ಲಿ ಇಂದಿಗೂ ಕಾಮಗೇತಿಗಳು ನೆಲಸಿದ್ದಾರೆ. ಇವರು ಬರುವಾಗ ಕಾಪು – ಕಂಪಳ ಒಂದು ಕಡೆ ದನ – ಕರು, ಕುರಿ – ಮೇಕೆ – ನಾಯಿ – ಬೆಕ್ಕು ಎಲ್ಲ ಕೂಡಿ ವಾಸಿಸುವ)ದೊಂದಿಗೆ ಪೆಟ್ಟಿಗೆ ದೇವರಾದ ಅಹೋಬಲ

ನರಸಿಂಹನನ್ನು ತಮ್ಮೊಡನೆ ಇಟ್ಟುಕೊಂಡು ಬಂದಿದ್ದರು. ಜೊತೆಗೆ ಬಸವಣ್ಣನ ಲಿಂಗ ವಿಗ್ರಹವು ಇತ್ತು. ಇದು ಈ ಸಂತತಿಯ ಅಕ್ಕರಾಯಮ್ಮನಿಗೆ ನದಿಯಲ್ಲಿ ಸ್ನಾನ ಮಾಡುವಾಗ ಒಡಲಿಗೆ ಬಂದು ಸಿಕ್ಕಿದೆ ಎನ್ನುತ್ತಾರೆ.

ಪೂಜಾರಹಳ್ಳಿ ಬಸವಣ್ಣ ಪ್ರಸಿದ್ಧಿ ಪಡೆದಿರುವುದು ತಮ್ಮ ಧಾರ್ಮಿಕ ಕ್ಷೇತ್ರದಿಂದ ಭಕ್ತರು ಕೇಳಿಸಿಕೊಂಡ ಕೆಲಸ ಅದ ಮೇಲೆ ಪರುವು ಮಾಡುವುದು, ದೇವರಿಗೆ ಕಾಣಿಕೆ ಅರ್ಪಿಸುವುದು ಸಾಮಾನ್ಯ. ಕಾಮಗೇತಿಯವರು ಇಲ್ಲಿ ಬಸವಣ್ಣನನ್ನು ಅಂದರೆ ಗೂಳಿಯನ್ನು ಆರಾಧಿಸುತ್ತಾರೆ. ಗೂಳಿಗೆ ಅಲಂಕರಿಸಿ ಸುತ್ತೆಲ್ಲ ಗ್ರಾಮಗಳಲ್ಲಿ ಭಿಕ್ಷೆ ಬೇಡುತ್ತಾರೆ. ಭಕ್ತರು ತಮ್ಮ ಕಷ್ಟ – ಸುಖಗಳನ್ನು ಈ ಗೂಳಿಯಿಂದ ಕೇಳಿಸಿ ತಿಳಿಯುತ್ತಾರೆ. ಈ ಕಾಮಗೇತಿಯರ ಸಂತತಿ ದೊಡ್ಡದು.

**ಕಾಟಯ್ಯ**
**(ಇಬ್ಬರು ಹೆಂಡತಿಯರು)**
**ಸೂರಯ್ಯ**

**ಪೆನ್ನಯ್ಯ**
**(ಅಣ್ಣ – ತಮ್ಮಂದಿರು)**
**(ಮಕ್ಕಳಿಲ್ಲ)**

**ಬಸಣ್ಣ ಓಬಯ್ಯ ಬಸಣ್ಣ ಕಾಟಯ್ಯ ಜರಿಮಲಿ ತಿಪ್ಪೇಸ್ವಾಮಿ ಇತರರು**

ಇದ್ದಾರೆ. ಈ ನಾಲ್ಕು ಕುಟುಂಬಗಳು ಪೂಜಾರಹಳ್ಳಿಯಲ್ಲಿ ಬಸವಣ್ಣನ ಪೂಜಾರಿಕೆ ವೃತ್ತಿಯಿಂದ ನೆಲೆಸಿವೆ.

ಕಾಮಗೇತಿಗಳಲ್ಲಿ ಇಂದಿಗೂ ಸುರೇಶ, ಸೂರಯ್ಯ, ಸೂರ್ಯನಾರಾಯಣ, ಕಾಟಪ್ಪ, ಸೂರಮ್ಮ ಎಂದೆಲ್ಲ ಹೆಸರು ಇಟ್ಟುಕೊಳ್ಳುತ್ತಾರೆ. ಇವರ ಮನೆ ದೇವರು ಕಾಮಗೇತನಹಳ್ಳಿ ಸೂರಪ್ಪ, ಪೂಜಾರಹಳ್ಳಿ ಬಸವಣ್ಣದೇವರಿಗೆ ಮಾತ್ರ ಇವರ ಪೂಜಾರಿಗಳು. ಮಿಕ್ಕಂತೆ ಎಲ್ಲರಂತೆ ಜೀವನ ನಡೆಸುತ್ತಾರೆ.[2]

**೪.೭ ಸೂರಪ್ಪದೇವರ ಆಚರಣೆ**

ಕಾಮಗೇತನಹಳ್ಳಿ ಸೂರಪ್ಪನಾಯಕನಿಗೆ ಕಾಮಗೇತಿ ವಂಶಜರಷ್ಟೇ ಅಲ್ಲದೆ, ಇತರ ನಾಯಕ ಬುಡಕಟ್ಟಿನ ಜನರು ಮತ್ತು ಬೇರೆ ಬೇರೆ ಜಾತಿ ಸಮುದಾಯದವರು ಪೂಜಿಸುವುದು, ಭಕ್ತರಾಗಿ ನಡೆದುಕೊಂಡಿರುವುದು ವಿಶೇಷ. ಈ ಕಾಮಗೇತನಹಳ್ಳಿ ಕಟ್ಟೆಮನೆಗೆ ಸುಮಾರು ೩೩ ಹಳ್ಳಿಗಳ ಭಕ್ತರು ಶಿವರಾತ್ರಿ ಅಮವಾಸೆ ಆದ ನಂತರ ಸೋಮವಾರ ಕಡಬಿನ ಹಬ್ಬ ದೊಡ್ಡದಾಗಿ ಮಾಡುತ್ತಾರೆ. ಈ ದೇವರು ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ಅಸಂಖ್ಯಾತ ಭಕ್ತರನ್ನು ಹೊಂದಿದೆ. ಈ ದೇವರ ಪೂಜಾರಿ ನಿಜಲಿಂಗಪ್ಪನವರು. ಇವರು ಇಡೀ ಮ್ಯಾಸಮಂಡಳಿ ಸಂಸ್ಕೃತಿಯನ್ನು ವ್ಯಾಪಕವಾಗಿ ವಿಶ್ಲೇಷಿಸುವ ಸಾಮರ್ಥ್ಯ ಹೊಂದಿದ್ದಾರೆ. ನಿಜಲಿಂಗಪ್ಪನವರು ನಾಯಕರ ಸುಮಾರು ಎರಡುವರೆ ಸಾವಿರ ಜನರಿಗೆ ಮದುವೆ ಕಾರ್ಯ ಮಾಡಿದ್ದಾರೆ. ಲಗ್ನ ಕಟ್ಟುವುದು, ವೀಳ್ಯೆತಿದ್ದಿ, ಮುಹೂರ್ತ ಮಾಡುವ ಕಾರ್ಯವನ್ನು ಇವರು ನೆರವೇರಿಸುತ್ತಾರೆ. ಕೂಡ್ಲಿಗಿ ತಾಲೂಕಿನ ಕಾತ್ರಿಕಟ್ಟೆ ಗ್ರಾಮದ ಗೌಡ್ರ ಪಾಲಯ್ಯ ತಂದೆ ಕಾಟಯ್ಯ ಕಾಮಗೇತಿ ಬೆಡಗಿಗೆ ಸೇರಿದ್ದಾರೆ. ಇವರ ಮನೆದೇವರು ಕಾಮಗೇತನಹಳ್ಳಿ ಸೂರಪ್ಪನಾಯಕ. ಕಟ್ಟೆಮನೆ – ಗುಡಿಕಟ್ಟೆ ಎರಡು ಅದೇ ಆಗಿದೆ ಇವರಿಗೆ. ಸೂರಪ್ಪನಲ್ಲದೇ ಇವರು ಚಳ್ಳಕೆರೆಯ ಕಾಟಪ್ಪನಾಯಕ, ರುದ್ರಮ್ಮನಹಳ್ಳಿ ನಲುಜೆರುವಯ್ಯ (ಓಬಳದೇವರು), ಉಡೇಗೋಳಂನ ಚಿತ್ರಲಿಂಗೇಶ್ವರ ದೇವರನ್ನು ಪೂಜಿಸುವುದರಿಂದ ಇವು ಸೂರಪ್ಪನ ಸಮಾನವಾದ ಮತ್ತು ಕಾಮಗೇತಿಗಳಿಗೆ ಸಂಬಂಧಪಟ್ಟ ದೇವರುಗಳಾಗಿವೆ. ಮೂಲದಲ್ಲಿ ಇವರೆಲ್ಲ ಒಂದೇ. ನಂತರದಲ್ಲಿ ಇವರು ಬೇರೆ ಬೇರೆ ಕಡೆ ಆಗಲಿದ್ದು, ವಿವಿಧ ರೀತಿಯ ಜೀವನ ನಡೆಸುತ್ತಿದ್ದಾರೆ.

ಸೂರಪ್ಪ ದೇವರಿಗೆ ವರ್ಷಕ್ಕೆ ಮೂರು ಬಾರಿ ಹಬ್ಬಗಳಾಗುತ್ತವೆ. ಒಂದು ಶಿವರಾತ್ರಿ ಆದನಂತರ ಕಡಬಿನಹಬ್ಬ, ದೀಪಾವಳಿ ಮತ್ತು ಗುಗ್ಗರಿಹಬ್ಬ ಅಥವಾ ಕಾಳವ್ವಹಬ್ಬ, ಕಾಸು, ಮೀಸಲು, ನೋಮು, ಅಗ್ನಿ ಹೋಮ ಮತ್ತು ೧೦೧ ಪಾಡ್ಯ ಇತರ ಅಚರಣೆಗಳನ್ನು

ಮಾಡಿಕೊಂಡು ಬಂದಿದ್ದಾರೆ. ಕಾಮಗೇತನಹಳ್ಳಿ ಧಾರ್ಮಿಕ ನೆಲೆಗೆ ಭಕ್ತರ ಮಹಾಪೂರವೇ ಹರಿದು ಬರುತ್ತದೆ. ದೇವರೆತ್ತುಗಳಿದ್ದು, ಬಸಪ್ಪನಹಟ್ಟಿಯ ಮಚೂರನಾಯಕ ಇವುಗಳ ಕಿಲಾರಿ ಆಗಿರುತ್ತಾನೆ. ಮುದಕದಹಳ್ಳಿ (ಭರಮಸಮುದ್ರ) ಚಲುವಾದಿಗಳು ಉರಿಮೆ ಬಡಿಯುತ್ತಾರೆ.

**೪.೮.ಕಾಮಗೇತಿ, ನಲಗೇತಿ ಇತರ ಬೆಡಗುಗಳು**

ಬುಡಕಟ್ಟು ಜನರಾದ ಬೇಡರು ಯೋಧ ಹಾಗೂ ಸೈನಿಕ ವೃತ್ತಿಯಲ್ಲಿ ಪಳಗಿದವರು. ಮತ್ತ ಆ ಲಕ್ಷಣಗಳು ಜನ್ಮತಃ ಇವರಲ್ಲಿ ಬಳುವಳಿಯಾಗಿ ಬಂದಿವೆ. ಕರ್ನಾಟಕದಲ್ಲಿ ಕಾಮಗೇತಿ ವಂಶಜರು ಕೇವಲ ಬುಡಕಟ್ಟು ಧರ್ಮ, ಧಾರ್ಮಿಕ ಆರಾಧನೆಯಲ್ಲದೆ, ರಾಜ್ಯಾಳ್ವಿಕೆ ಮಾಡಿರುವುದು ಗಮನಾರ್ಹ. ಅನೇಕ ಪಾಳೆಯಗಾರರು, ಕಿರು ಸಂಸ್ಥಾನಿಕರು, ಮಂತ್ರಿ, ಸೇನಾನಿಗಳು, ತಳವಾರರು ಕಾಮಗೇತಿ ಗೋತ್ರದಲ್ಲಿದ್ದರು.

| | | |
|---|---|---|
| **೧. ಸೂರ್ಯವಂಶ (ಸಂತತಿ)** | | **ಚಂದ್ರವಂಶ (ಮಂದಲಾರು)** |
| **ಮಲ್ಲಿನಾಯಕ** | | |
| (ಶೈವಧರ್ಮ) | | (ವೈಷ್ಣವಧರ್ಮ) |
| ಕೋರಿಯರಮಂಚಿನಾಯಕ | | (೧೦೧ ಬೆಡಗು, ೩ ಕಟ್ಟೆಮನೆ, ೭೭ |
| **ಮೀಸಲು ನಾಯಕ** | | ಹಟ್ಟಿಗಳು, ೩೦ ಸಾವಿರ ಕುಲ.) |
| **ಬೋಸೆನಾಯಕ** | **ಚಿಂತಗುಟ್ಲುನಲ್ಲಿ** | ಮಂದಭೂಪಾಲ |
| **ಗಟ್ಟಿಮುತ್ತಿನಾಯಕ** | **ಹುಟ್ಟಿದವರು** | ಅಂಭೋಜರಾಜ |
| ಗಾದರಿಪಾಲ ನಾಯಕ | | ಕಾಂಭೋಜರಾಜ |
| ದಡ್ಡಿ ಸೂರನಾಯಕ | | ತುಂಭೋಜ ರಾಜ |
| ದಡ್ಡಿ ಕಾಮನಾಯಕ | | ದಾನ ಸಾಲಮ್ಮ |
| ಜಗಲೂರು ಪಾಪನಾಯಕ | | ಶುಕ್ಲ ಮಲ್ಲಿನಾಯಕ |
| ಯರಗಾಟನಾಯಕ (ಗಟ್ಟ) | | ಕಂಪಳದೇವರು |
| ಪೆದ್ದಳ್ಳಿ ನಾಯಕ | | ರಾಜಲು ದೇವರು |
| ಓಬನಾಯಕ | | ಓಬಳ ದೇವರು |

೨. ಕಾಮಗೇತಿ ಸೂರ್ಯಲಿಂಗೇಶ್ವರ ಸ್ವಾಮಿಯ ದೇವಾಲಯದಲ್ಲಿ ೧೧ ಅಜ್ಜನವರ ಪಾತ್ರ

ಕಗ್ಗಲ್ಲಾರು

ಮಲ್ಲೂರರು

ಯರಬೊಮ್ಮನವರು

ಬುಡ್ಡಬೋರನವರು

ಮಾಸೇಲು – ಗಾವನಬ್ಬವರು

ಗಜಿಗಿಡ್ಲು – ಬಿದ್ದನವರು

ಮಲ್ಲಮುತ್ತೆ (ಗೌಡ್ರಪಾಲಯ್ಯ ಕಾತ್ರಿಕಟ್ಟೆ)

ಪೆಯಿಲುಮುತ್ತೆ (ಕೆ. ಲಕ್ಷ್ಮಣಸ್ವಾಮಿ ತಿಮ್ಮಲಾಪುರ)

ನಲಟಬ್ಬನೊರು (ಪೂಜಾರಿ ನಿಜಲಿಂಗಪ್ಪ, ಕಾಮಗೇತನಹಳ್ಳಿ, ಸೂರಲಿಂಗಪ್ಪ ಪಟೇಲ್ – ಕಾಮಗೇತನಹಳ್ಳಿ).

**೩. ಕಾಮಗೇತಲಾರು ಬೆಡಗಿನ ಅಣ್ಣ – ತಮ್ಮಂದಿರು ಮತ್ತು ನೆಂಟರು**

ಮಂದಲಾರು ಪಂಗಡದ ಚಂದ್ರವಂಶದ ಎಲ್ಲ ಬೆಡಗಿನವರು ಕಾಮಗೇತಿಗಳಿಗೆ ಅಣ್ಣ – ತಮ್ಮಂದಿರಾಗಬೇಕು. ಇವರಿಗೆ ಮಲ್ಲನಾಯಕ ಗೋತ್ರದವರು (ಸೂರ್ಯವಂಶ) ನೆಂಟರಾಗಬೇಕು. ಇವರಲ್ಲಿ ಹೆಣ್ಣು ಕೊಡುವ ಮತ್ತು ತರುವ ಪ್ರಕ್ರಿಯೆ ನಡೆಯುತ್ತದೆ. ಇಂದಿಗೂ ಈ ಸಾಮಾಜಿಕ ಕುಟುಂಬ ಹಾಗೂ ವೈವಾಹಿಕ ವ್ಯವಸ್ಥೆ ಮುಂದುವರೆದಿದೆ.

**೪.೯. ಮಂದಲಾರು ಇಬ್ಭಾಗ : ತಿರುಗು ಮಂದೆ**

'ಮಂದಲಾರು' ಪಂಗಡದಲ್ಲಿ ಜನಸಂಖ್ಯೆ ಅತೀ ಹೆಚ್ಚಾಯಿತು. ಜನಸಂಖ್ಯೆಗೆ ತಕ್ಕಂತೆ ಬೆಡಗುಗಳು (ಹೆಚ್ಚಾದವು) ಹುಟ್ಟಿಕೊಂಡವು. ಮಂದ ಸಂತತಿ ತೀವ್ರವಾಗಿ ಹೆಚ್ಚಾದಂತೆ ನೆಂಟರ ಸಮಸ್ಯೆ ಉಂಟಾಯಿತು. ಮ್ಯಾಸನಾಯಕರ ಕಟ್ಟು – ಪಾಡುಗಳನ್ನು ಚಾಚುತಪ್ಪದೇ ಪಾಲಿಸಿಕೊಂಡು ಬಂದಿರುವ ಮಂದಲಾರು ತಮಗೆ ನೆಂಟರಾಗಿದ್ದ ಮಲ್ಲಿನಾಯಕರಲ್ಲಿ ಹೆಣ್ಣಿನ ಸಂಖ್ಯೆ ಕಡಿಮೆಯಾಗಿ ಇವರೇ ಪ್ರತ್ಯೇಕ ಮಂದೆಯನ್ನು ಮಾಡಿಕೊಂಡರು ಅದಕ್ಕೆ 'ತಿರುಗು ಮಂದೆ' ಎಂದು ಹೆಸರು. ಅವರಿಗೆ ತಿರುಗುಮಂದೆಯರೆಂದು ಕರೆಯುತ್ತಾರೆ. ಮಳೆಲಾರು, ಪಾಮುಡ್ಲಾರು, ಬುಟ್ಟಗಲು, ಪುವುಲಾರು ಬೆಡಗುಗಳಿಗೆ ಏಳುಮನೆ ಬೀಗರೆಂದು ನೆಂಟಸ್ತನ ಬೆಳೆಯುತ್ತದೆ. ಅಂದಿನಿಂದ ಹೆಣ್ಣನ್ನು ತರುವ ಮತ್ತು ಕೊಡುವ ಸಂಬಂಧ ವೃದ್ಧಿಯಾಯಿತು. ಕಾಮಗೇತಲಾರು ಬೆಡಗಿನಲ್ಲಿ ಮೈನೆರತ ಹೆಣ್ಣು ಮಗಳನ್ನು ೧೨ ದಿನಗಳ ನಂತರ ಮನೆಯ ಒಳಗೆ ಕರೆದುಕೊಳ್ಳುವ ರೂಢಿಯಿದೆ.

**೪.೧೦. ಕಾಮಗೇತಿಯವರ ರಾಜಕೀಯ ಪ್ರವೇಶ**

'ಕಾಮಗೇತಿ' ಎಂದ ಕೂಡಲೇ ತಟ್ಟನೆ ಹೊಳೆಯುವುದು ಚಿತ್ರದುರ್ಗದ ಪಾಳೆಯಗಾರರು ; ಚಿತ್ರದುರ್ಗದ ಕೋಟೆ, ಮದಕರಿನಾಯಕ – ಒನಕೆ ಓಬವ್ವ ಇತ್ಯಾದಿ. ಚಿತ್ರದುರ್ಗ ಪಾಳೆಯಪಟ್ಟನ್ನು ಕಾಮಗೇತಿ ಅರಸರ (ಮೂಲ) ಓಬಳ್ಳನಾಯಕರಿಂದ ರಾಜಾವೀರ ಚಿಕ್ಕಮದಕರಿನಾಯಕರವರೆಗೆ ಸುಮಾರು ೧೫ಜನ ಅರಸರು, ೨೮೫ ವರ್ಷಗಳ ಕಾಲ ರಾಜ್ಯಾಭಾರ ಮಾಡಿರುವುದು ಹೆಮ್ಮೆಯ ಸಂಗತಿ. ಚಿತ್ರದುರ್ಗ ನಾಯಕ ಅರಸರು ಕಾಮಗೇತಿ ಗೋತ್ರದವರು. 'ಶ್ರೀಮನ್ಮಹಾನಾಯಕಾಚಾರ್ಯ, ನಾಯಕಶಿರೋಮಣಿ, ಕಸ್ತೂರಿ ಕುಲತಿಲಕ, ಕಾಮಗೇತಿ, ಹಗಲು ಕಗ್ಗೋಲಿಯಮಾನ್ಯ, ಗಾಧರಿಮಲೆಯ ಹೆಬ್ಬುಲಿ, ಹಿಡಿಯುವ ಮಾನ್ಯರಗಂಡ, ಆಡಿತಪ್ಪುಲೋಭಿನಾಯಕರ ಮಿಂಡ, ಚಂದ್ರಗಾವಿಯ ಛಲದಂಕ, ಧೂಳ್‌ಕೋಟೆವಜೀರ, ಗಂಡುಗೊಡಲಿಯ ಸರ್ಜರಾದ, ರಾಜಾಧಿರಾಜ ರಾಜಾವೀರ ಚಿಕ್ಕಮದಕರಿ ನಾಯಕರು ಎಂಬ ಬಿರುದಾವಳಿಗಳಿಂದ ಇವರನ್ನು ಗೌರವಿಸಲ್ಪಟ್ಟಿರುವುದು ಹೆಮ್ಮೆಯ ವಿಷಯ.[3]

ನಾಯಕ ಬುಡಕಟ್ಟಿನಲ್ಲಿ ಪರಾಕ್ರಮ ಶಾಲಿಗಳಾದ ಕಾಮಗೇತಿಯರು ರಾಜ್ಯವಾಳಿದ್ದು ತಿಳಿದ ವಿಷಯವೇ ಸರಿ. ಇವರು ಆಂಧ್ರ ಮತ್ತು ಕರ್ನಾಟಕದಲ್ಲಿ ಇಂದಿಗೂ ತಮ್ಮ ರಾಜಕೀಯ, ಸಾಂಸ್ಕೃತಿಕ ನೆಲೆಗಳನ್ನು ಹೊಂದಿರುತ್ತಾರೆ. ಕಾಮಗೇತಿ ಅರಸರಲ್ಲಿ 'ಮದಕರಿ' ಹೆಸರು

ಬರುತ್ತದೆ. ಇದು ವ್ಯಕ್ತಿ, ಸ್ಥಳ, ಬಿರುದು ಎಂಬುದರ ಬಗ್ಗೆ ಖಚಿತತೆ ಇಲ್ಲ. ಶಾಸನಗಳಲ್ಲಿ ಮೆಧೆಕೇರಿ (ದಾವಣಗೇರಿ ಜಿಲ್ಲೆ) ಎಂದು ಇದೆ. ಅನಂತಪುರ ಜಿಲ್ಲೆಯ ಕಲೆಕ್ಟರ್ ಆಗಿದ್ದ ರಾಬರ್ಟ್ ಸಿವೆಲ್‌ರವರ ವಾರ್ಸ್ ಆಫ್ ರಾಜಾಸ್ ಎಂಬ ಕೃತಿಯಲ್ಲಿ ಕರ್ನೂಲು ಜಿಲ್ಲೆ, ಪತ್ತಿಕೊಂಡ ತಾಲ್ಲೂಕು 'ಮದ್ದಿಕೆರ' ಊರು ನೆಲಸಿದುದರ ಬಗ್ಗೆ ಉಲ್ಲೇಖವಿದೆ, ಪತ್ತಿಕೊಂಡ ತಾಲೂಕನ್ನು ಹಿಂದೆ ಪಂಚಪಾಳೆಮು ಆಡಳಿತಕ್ಕೆ ಒಳಪಟ್ಟಿದ್ದಿತು; ಚನ್ನಪಲ್ಲೆ, ವ್ಯಾಪಲಿ, ಕಪ್ಪತ್ರಳ್ಳ (ಕಪಟ್ರಾಳ), ಮದ್ದಿಕಿ(ಕೆ)ರ ಮತ್ತು ದೇವಕೋಂಡ ಇವುಗಳು ಕ್ರಮವಾಗಿ ಈ ಪಾಳೆಯ ಪಟ್ಟುಗಳ ರಾಜಧಾನಿಗಳಾಗಿದ್ದವು.[4] ಹಾಗಾಗಿ ಮಡ್ಡಿಕೆರ ಒಂದು ಸ್ಥಳವಾಗಿತ್ತಲ್ಲದೆ, ಕಾಮಗೇತಿಗಳ ಮೂಲ ನೆಲೆಯಾಗಿತ್ತು.

[1] ಅದೇ ಪು.೧೯

[2] ಚನ್ನೇಶಪ್ಪನ ಗವಿಗಳ ಹತ್ತಿರ ಕ್ಷೇತ್ರಕಾರ್ಯಮಾಡಲು ಹೋದಾಗ ಸಹಕರಿಸಿದವರು.

*ಕೆಂಗಪಾಪಯ್ಯ, ೩೪, ಎನುಮುಲಾರು, ಹೊಸಹಟ್ಟಿ, ಮೊಳಕಾಲ್ಮೂರು ತಾ.

*ಮ್ಯಾಕಲು ಪಾಪಯ್ಯ, ४೦ ಹೊಸಹಟ್ಟಿ, ಮೊಳಕಾಲ್ಮೂರು ತಾ.

*ಮೇಗಳಮನೆ ಬಸಣ್ಣ, ४೦, ಕಾಮಗೇತಲಾರು, ಕೆ.ಬಿ.ಹಟ್ಟಿ, ಪೂಜಾರಹಳ್ಳಿ, ಕೂಡ್ಲಿಗಿ-ತಾ||

*ಪೂಜಾರಿ (ಗಿಡ್ಡ) ಬಸಣ್ಣ, ४೫ ಕಾಮಗೇತಲಾರು, ಕೆ.ಬಿ.ಹಟ್ಟಿ, ಪೂಜಾರಹಳ್ಳಿ, ಕೂಡ್ಲಿಗಿ-ತಾ||

[3] ಬಿ.ಎಸ್.ಶ್ರೀನಿವಾಸನಾಯಕ, ಕಾಮಗೇತಿ ಅರಸರು ಪು.೧೧

[4] ಲಕ್ಷ್ಮಣ್ ತೆಲಗಾವಿ, ಕಾಮಗೇತಿ ಅರಸರು ಕೆಲವು ವಿಚಾರಗಳು, ಪು.೧೧, ಚಿತ್ರದುರ್ಗ

## ೫. ಕಾಮಗೇತಿ ವಂಶಜರ ರಾಜಕೀಯ ಚರಿತ್ರೆ

'ಕಾಮಗೇತಿ' ಬೆಡಗಿನ ಕೆಲವು ಜನರು ರಾಜಕೀಯ ರಂಗದಲ್ಲಿ ಸಾಧನೆ ಮಾಡಿರುವುದು ಗಮನಾರ್ಹ. ಒಬ್ಬ ವ್ಯಕ್ತಿ ತನ್ನ ಶಕ್ತ್ಯಾನುಸಾರ ವಿವಿಧ ಬಗೆಯಲ್ಲಿ ಇನ್ನೊಬ್ಬರನ್ನು ಅಡಿಯಾಳು ಮಾಡಿಕೊಂಡು, ಗುಲಾಮನನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುವುದು ಮತ್ತು ಸೈನ್ಯ ಕಟ್ಟಿಕೊಂಡು ಭೂಮಿ, ಸಂಪತ್ತು, ದನ, ಇತರ ಕಾರಣಗಳಿಗಾಗಿ ಯುದ್ಧ, ಹೋರಾಟ ಮಾಡುವುದು. ಕೊನೆಗೆ ಒಪ್ಪಂದ ಮಾಡಿಕೊಳ್ಳುವುದು ಸಾಮಾನ್ಯ. ರಾಜ, ಮಂತ್ರಿ, ದಂಡನಾಯಕ, ಸೈನಿಕ, ತಳವಾರ ಇತರ ಹುದ್ದೆಗಳಲ್ಲಿದ್ದ ಕಾಮಗೇತಿಗಳ ಚರಿತ್ರೆ ಅತೀ ಮಹತ್ವದ್ದಾಗಿದೆ.

ಕರ್ನಾಟಕದಲ್ಲಿ ಕಾಮಗೇತಿ ನಾಯಕರ ರಾಜಕೀಯ ಜೀವನ ಆರಂಭವಾಗುವುದೇ ಹತ್ತನೇ ಶತಮಾನದ ನಂತರ. ಕುಮ್ಮಟದುರ್ಗದ ಮುಮ್ಮಡಿ ಸಿಂಗೆನಾಯಕ, ಕಂಪಿಲರಾಯ ಮತ್ತು ಕುಮಾರರಾಮನ ಆಳ್ವಿಕೆಯ ಸಂದರ್ಭದಲ್ಲಿ ಕಾಮಗೇತಿಗಳ ಜವಾಬ್ದಾರಿಗಳು ಪ್ರಾರಂಭಗೊಳ್ಳುತ್ತವೆ. ಹೀಗೆ ವಿಜಯನಗರ ಪೂರ್ವದಲ್ಲಿದ್ದ ಇಂಥ ಸಣ್ಣ – ಪುಟ್ಟ ನಾಯಕ ಮನೆತನಗಳ ಚರಿತ್ರೆ ಸಾಧನೆ ಪರಿಗಣನಾರ್ಹ. ಚದುರಿಹೋದ ನಾಯಕ ಪಾಳೆಯಪಟ್ಟುಗಳಿಗೆ ವೇದಿಕೆ ಸಿದ್ಧಪಡಿಸುವ ಕಾರ್ಯನಡೆಯಿತು. ವಾರಂಗಲ್ಲಿನ ಕಾಕತೀಯ ಗಣಪತಿದೇವ ನಾಯುಕರ ಒಕ್ಕೂಟವನ್ನು ಮಾರ್ಪಡಿಸಿದನು. ಪದ್ಮನಾಯಕ ಸೇರಿದಂತೆ ೭೧ ಗೋತ್ರ, ೧೧ ಮನೆಗಳಿಗೆ ಪ್ರೋತ್ಸಾಹಕೊಟ್ಟನು. ಅದೇ ರೀತಿ ಪ್ರತಾಪರುದ್ರ ೭೭ ನಾಯಕರನ್ನು ಕರೆಯಿಸಿ ತನ್ನ ಸಾಮ್ರಾಜ್ಯವನ್ನು ಅವರಿಗೆ ವಿಭಾಗಿಸಿಕೊಟ್ಟು ಆಡಳಿತ ಸುಧಾರಣೆಗೆ ಶ್ರಮಿಸಿದನು.

[1] ಪ್ರತಾಪರುದ್ರ ಆಳ್ವಿಕೆ ನಡೆಸಿದ್ದು ಈ ೭೭ ಜನನಾಯಕರ ಹೆಸರಿನ ಮೂಲಕ. ಕಾಕತೀಯ ಅರಸರು ಸ್ಥಾಪಿಸಿದ ಈ ನಾಯಂಕಾರ ವ್ಯವಸ್ಥೆಯನ್ನು ವಿಜಯನಗರದವರು ಅಳವಡಿಸಿಕೊಂಡಿದ್ದರು.[2]
ಸಮಗ್ರ ಕರ್ನಾಟಕ ಚರಿತ್ರೆ ಸಂಪುಟದಲ್ಲಿ ಚಿತ್ರದುರ್ಗದ ಪಾಳೆಯಗಾರರ ಬಗ್ಗೆ ಹೀಗೆ ತಿಳಿಸಿರುತ್ತಾರೆ: ಚಿತ್ರದುರ್ಗದ ನಾಯಕರು ವಿಜಯನಗರದ ಸಾಮಂತ ಒಕ್ಕೂಟ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಒಂದು ಭಾಗವಾಗಿದ್ದರು. ಇವರು ಸ್ವತಂತ್ರವಾದ ವಿದೇಶಾಂಗ ನೀತಿಯಾಗಲಿ, ತಮ್ಮ ಹೆಸರಿನಲ್ಲಿ ನಾಣ್ಯಗಳನ್ನು ಚಲಾವಣೆಗೆ ತರಲಿಲ್ಲ. ತಿಮ್ಮಣ್ಣನಾಯಕ, ಓಬಣ್ಣನಾಯಕ ಮತ್ತು ಕಸ್ತೂರಿ ರಂಗಪ್ಪನಾಯಕ ಈ ಮೂರು ಜನ ನಾಯಕರು ೧೫೬೫ಕ್ಕೆ ಮೊದಲು ವಿಜಯನಗರದ ಸಾಮಂತರಾಗಿದ್ದರು. ಅಮರನಾಯಕನಾದ (ಮತ್ತಿ) ತಿಮ್ಮಣ್ಣ ನಾಯಕ ಚಿತ್ರದುರ್ಗ ನಾಯಕ ಪ್ರಭುತ್ವಕ್ಕೆ ಭದ್ರ ಬುನಾದಿ ಹಾಕಿದನು. ಕೃಷ್ಣದೇವರಾಯನಿಂದ ಹೊಳಲ್ಕೆರೆಯನ್ನು ಉಂಬಳಿಯಾಗಿ ಪಡೆದ ನಂತರ ಹಿರಿಯೂರು ಮತ್ತು ಚಿತ್ರದುರ್ಗ ಪ್ರದೇಶಗಳನ್ನು ಅರಸರ ಆದೇಶದಂತೆ ತನ್ನ ವ್ಯಾಪ್ತಿಗೆ ಸೇರಿಸಿಕೊಂಡನು. ಚಿತ್ರದುರ್ಗದಲ್ಲಿ ಕೋಟೆಯನ್ನು ಇವನು ನಿರ್ಮಿಸಿದನು. ವಿಜಯನಗರದವರೊಂದಿಗೆ ಇವರು ಉತ್ತಮ ಬಾಂಧವ್ಯ ಹೊಂದಿದ್ದರು. ಹೀಗೆ ಕ್ರಮೇಣ ತಿಮ್ಮಣ್ಣನಾಯಕ ವಿಜಯನಗರದ ಅರಸರಿಗೆ ಅವಿಧೇಯನಾಗಿ ನಡೆದುಕೊಂಡ ಕಾರಣ ಚಕ್ರವರ್ತಿ ಬಂಧಿಸಿದನು. ಬಹುಶಃ ರಾಜ್ಯವಿಸ್ತಾರ ಯೋಜನೆಯಿಂದ ಈ ಸ್ಥಿತಿ ಬಂದಿರಬೇಕು.

ಆನೆಗೊಂದಿ ಚಿನ್ಮೋಲಾಲಪರ್ವತದ ನಂತರ ಹೊಳಲ್ಕೆರೆ ನಾಯಕತನ ಕೊಟ್ಟಿದ್ದರು. ೧೧೫೬೮ರಲ್ಲಿ ಮತ್ತಿತಿಮ್ಮಣ್ಣ ನಾಯಕ ವಿಜಯನಗರದ ಪರ ಆಳ್ವಿಕೆ ನಡೆಸುತ್ತಿದ್ದನು. ಚಿತ್ರದುರ್ಗದ ನಾಯಕರು ಆರಂಭದಲ್ಲಿ ಚಿಕ್ಕಪುಟ್ಟ ರಾಜಕೀಯ ಸ್ಥಾನಮಾನಗಳನ್ನು ಹೊಂದಿದ್ದರು. ಈ ಬಗ್ಗೆ ಚಳ್ಳಕೆರೆ, ಮೊಳಕಾಲ್ಮೂರು, ಜಗಳೂರು, ಹಿರಿಯೂರು, ದಾವಣಗೆರೆ, ಚಿತ್ರದುರ್ಗ, ಹೊಳಲ್ಕೆರೆ ಶಾಸನಗಳು ಬೆಳಕು ಚೆಲ್ಲುತ್ತವೆ.

**೫.೧. ಚಿತ್ರದುರ್ಗದ ಕಾಮಗೇತಿ ಅರಸರ ವಿಚಾರಗಳು**

ಈವರೆಗೆ ಚಿತ್ರದುರ್ಗದ ಅರಸರ ಮೂಲಪುರುಷ ಚಿತ್ರನಾಯಕ ಎಂದು ತಿಳಿಯಲಾಗಿತ್ತು. ಇವರ ಮನೆ ದೇವರು ಚಿತ್ರದೇವರೆಂದು, ಆದುದರಿಂದ ಈಗಿರಿ ದುರ್ಗಕ್ಕೆ ಚಿತ್ರಕಲ್ಲುದುರ್ಗ (ಚಿತ್ರದುರ್ಗ) ಎಂಬ ಹೆಸರು ಬಂದಿತೆಂತಲೂ ಹೇಳುವುದು ಕೇವಲ ಕಾಲ್ಪನಿಕವಾದ ಕಟ್ಟುಕಥೆ ಎಂದು ಲಕ್ಷ್ಮಣ್ ತೆಲಗಾವಿ ಅವರು ಅಭಿಪ್ರಾಯಸಿದ್ದಾರೆ.

ಚಿತ್ರದುರ್ಗದ ಪಾಳೆಯಗಾರರಲ್ಲಿ ಕಾಮಗೇತಿ ತಿಮ್ಮಣ್ಣನಾಯಕನೇ ಮೊದಲ ಅರಸ. ಹನುಮನಾಯಕ ಮತ್ತು ವೋಬಣ್ಣನಾಯಕ ಅಣ್ಣ – ತಮ್ಮಂದಿರು ಮೂಲ ಪುರುಷರು. ತಿಮ್ಮಣ್ಣನಾಯಕ ಸತ್ತಮೇಲೆ ಮದಕರಿನಾಯಕ ಆಳುತ್ತಾನೆ. 'ಮದಕೆರಿ' ಆತನ ಹುಟ್ಟೂರಿನ ಹೆಸರು. ಈಗಿನ ಚಳ್ಳಕೆರೆ ತಾಲೂಕಿನ ಗೋಸಿಕೆರೆಯ ಆಸುಪಾಸಿನಲ್ಲಿ ಈ ಗ್ರಾಮ ಹಿಂದೆ ಇದ್ದಿರಬೇಕೆಂಬ ಶಂಕೆಯನ್ನು ಮೇಲಿನ ಲೇಖಕರು ವ್ಯಕ್ತಪಡಿಸಿದ್ದಾರೆ. ಶಾಸನಗಳಲ್ಲಿ ಮದಕರಿನಾಯಕ ಎಂದಿದೆ. ಮದಕರಿ ಎಂದು ಹೆಸರಿಟ್ಟುಕೊಳ್ಳುವ ರೂಢಿ ಇಂದಿಗೂ ಇದೆ. ಆಂಧ್ರಪ್ರದೇಶದ ಕರ್ನೂಲು ಜಿಲ್ಲೆ ಪತ್ತಿಕೊಂಡ ತಾಲೂಕಿನ ದಕ್ಷಿಣದಲ್ಲಿ 'ಮದ್ದಿಕೆರ' ಎಂಬ ಗ್ರಾಮವಿದೆ. ಗುಂತಕಲ್ಲಿನಿಂದ ವಿಜಯವಾಡಕ್ಕೆ ಹೋಗುವ ರೈಲುಮಾರ್ಗದ ನಿಲ್ದಾಣವಿದೆ. ಗುಂತಕಲ್ಲಿನಿಂದ ೮ ಕಿ.ಮೀ. ದೂರದಲ್ಲಿದೆ.

ಕಾಮಗೇತಿಗಳ ಲಾಂಛನವಾದ ಹನುಮದ್ಗರುಡದ ಮುದ್ರೆಗಳನ್ನು ಹಾಕುತ್ತಿದ್ದರು. ಚಿತ್ರದುರ್ಗ ಪರಿಸರಕ್ಕೆ ಚಿಂಚನಕಲ್ಲು, ಬೆಮ್ಮತ್ತಕಲ್ಲು ಎಂಬ ಹೆಸರುಗಳಿದ್ದವು. ಈ ವಂಶದ ಅರಸರು ಕೆರೆ – ಕಟ್ಟೆ, ದೇವಾಲಯ, ಕೋಟೆ ಕೊತ್ತಲುಗಳನ್ನು ನಿರ್ಮಿಸಿದ್ದು ಗಮನಾರ್ಹ. ಕಾಮಗೇತಿ ಅರಸರಿಗೆ ಕಾಮಗೇತಲ, ಕಾಮಗೇತಿ ಶ್ರೀ ಮನ್ಮಹಾನಾಯಕಚಾರ್ಯ, ಕಾಮಗೇತಿ ಕಸ್ತೂರಿ ಎಂದು (ಮದಕರಿ ಅರಸರ) ಕರೆಯಲಾಗಿದೆ.

ಯರಗುಂಟೆ ಎಂಬ ಪಾಳೆಯಪಟ್ಟು ಅನಂತಪುರ ಜಿಲ್ಲೆ, ಕಣೇಕಲ್ ತಾಲೂಕಿನಲ್ಲಿದೆ. ಇಂದು ಈ ವಂಶದಲ್ಲಿ ಕೆಲವರು ಮಾತ್ರ ಸಿಗುತ್ತಾರೆ. ಈ ವಂಶದ ವೈ.ಎಸ್. ತಿಮ್ಮರಾಜು ತಂದೆ ನಾರಾಯಣಸ್ವಾಮಿ ಎಂಬುವರು ವಲಸೆ ಬಂದು ನಾಯಕನಹಟ್ಟಿಯಲ್ಲಿ ನೆಲೆಸಿದ್ದಾರೆ. ಸಿಟಿಜನ್ ಹೆಸರಿನ ಟೈಲರ್ ವೃತ್ತಿಯಿಂದ ಜೀವನ ನಡೆಸುತ್ತಾರೆ.[3] ೪೨ ವರ್ಷ ವಯಸ್ಸಿನ ಇವರು ಪಾಳೆಯಗಾರ ವಂಶಸ್ಥರಾದರೂ ಗಿರಿಜನರಾದ ಮ್ಯಾಸಬೇಡರಲ್ಲಿ ಮದುವೆಯಾಗಿ ಅಗಲಿ ಹೋದ ಹಳೆ ಕಾಲದ ಸಂಬಂಧವನ್ನು ಪುನರ್‌ಸಂಬಂಧ ವೃದ್ಧಿಗೊಳಿಸಿಕೊಂಡಿರುವುದು ವಿಶೇಷ. ಯರಗುಂಟೆ ಪಾಳೆಯಗಾರರು ಕಾಮಗೇತಿ ವಂಶದವರು. ಇವರದು ಜಮ್ಮಿಗೋತ್ರ. ಇವರ ವಂಶಪರಂಪರೆ ರಕ್ತ ಸಂಬಂಧದಲ್ಲಿ ಅಧಿಕಾರ ಹಂಚಿಕೆಯಾಗಿತ್ತು. ವೈ. ತಿಮ್ಮರಾಜರಾಣಿ ಜಾನಕಮ್ಮನವರಿಗೆ ೪ ಜನ ಮಕ್ಕಳು. ಕೋಮಸ್ವಾಮಿನಾಯಕ, ಪೆದ್ದಪ್ಪನಾಯಕ, ರಾಮಸ್ವಾಮಿ ನಾಯಕ ಮತ್ತು ತಿಮ್ಮರಾಜ ನಾಯಕ. ಇವರಲ್ಲಿ ಮೊದಲ ೩ ಜನರು ದಿವಂಗತರಾಗಿದ್ದಾರೆ. ತಿಮ್ಮರಾಜನ ಹೆಂಡತಿ ಪಿ. ಚಾಮುಂಡೇಶ್ವರಿ ಮ್ಯಾಸಬೇಡರ ಹೆಣ್ಣುಮಗಳು. ಈ ಪಾಳೆಯಗಾರರು ನ್ಯೂತಿಮಂಡಲ, ನಂದ್ಯಾಲ ಮೊದಲಾದ ಕಡೆ ಸಂಬಂಧ ಬೆಳೆಸಿದ್ದು ಮತ್ತು ಪಾಳೆಯಗಾರರಲ್ಲಿ ಮಾತ್ರ ಮದುವೇ ಆಗುತ್ತಿದ್ದರು. ಇವರ ಮನೆ ದೇವರು ಪೆದ್ದಮ್ಮ ಆಗಿದ್ದು, ನಾಯಕನಹಟ್ಟಿ ದೊರೆಗಳ ಹಟ್ಟಿಯಲ್ಲಿ ನೆಲಸಿದ್ದಾರೆ. ಮ್ಯಾಸಬೇಡರ ಕಾಮಗೇತಿಗಳಂತೆ ಇವರು ಕಾಮಗೇತನಹಳ್ಳಿ ಸೂರಪ್ಪದೇವರಿಗೆ ಅಥವಾ ಇನ್ನಾವ ದೇವರಿಗೂ ನಡೆದುಕೊಳ್ಳುವುದಿಲ್ಲ. ಈ ಪಾಳೆಯಗಾರರೇ ಹೇಳುವಂತೆ ಊರುನಾಯಕರೇ ಬೇರೆ, ಮ್ಯಾಸನಾಯಕರೇ ಬೇರೆ ಮತ್ತು ಪಾಳೆಯಗಾರರೇ ಬೇರೆ. ಈತನ ಪ್ರಕಾರ ನಾಯಕನಹಟ್ಟಿ, ಕಟ್ಟೆಮನೆಗೆ ೫ ಪೆಟ್ಟಿಗೆ ದೇವರುಗಳಿದ್ದು, ಗೊನೂರು, ನಾಯಕನಹಟ್ಟಿ, ಹಿರೇಹಳ್ಳಿ, ಕುಂದಿರ್ಪಿ, ನನ್ನಿವಾಳ ಎಂದು ತಿಳಿಸುತ್ತಾರೆ. ಇವರು ಚಿತ್ರದುರ್ಗದ ಮುರುಘಾ ಸ್ವಾಮಿಗೆ ಮಾತ್ರ ಕಾಲಿಗೆ ಬಿದ್ದು ನಮಸ್ಕರಿಸುತ್ತಾರೆ. ತಮ್ಮ ಕುಲದೇವರೇ ಆದ ವಾಲ್ಮೀಕಿ ಗುರುಪೀಠದ ಪುಣ್ಯಾನಂದಪುರಿ ಸ್ವಾಮಿಗಳು ಬಂದರೂ ಕಾಲಿಗೆ ನಮಸ್ಕರಿಸುವುದಿಲ್ಲ. ಏಕೆಂದರೆ ಇವರು ಪಾಳೆಯಗಾರರಾದ್ದರಿಂದ ಜನಸಾಮಾನ್ಯರಂತೆ ಬೆರೆಯುವುದಿಲ. ಇವರಿಗೆ ರಾಜಗುರುಗಳು ಬಿಟ್ಟರೆ (ಮುರುಘಸ್ವಾಮಿ) ಇನ್ನೊಬ್ಬರನ್ನು ಒಪ್ಪಿಕೊಳ್ಳುವುದು ದುಸ್ಸಾಧ್ಯ.

ಕಾಮಗೇತಿಗಳ ರಾಜಕೀಯ ಹಿನ್ನೆಲೆ ಪ್ರಾಚೀನವಾದುದು. ಇತಿಹಾಸಕಾರ ವೀರನಾಯಕರು ಅಭಿಪ್ರಾಯಪಡುವಂತೆ 'ನಾಯಕ, ಕಿರಾತ, ಬೇಡ, ವಾಲ್ಮೀಕಿವಂಶದ ಹಿನ್ನೆಲೆ – ವಾಲ್ಮೀಕಿಯು ಕಿರಾತರ ಯಜಮಾನನಾಗಿದ್ದನು. ಇವನು ಹಾನಿ ವೃದ್ಧಿಗಳಿಗೆಲ್ಲ ಕಾರಣವಾಗಿ, ಕಾಮಕೇತು, ಲಕ್ಷ, ಮೀನಮಲ್ಲರೇ ಮೊದಲಾದ ಏಳುಜನ ಮಕ್ಕಳ ನಾಯಕತ್ವದಲ್ಲಿ ಏಳು ಪಡೆಗಳನ್ನು ರಚಿಸಿ ದರೋಡೆ ನಡೆಸುತ್ತಿದ್ದನು.[4] ಇಲ್ಲಿ ಕಾಮಕೇತು ವಾಲ್ಮೀಕಿಯ ಮಕ್ಕಳಲ್ಲಿ ಒಬ್ಬನೆಂದು ತಿಳಿಯುವುದು. 'ಕಾಮಕೇತು' ಕ್ರಮೇಣ ಕಾಮಗೇತಿ ಆಗಿದೆ.

ಚಿತ್ರದುರ್ಗದ ಕಾಮಗೇತಿ ದೊರೆಗಳ ಚರಿತ್ರೆಯನ್ನು ಜನಪದೀಯವಾಗಿ ವಿಶ್ಲೇಷಿಸಲಾಗಿದೆ. ಪಂಡಿತ ರೇವಣ್ಣಶಾಸ್ತ್ರಿಗಳು ತಮ್ಮ 'ವಾಲ್ಮೀಕರ ಪುರಾಣ'ವು ಕೃತಿಯಲ್ಲಿ ಈ ಬಗ್ಗೆ ಚರ್ಚಿಸಿದ್ದಾರೆ. ಹಾಗೆಯೆ ಎಂ.ಎಸ್. ಪುಟ್ಟಣ್ಣನವರು ಚಿತ್ರದುರ್ಗದ ಪಾಳೆಯಗಾರರು ಕೃತಿಯಲ್ಲಿ ಈ ಪ್ರಸ್ತಾಪವಿದೆ. ಇವರು ಕಾಮಗೇತಿಗಳ ಹಿನ್ನೆಲೆ ಕುರಿತು ದಿಲ್ಲಿಯಿಂದ ನಾಡತಳವಾರರು ಬಂದದ್ದು (ಶಕ ೧೪೭೮ ನಳಸಂ) ಎಂದು ತಿಳಿಸಿದ್ದಾರೆ. ಉತ್ತರ ದೇಶದಲ್ಲಿ ಜಡಕಲ್ಲು ದುರ್ಗದಿಂದ ದಿಳ್ಳೀನಾಡ ತಳವಾರರಾದ ವಾಲ್ಮೀಕಿ ಗೋತ್ರದವರೆಂದು ಹೇಳಲ್ಪಡುವ ಕಾಮಗೇತಿ ವಂಶದ ಸಬ್ಬಗಡಿ ಓಬನಾಯಕ, ಜಡವಿನಾಯಕ, ಬುಳ್ಳನಾಯಕ ಈ ಮೂರು ಜನ ಅಣ್ಣತಮ್ಮಂದಿರು ಉತ್ತರ ದೇಶದ ಅವಾಂತರದಿಂದ ತಮ್ಮ ಮನೆದೇವರು ಅಹೋಬಲನರಸಿಂಹಮೂರ್ತಿಯ ಪೆಟ್ಟಿಗೆ ತುರು, ಕುರಿ, ಕೊಲ್ಲಾರಿ, ಮುಂತಾದ ಕಂಪಳವನ್ನು ತೆಗೆದುಕೊಂಡು ದಕ್ಷಿಣ ದೇಶಕ್ಕೆ ಬಂದರು. ದಾರಿಯಲ್ಲಿ ವಿಜಯನಗರದಲ್ಲಿ, ಇಳಿದು ಹಂಪೆ ವಿರೂಪಾಕ್ಷೇಶ್ವರನ ದರ್ಶನ ಮಾಡಿಕೊಂಡು ಬರುವಾಗ, ಆನೆಗೊಂದಿ ಸ್ಥಳದವರಾದ ವಿರೂಪಾಕ್ಷೇಶ್ವರನ ಗುಡಿಯಲ್ಲಿ ಮಂತ್ರಪುಷ್ಪದ ಕೆಲಸವನ್ನು ಮಾಡುತ್ತಿದ್ದ ಕರಿಜೋಯಿಸ, ವಿರೂಪಾಕ್ಷ ಜೋಯಿಸ ಇಬ್ಬರು ಹುಡುಗರು ಈ ನಾಡತಳವಾರರ ಬೆನ್ನುಹತ್ತಿ ಬಂದರು. ಮೇಲೆ ಕಂಡ ಮೂರು ಜನ ನಾಯಕರೂ ಬಿಳಿಚೋಡು ಸ್ಥಳದ ಪಂಚಾಂಗದ ಜೋಯಿಸರು ನಷ್ಟಸಂತಾನರಾಗಿದ್ದರಿಂದ ಗ್ರಾಮದಲ್ಲಿದ್ದ ಗೌಡ, ಸೇನಭೋಗ, ನಾಯಕವಾಡಿ ಮುಂತಾದವರಿಗೆ ಹೇಳಿ ಈ ಕರಿಜೋಯಿಸಿ ವಿರೂಪಾಕ್ಷ ಜೋಯಿಸರಿಗೆ ಭೋಗಪಟ್ಟೆ ಬರಸಿಕೊಟ್ಟು ಅವರನ್ನು ಸ್ಥಳಕ್ಕೆ ಜೋಯಿಸರನ್ನಾಗಿ ನೇಮಿಸಿದರು. ತರುವಾಯ ಮೇಲೆ ಕಂಡ ನಾಯಕರು 'ನೀರುತಡಿ' ಎಂಬ ಗ್ರಾಮದ ಬಳಿಯಲ್ಲಿ ರೊಪ್ಪಹಾಕಿಕೊಂಡಿದ್ದರು. ಇವರ ಮನೆದೇವರು ಸ್ವಪ್ನದಲ್ಲಿ ಉಪಚಾರಿಸಿ – ನನ್ನ

ಹೊತ್ತುಕೊಂಡು ಕಂಡ ಕಂಡೆಗೆ ಹೋಗಬೇಡ, ನಾನು ಈ ಗ್ರಾಮದಲ್ಲಿ ನೆಲೆಸುತ್ತೇನೆ. ಎಂದು ಅಪ್ಪಣೆ ಕೊಡಿಸಿತಂತೆ. ಆಗ ಈ ಗ್ರಾಮದಲ್ಲಿ ಗುಡಿಕಟ್ಟಿಸಿ ದೇವರನ್ನಿಟ್ಟು ತಾವು ಎಡಬಲದ ಗ್ರಾಮಗಳಲ್ಲಿ ಕಾದುಕೊಂಡಿದ್ದರು. ಜಡಕಲ್ಲು ನಾಯಕನ ಮಗ ಹಿರೀ ಹನುಮನಾಯಕನು ಸಾಗಲೆ ಗ್ರಾಮದಲ್ಲಿ ನಿಂತನು. ಸಬ್ಬಗಡಿ ಓಬನಾಯಕನ ಮಗ ತಿಮ್ಮನಾಯಕನು ಮತ್ತಿಗ್ರಾಮದಲ್ಲಿ ನಿಂತನು. ಬುಳ್ಳನಾಯಕನ ಮಕ್ಕಳು ಚಿಕ್ಕ ಹನುಮಪ್ಪನಾಯಕ, ಓಬಂಣನಾಯಕ ಬಿಳಿಚೋಡಿನಲ್ಲಿಯೇ ನಿಂತರು.[5]

ಚಿತ್ರದುರ್ಗದ ಕಾಮಗೇತಿ ದೊರೆಗಳ ಹಿನ್ನೆಲೆ ಈ ರೀತಿ ಇದೆ. ಮಹಮ್ಮದ್ ತೊಘಲಕ್‌ನ ಸಂತತಿಯವರು ದೆಹಲಿಯಲ್ಲಿ ರಾಜ್ಯಭಾರ ಮಾಡುತ್ತಿದ್ದ ಕಾಲದಲ್ಲಿ ಪಟ್ಟದಾನೆಯು ಮದವೇರಿ ಗಜಶಾಲೆಯಿಂದ ತಪ್ಪಿಸಿಕೊಂಡು ಘೀಂಕರಿಸುತ್ತ ಓಡುತ್ತಿತ್ತು. ಮಿಂಚಿನ ವೇಗದಲ್ಲಿ ಹಾರಿ ಗಜವನ್ನು ಹಿಡಿದು ಅದರ ಮದವನ್ನು ಮುರಿದು ಹಿಡಿತಕ್ಕೆ ತಂದ ಧೀರನು ಚಿತ್ರದುರ್ಗದ ಕಾಮ್ಗೇತಿ ಪಾಳೆಯಗಾರರ ಪೂರ್ವಜನು. ದೆಹಲಿಯ ಬಾದಷಹನು ಆತನ ಶೌರ್ಯಕ್ಕೆ ಮೆಚ್ಚಿ ಮದಕರಿನಾಯಕ ಎಂಬ ಬಿರುದನ್ನು ಖಿಲ್ಲತ್ತುಗಳನ್ನು ಇತ್ತು ಸನ್ಮಾನಿಸಿದನು. ಆನಂತರ ಚಿತ್ರದುರ್ಗವನ್ನಾಳಿದ ಅನೇಕ ಪಾಳೆಯಗಾರರು ಆ ಬಿರುದನ್ನೇ ತಮ್ಮ ಹೆಸರನ್ನಾಗಿ ಇಟ್ಟುಕೊಂಡಿದ್ದರು. ಕ್ರಿ.ಶ. ೧೫೬೮ರಲ್ಲಿ ಕಾಮ್ಗೇತಿ ವಂಶದ ಹಿರಿಯನಾದ ಬುಳ್ಳನಾಯಕ ಇಂದು ದುರ್ಗದ ಪಾಳೆಯಗಾರರಾಗಿರುವವರ ವಂಶದ ಹಿರಿತಲೆಯಾದ ಸಬ್ಬಗಡಿ ಓಬನಾಯಕ ಇಬ್ಬರೂ ತಮ್ಮ ಹಿರಿಯಣ್ಣನಾದ ಜಡೆಕಲ್ಲನಾಯಕನೊಂದಿಗೆ ತುರುಕುರಿ ಕೊಲ್ಲಾರಿ, ಕಂಪಳದೇವರಲ್ಲೊಂದಾದ ಚಿತ್ರದೇವರು, ಮತ್ತು ನರಸಿಂಹದೇವರ ಪೆಟ್ಟಿಗೆಯೊಂದಿಗೆ ತಮ್ಮ ಮೂಲ ಸ್ಥಳವಾದ ಜಡೆಕಲ್ಲನ್ನು ಬಿಟ್ಟು ನಾಡತಳವಾರರು ದೇಸಿಗರಂತೆ ಊರೂರು ಅಲೆಯುತ್ತಾ ಆಗಿನ ಕರ್ನಾಟಕ ಸಾಮ್ರಾಜ್ಯವೆನಿಸಿದ ವಿಜಯನಗರ (ಹಂಪೆ)ಕ್ಕೆ ಬಂದು ಅಲ್ಲಿನ ದೊರೆಗಳ ಆಶ್ರಯದಲ್ಲಿ ಕೆಲವು ಕಾಲ ತಂಗಿದ್ದು ತದನಂತರ ಅವರ ಅಪ್ಪಣೆಯಂ ಪಡೆದು ದಕ್ಷಿಣ ಪ್ರದೇಶವನ್ನು ಕುರಿತು ಬಂದು ಕಡೆಗೆ ನೀರುತಡಿ ಗ್ರಾಮವನ್ನು ಸೇರಿ ಅಲ್ಲಿ ತಮ್ಮ ದೇವರ ಅಪ್ಪಣೆಯಂತೆ ಅಹೋಬಲ ನರಸಿಂಹಸ್ವಾಮಿಗೂ ಮತ್ತು ಚಿತ್ರದೇವರಿಗೂ ಗುಡಿಯನ್ನು ಕಟ್ಟಿ ಮೂರು ಜನ ಅಣ್ಣ – ತಮ್ಮಂದಿರು ಕೆಲವು ಕಾಲ ಅಲ್ಲಿಯೇ ನೆಲಸಿದ್ದು ತದನಂತರ ಬುಳ್ಳನಾಯಕನ ಮಕ್ಕಳು ನೀರುತಡಿಯನ್ನು ಬಿಟ್ಟುಬಿಳಿಚೋಡಿಗೆ ಬಂದು ವಾಸವಾದರು.[6] ಹೀಗೆ ಶಾಸ್ತ್ರಿಗಳು ಚಿತ್ರದುರ್ಗದ ಕಾಮಗೇತಿ ಪಾಳೆಯಗಾರರಗೂ ಅವಿನಭಾವ ಸಂಬಂಧವಿದ್ದ ಬಗ್ಗೆ ವಿವರಗಳಿವೆ. ಡಾ.ಬಿ. ರಾಜಶೇಖರಪ್ಪ ಅವರು 'ಸಾಳುವ ವಂಶದವರು ಮರು ಪ್ರಯತ್ನ' ಎಂಬ ಲೇಖನದಲ್ಲಿ ಸಾಳುವ ಮತ್ತು ಕಾಮಗೇತಿ ಮನೆತನದವರ ನಡುವೆ ಶೀತಲ – ಸಂಘರ್ಷ ಇದ್ದುದು ಮತ್ತು ಅದರಲ್ಲಿ ಕಡೆಗೆ ಕಾಮಗೇತಿ ವಂಶದವರ ಕೈಮೇಲಾದ ಬಗ್ಗೆ ತಿಳಿಸಲಾಗಿದೆ.

ಸಾಳುವ ನರಸಿಂಗರಾಯ ವಿಜಯನಗರ ಸಾಮ್ರಾಜ್ಯದ ಪ್ರಾಯಶಃ ಸಾಕಷ್ಟು ದೊಡ್ಡದಾದ ಒಂದು ಪ್ರದೇಶಕ್ಕೆ ಅಧಿಪತಿಯಾಗಿದ್ದ. ಅದೇ ಕಾಲದಲ್ಲಿ ವಾಲ್ಮೀಕಿ ಕುಲದ ಕಾಮಗೇತಿ ಎಂಬ ಬೆಡಗಿಗೆ ಸೇರಿದ ತಿಮ್ಮಣ್ಣನಾಯಕನು ಚಿತ್ರದುರ್ಗ ಪ್ರಾಂತ್ಯವನ್ನು ಆಳುತ್ತಿದ್ದನು[7] ಎಂದು ಇದೇ ಲೇಖನದಲ್ಲಿ ಡಾ.ಬಿ.ರಾಜಶೇಖರಪ್ಪ ಇದಕ್ಕೆ ವ್ಯತಿರಿಕ್ತವಾಗಿ ತಿಳಿಸುತ್ತಾ 'ಕಾಮಗೇತಿ ಕಾಮರಾಜನು ವಿಜಯನಗರದಲ್ಲಿಲ್ಲ. ಓಬಣ್ಣನಾಯಕನಿಗೆ ದುರ್ಗದ ನಾಯಕತನವನ್ನು ನೀಡಲಾಯಿತು. ಈ ಕಾಮಗೇತಿ ರಾಮರಾಯನು ಸ್ವರ್ಗಸ್ಥನಾದ ಮೇಲೆ ಓಬಣ್ಣನಾಯಕನಿಗೆ ಪಟ್ಟವಾಯಿತು.[8] ಅರವೀಡು ವಂಶದ ಅಳಿಯ ರಾಮರಾಯನಿಗೆ ಕಾಮಗೇತಿ ರಾಮಯ್ಯ ಎನ್ನುತ್ತಿದ್ದರೆಂದು ತಿಳಿಸುತ್ತಾರೆ. ಮತ್ತಿತಿಮ್ಮಣ್ಣನಾಯಕ ಕಲಬುರ್ಗಿಯನ್ನು ವಶಪಡಿಸಿಕೊಂಡನಲ್ಲದೆ, ವಿಜಯನಗರದ ಚಕ್ರವರ್ತಿಯ ಪ್ರೀತಿಗೂ ಪಾತ್ರನಾದನು.[9]

**೫.೨ ಚಿತ್ರದುರ್ಗದ ನಿರ್ಮಾಣ**

ಈಗಿರುವ ಚಿತ್ರದುರ್ಗದ ಹಿಂದೆ ಚಿಮ್ಮತ್ತಕಲ್ಲು, ಬೆಮ್ಮತ್ತನಕಲ್ಲು, ಬೆನ್ನೂಲಾದ್ರಿಗಿರಿ, ಸಿದ್ದರಬೆಟ್ಟ, ಚಿತ್ತರುಮಲೆದುರ್ಗ, ಪೆರುಮಳೆಪುರ, ಚಂದ್ರವಳ್ಳಿ ಎಂದೆಲ್ಲ ಕರೆಯಲಾಗಿದೆ. ನಾಯಕ ಸಂಸ್ಕೃತಿಯ ಬುಡಕಟ್ಟಿನ ದೈವ ಹಿನ್ನೆಲೆಯು ಈ ಹೆಸರಿಗೆ ನಾಂದಿ ಹಾಡಿದೆ. 'ಚಿತ್ರದೇವರು ಕಾಮಗೇತಿ ಅರಸರ ಮೂಲ ದೇವರು ಮತ್ತು ಚಿತ್ರನಾಯಕ ಮೂಲಪುರುಷ. ಚಿತ್ರದುರ್ಗದ ಹೆಸರು ಈ ಹಿನ್ನೆಲೆಯಿಂದ ಬಂದಿದೆ ಎಂದು ತಿಳಿಸಲಾಗಿದೆ.[10] (ಸಿ) ಚಿತ್ತರು ಮಲೆದುರ್ಗಕ್ಕೆ ಕತ್ತಲುಗವುದಾವೆ… ಎನ್ನುವ ಜನಪದ ಹಾಡು ಚಿತ್ರದುರ್ಗದ ಬಗ್ಗೆ ವಿವರಣೆ ನೀಡುತ್ತದೆ.

**೫.೩. ಪಾಳೆಯಗಾರರು**

ಚಿತ್ರದುರ್ಗದ ಪಾಳೆಯಗಾರರಲ್ಲಿ ಕಾಮಗೇತಿ ತಿಮ್ಮಣ್ಣನಾಯಕ ಈ ವಂಶದ ಮೊದಲ ಅರಸ; ಹನುಮಿನಾಯಕ ಈತನ ಮತ್ತು ಓಬಣನಾಯಕನ ತಂದೆ; ತನ್ನನ್ನು ಸಗಲೆಯ ಹನುಮಿನಾಯಕ ಎಂದು ಕರೆದುಕೊಂಡ ಹನುಮಿನಾಯಕನು ಕಾಮಗೇತಿ ಅರಸರ ಮೂಲಪುರುಷ. ನಂತರ ಮದಕೇರಿನಾಯಕ ಈ ಪ್ರಾಂತ್ಯವನ್ನು ಆಳಿದ್ದು ಚರಿತ್ರೆ. 'ಮದಕೇರಿ' ಆತನ ಹುಟ್ಟೂರಿನ ಹೆಸರಿರಬೇಕು.[11] ಹೀಗೆ ಹಲವು ಅರಸರು ಈ ಹೆಸರನ್ನು ಇಟ್ಟುಕೊಂಡಿದ್ದರು. ಇವರದು ಲಾಂಛನ ಹನುಮದ್ಗರುಡಧ್ವಜ. ಕಾಮಗೇತಿ ಅರಸರಿಗೆ ಮೆದಕೆರಿನಾಯಕ ಎಂಬ ಅಭಿದಾನ ಹೇಗೆ ಬಂತೊ ಹಾಗೆಯೇ ಅವರ ಬಿರುದುಗಳು ಕೂಡ ಬಂದಿದ್ದು ಕಾಮಗೇತಿ ಮತ್ತಿತಿಮ್ಮಣ್ಣನ ವಂಶದ ನಾಲ್ಕನೆಯ ಇಮ್ಮಡಿ ಮದಕರಿನಾಯಕನು ತನ್ನ ಕುಲ ಜನಾಂಗದ ಪರವಾಗಿ ಶ್ರೀ.ಶಾ.ಶ. ವರ್ಷ ೧೫೯೬ನೇ ಆನಂದನಾಮ ಸಂವತ್ಸರದ ಪುಷ್ಯಶುದ್ಧ ಉಚ್ಚಂಗಮ್ಮನ ಉತ್ಸವದಲ್ಲಿ ಶ್ರೀಮನ್ಮಹಾನಾಯಕಾಚಾರ್ಯ, ನಾಯಕ ಶಿರೋಮಣಿ, ಕಾಮ್ಗೇತಿ ಕಸ್ತೂರಿ ವೀರ ಮತ್ತಿ ಕುಲತಿಲಕ, ಹಗಲುಕಗ್ಗೊಲೆಮಾನ್ಯ, ಗಾದ್ರಿಮಲೆಹೆಬ್ಬುಲಿ, ಗಂಡುಗೊಡಲಿ ಸರ್ವ ಸಂಸ್ಥಾನ, ಚಿತ್ರದುರ್ಗ ರಣವೀರ ಇಮ್ಮಡಿ 'ಮದಕರಿ ನಾಯಕನು' ಸಿಡಿಲೇಟಿಗೂ ಕೋಟೆ ಪಟುಭಟರ ಬಲಕ್ಕೂ ಬಗ್ಗದ ದೊರೆಯೆಂದು ಕಿತಾಪ್ ಹೊರಡಿಸಿದನು.[12] ಇಮ್ಮಡಿ ಮದಕರಿನಾಯಕ ತನ್ನ ಮಗಳ ಆಸೆಯಂತೆ ಉಚ್ಚಂಗಿ ದುರ್ಗದ ಉಚ್ಚಂಗಮ್ಮನ ಮೂರ್ತಿಯನ್ನು ಚಿತ್ರದುರ್ಗಕ್ಕೆ ತೆಗೆದುಕೊಂಡು ಬಂದು ಪ್ರತಿಷ್ಠಾಪಿಸಿದನು. ಇವನಾನಂತರ ಕಸ್ತೂರಿರಂಗಪ್ಪನಾಯಕ ಪಟ್ಟಕ್ಕೆ ಬರುತ್ತಾನೆ. ದಳವಾಯಿ ಮುದ್ದಣ್ಣನ ಕೆಟ್ಟಬುದ್ಧಿಯಿಂದ ಪ್ರಜೆಗಳ ಅಸಮ್ಮತಿ, ಪ್ರಧಾನಿ ಪರಶುರಾಮಪ್ಪನಾಯಕರು ಹರಪನಹಳ್ಳಿ ಬಸವಂತನಾಯಕರ ವೈರತ್ವವನ್ನು ಅರಿತು ಒಳಸಂಚಿನಿಂದ ಕಸ್ತೂರಿ ರಂಗಪ್ಪ ನಾಯಕರನ್ನು ದಳವಾಯಿ ಬರಮಣ್ಣ ಸೆರೆಯಲ್ಲಿಟ್ಟನು. ಅಧಿಕಾರಿವರ್ಗದವರೆ ರಾಜನಾಗಬೇಕೆಂದು ಹವಣಿಸಿ ಬಿಳಿಚೋಡಿನಲ್ಲಿ ಕಾಮಗೇತಿ ಬುಳ್ಳನಾಯಕನ ವಂಶದ ಬರಮಣ್ಣನು ಕುರಿಕಾಯುತ್ತಿರುವಾಗ ಮಲಗಿದ್ದ ವೇಳೆಯಲ್ಲಿ ಏಳಡೆ ಸರ್ಪ ಆತನ ಮುಖದ ಮೇಲೆ ಎಡೆಬಿಚ್ಚಿದಾಗ ಚಿತ್ರದುರ್ಗದ ಮುರುಘ ರಾಜೇಂದ್ರಸ್ವಾಮಿಗಳವರು ಕಂಡು ಆತನಿಗೆ ದುರ್ಗದ ದೊರೆಯಾಗುವಿ, ನನ್ನ ಮಠ ಕಟ್ಟಿಸಿ ಕೊಡಬೇಕೆಂದು ಆಶೀರ್ವಾದವನ್ನಿತ್ತರು.[13]

**ಭರಮಣ್ಣ ನಾಯಕ**

ಹೀಗೆ ಸ್ವಾಮಿಗಳಿಂದ ಆಶೀರ್ವಾದ ಪಡೆದ ಚಿತ್ರದುರ್ಗದ ಆರನೇ ದೊರೆಯೇ ಬಿಳಿಚೋಡು ಬುಳ್ಳನಾಯಕನ ವಂಶದ ಬರಮಣ್ಣನಾಯಕ. ದುರ್ಗವನ್ನಾಳಿದ ದೊರೆನಾಯಕರಲ್ಲಿ ಈತ ಪ್ರಸಿದ್ಧ ವ್ಯಕ್ತಿ. ಚಿತ್ರದುರ್ಗದ ಏಳುಸುತ್ತಿನ ಕೋಟೆಯನ್ನು ಕಟ್ಟಿಸುವವನು ಇವನೇ. 'ದುರ್ಗದ ಪಟ್ಟಣವನ್ನು ಅಭಿವೃದ್ಧಿಗೊಳಿಸಿ ಗ್ರಾಮೀಣ ಭಾಗಗಳಲ್ಲಿ ಬಾವಿ, ಕೆರೆ, ಕಟ್ಟೆ, ಕುಂಟೆ, ಗುಡಿ – ಗೋಪುರಗಳನ್ನು ನಿರ್ಮಿಸಿದನು. ಗ್ರಾಮೀಣ ಜನರ ಜೀವನ ಬಗ್ಗೆ ಗಮನಹರಿಸಿದನು. ಇಡೀ ನಾಯಕ ಜನಾಂಗಕ್ಕೆ ನಾಯಕನೆಂದು ಸಾರಿದನು. ಜಾತಿ – ಭೇದಗಳ ಬಗ್ಗೆ ಕುಲಾಚಾರಗಳ ಬಗ್ಗೆ ಹೇಳುತ್ತಾ ಗುಡಿಕಟ್ಟೆ – ಕಟ್ಟೆಮನೆಗಳನ್ನು ಅಭಿವೃದ್ಧಿಪಡಿಸಿದ. ಕ್ರಿ.ಶ. ೧೬೮೯ರಲ್ಲಿ ಮುರಿಗಿಸ್ವಾಮಿಗಳಿಗೆ ಹೊಸಮಠವನ್ನು ಬರಮಣ್ಣನಾಯಕ ಕಟ್ಟಿಸಿದನು.

**ಕಾಮಗೇತಿಗಳ ಉಚ್ಛ್ರಾಯ ಸ್ಥಿತಿ**

ಚಿತ್ರದುರ್ಗದ ಅರಸರು ವೈಷ್ಣವ ಧರ್ಮದ ಅನುಯಾಯಿಗಳು. ರಂಗನಾಥ, ಅಹೋಬಲ ನರಸಿಂಹ ಅಲ್ಲದೆ, ಶಕ್ತಿದೇವತೆಗಳಾದ ರಾಜಾ ಉತ್ಸವಾಂಬೆ, ಬನಶಂಕರಿ ಮೊದಲಾದ ದೇವತೆಗಳನ್ನು ಪೂಜಿಸುತ್ತಿದ್ದರು.

ಕಾಮಗೇತಿ ಅರಸರು ಕ್ರಿ.ಶ. ೧೫೬೮ ರಿಂದ ೧೭೭೯ರ ವರೆಗೆ ಸುಮಾರು ೨೧೧ ವರ್ಷಗಳ ಕಾಲ ಆಳ್ವಿಕೆ ನಡೆಸಿರುವುದು ಗಮನಾರ್ಹ. ಈ ವಂಶದ ೧೧ ಜನ ಪಾಳೆಯಗಾರರು ಈ ಅವಧಿಯಲ್ಲಿ ಜನಮೆಚ್ಚುವಂತೆ ನಾಡಿಗಾಗಿ ಹೋರಾಡಿ ಆಳ್ವಿಕೆ ನಡೆಸಿದ್ದೂ ಶ್ಲಾಘನೀಯ. ಈ ಪಾಳೆಯಗಾರರ ಕಾಲಕ್ಕೆ ದಕ್ಷಿಣ ಭಾರತದಲ್ಲಿ ಚಿತ್ರದುರ್ಗ ಪ್ರಬಲವಾದ ಮತ್ತು ಅಭೇದ್ಯ ದುರ್ಗವಾಗಿದ್ದು ಸ್ಪಷ್ಟ.

ಅನೇಕ ಅರಸರನ್ನು ಸೋಲಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರನ್ನು ಹೈದರಾಲಿ ೧೭೭೯ರಲ್ಲಿ ಸೋಲಿಸಿದಾಗ ಚಿತ್ರದುರ್ಗವು ಕೊನೆಯ ಮದಕರಿನಾಯಕನ ಕಾಲದಲ್ಲಿ ಅವಸಾನಗೊಂಡಿತು.[14] ನಾಯಕನು ಹೈದರಾಲಿ ಹಾಗೂ ತನ್ನ ಆತ್ಮೀಯರಿಂದ ಮೋಸ ಹೋದನು.

ಇದೇ ಕಾಲಕ್ಕೆ ಸೇರಿದ ಮೈಸೂರು ಪ್ರದೇಶದ ಕಾರುಗನಹಳ್ಳಿ ಪಾಳೆಯಗಾರ ಮಾರನಾಯಕನು ಕಾಮಗೇತ್ರಿ ಗೋತ್ರದವನು. ಇವನು ಮೈಸೂರು ಒಡೆಯರ ಕಾಲದಲ್ಲಿ ಪರಾಕ್ರಮಿಶಾಲಿ ಅರಸನಾಗಿದ್ದನು. ಕ್ಷುಲ್ಲಕ ಕಾರಣದಿಂದ ದುರಂತಸಾವಿಗೆ ಶರಣಾಗುತ್ತಾನೆ. ಇವನ ಬಗ್ಗೆ ವಿಫುಲವಾದ ಜನಪದ ಸಾಹಿತ್ಯ ಲಭ್ಯವಿದೆ. ಚಿತ್ರದುರ್ಗದ ಕಾಮ್ಗೇತಿ ದೊರೆಗಳು ಮಳೆಲಾರು (ಬೆಡಗು) ಗೋತ್ರಕ್ಕೆ ಸೇರಿದ ಗುಡೇಕೋಟೆ – ಜರಿಮಲೆ ಪಾಳೆಯಗಾರರ ಹೆಣ್ಣುಮಕ್ಕಳನ್ನು ಮದುವೆಮಾಡಿಕೊಳ್ಳುತ್ತಾರೆ.

ಇಂದಿಗೂ ಮ್ಯಾಸಬೇಡರ ಹಟ್ಟಿ, ಗ್ರಾಮಗಳಲ್ಲಿ ಕಾಮಗೇತಿ ಗೋತ್ರದ ಪಾಳೆಯಗಾರರು ಕೋಲುಕಾರರೆಂತಲೂ ಹಾಗೂ ತಳವಾರರೆಂತಲೂ, ಕರೆದು ತಮ್ಮ ಸಂಸ್ಥಾನದ ಪ್ರತಿ ಊರುಗಳ ಸ್ಥಳ ವಿಚಾರವನ್ನೂ ಕಾಮಗೇತಿ ಅವರಿಂದ ತಿಳಿದುಕೊಳ್ಳುತ್ತಿದ್ದರು.[15]

ಮಧ್ಯ ಕರ್ನಾಟಕದಲ್ಲಿ ನೆಲಸಿರುವ ನಾಯಕರಂತೆ ಕಾಮಗೇತಿಗಳು ತಮ್ಮ ಜೀವನ ವಿಧಾನದಲ್ಲಿ ಸುಧಾರಣೆ ಕಂಡುಕೊಂಡಿದ್ದಾರೆ. ಪ್ರಾಚೀನ ಪರಂಪರೆಯನ್ನು ಕೈಬಿಡದೆ ಆಧುನಿಕತೆಗೂ ಬಲಿಯಾಗದೆ ಸಂದರ್ಭಕ್ಕೆ ತಕ್ಕಂತೆ ಜೀವನ ನಿರ್ವಹಣೆ ಮಾಡುವುದು ವಿಶೇಷ. ಕಾಮಗೇತಿಗಳು ಅಹೋಬಲ ನರಸಿಂಹದೇವರು ಮತ್ತು ಕಂಪಳ ದೇವರಲ್ಲಿ ಒಂದಾದ ಚಿತ್ರದೇವರನ್ನು ಪೂಜಿಸುತ್ತಾರೆ. ಮಹಿಪರಿಗೋತ್ರ – ಮನುಮುನಿಸೂತ್ರ ಶಾಖೆಗಳೆಂದು ತೋರಿಸಲಾದ ಚಂದ್ರವಂಶಕ್ಕೆ ಸೇರಿದವರಲ್ಲಿ ಸೂರೇದೇವರು, ದೊಡ್ಡಕಂಪಳದೇವರು ಮತ್ತು ಚಿತ್ರದೇವರುಗಳಿಗೆ ಸಂಬಂಧಿಸಿದವರು ಹಸ್ತಿನಾವತಿ, ಆನೆಗೊಂದಿ ಮತ್ತು ಚಿತ್ರದುರ್ಗದ ರಾಜವಂಶಸ್ಥರೆಂದು ಪ್ರಸ್ತಾಪಿಸಲಾಗಿದೆ.[16] ಇವರ ಚಿತ್ರದೇವರನ್ನು ದಿಳ್ಳಿ (ದಿಲ್ಲಿ)ಯಿಂದ ಬಂದಿದ್ದೂ ಎನ್ನುತ್ತಾರೆ.

ಮೇಲೆ ಹೇಳಿರುವ ಸಂಗತಿಗಳಲ್ಲಿ ಕಾಮಗೇತಿಗಳ ಮೂಲ ಸ್ಥಳೀಯರೇ ಅಥವಾ ಹೊರಗಿನವರೇ ಎಂಬುದಕ್ಕೆ ಪುಷ್ಟಿ ದೊರೆಯುವ ಆಕರಗಳು ವಿರಳ. ಆದರೂ ಒಂದು ಕಾಲಕ್ಕೆ ನೆಲೆನಿಂತು ತಮ್ಮ ಅನನ್ಯತೆಯನ್ನು ಗುರುತಿಸಿಕೊಂಡಿರುವುದು ಇವರ ಚಾರಿತ್ರಿಕ ಪ್ರಜ್ಞೆಗೆ ಸಾಕ್ಷಿ. ಕಾಮಗೇತಿಲೋರ ಚಿಕ್ಕನಾಯಕ ನಿಂತ ಸ್ಥಳ ಚಿಂಚನಕಲ್ಲು ಎಂದು ಹೇಳಲಾಗಿದೆ. ಆದ್ದರಿಂದ ಚಿತ್ರನಾಯಕನಿಂದ ಚಿತ್ರಹಳ್ಳಿ ಎಂದು ಹೆಸರು ಬಂದಿರಬಹುದೆಂಬ ಸಂಗತಿಯನ್ನು ಒಪ್ಪಲಾಗುವುದು.

ಮೌಖಿಕ ಚರಿತ್ರೆಯಲ್ಲಿ ಓಬನಾಯಕ, ಜಡವಿನಾಯಕ ಮತ್ತು ಬುಳ್ಳನಾಯಕ ಎಂಬ ೩ ಜನ ಜಡಕಲ್ಲುದುರ್ಗದಿಂದ ಬಂದು ದಾವಣಗೆರೆ ಹತ್ತಿರ ನೀರ್ಥಡಿಯಲ್ಲಿ ನೆಲೆನಿಂತು ಹಟ್ಟಿನಿರ್ಮಿಸಿದ ನಂತರ ಸ್ಯಾಗಲೆ ಗ್ರಾಮದಲ್ಲೂ ನೆಲಸಿದ್ದು ಗಮನಾರ್ಹ.

**೫.೪. ಚಿತ್ರದುರ್ಗ ನಾಯಕರ ವಂಶಾವಳಿ (ರೈಸ್ ಆಧಾರಿತ)**

**(ಕೃಪೆ : ಕರ್ನಾಟಕ ಚರಿತ್ರೆ ಸಂಪುಟ – ೩ ಪು ೪೪೩)**

| | |
|---|---|
| ಕಾಮಗೇತಿ ಕಸ್ತೂರಿ ರಂಗನಾಯಕ | ಓಬಣ್ಣನಾಯಕ |
| ತಿಮ್ಮಣ್ಣನಾಯಕ (೧೫೫೬ – ೧೫೬೩) | ಚಿಕ್ಕಪ್ಪನಾಯಕ (೧೬೦೬) |

ಮದಕೇರಿನಾಯಕ (೧೫೬೮ – ೧೫೮೧)

ರಂಗಪ್ಪನಾಯಕ (೧೫೭೬ – ೧೬೩೩)

| | | |
|---|---|---|
| ಮದಕರಿನಾಯಕ (೧೬೦೯ – ೧೬೫೩) ಭರಮಪ್ಪ ನಾಯಕ | ಭರಮಪ್ಪನಾಯಕ (೧೬೪೦ – ೧೬೬೩) | ಚಿಕ್ಕಣ್ಣನಾಯಕ (೧೬೭೮ – ೧೬೮೧) |
| ಮದಕೇರಿನಾಯಕ (೧೭೧೨ – ೧೭೩೦) | ಚಿಕ್ಕಣನಾಯಕ (೧೭೨೧) | ಮದಕೇರಿನಾಯಕ (೧೬೬೦ – ೧೬೮೭) |
| ರಂಗಪ್ಪನಾಯಕ | ರಂಗಪ್ಪನಾಯಕ (೧೬೯೦ – ೧೭೫೫) | |
| ಮದಕರಿನಾಯಕ (೧೭೫೬ – ೧೭೭೯) | ಮದಕೇರಿ ನಾಯಕ | |

ಇವರಂತೆ ಮೊಳಕಾಲ್ಮೂರು ಪಾಳೆಯಗಾರರು ಕಾಮಗೇತಲಾರು. ಸುಮಾರು ೨೫ಕ್ಕೂ ಹೆಚ್ಚು ಜನ ಪಾಳೆಯಗಾರರು, ನಾಯಕರು ಇಲ್ಲಿ ಕಂಡುಬರುತ್ತಾರೆ.

**ಕಾಮಗೇತಿಗಳ ಮತ, ಗೋತ್ರಗಳ ತರ್ಕ**

ಕಾಮಗೇತಿ ವಂಶಜರಲ್ಲಿ ಗೋತ್ರ, ಬೆಡಗು, ಬಳಿಗಳೆಲ್ಲ ಒಂದೇ. ಆದರೆ ಇವರನ್ನು ಒಟ್ಟಾರೆ ವಾಲ್ಮೀಕಿ ಅಥವಾ ನಾಯಕ ಎಂದು ಕರೆದುಕೊಂಡಿರುವುದು ಸ್ಪಷ್ಟ. ಇಲ್ಲಿ ರಾಜ್ಯಾಳ್ವಿಕೆ ನಡೆಸಿದ ಕಾಮಗೇತಿ ಅರಸರು ತಮಗೆ ಇಷ್ಟಬಂದಂತೆ ವೈಷ್ಣವ, ಶೈವಧರ್ಮಗಳಿಗೆ ಪ್ರೋತ್ಸಾಹ ಕೊಟ್ಟಿರುವುದು, ಸ್ವತಃ ಅರಸರೇ ಮತಾಂತರಗೊಂಡಿರುವುದರ ಬಗ್ಗೆ ಉದಾಹರಣೆಗಳಿವೆ. ಮದ್ಯ, ಮಾಂಸಹಾರವನ್ನು ತ್ಯಜಿಸಿದ್ದರು. ಚಿತ್ರದುರ್ಗದ ನಾಯಕ ಅರಸರು ಜನಿವಾರತೊಟ್ಟು ವಿಷ್ಣುವಿನ ಪರಮ ಭಕ್ತರಂತೆ ನಡೆದುಕೊಂಡಿದ್ದರು. ಅದೇ ರೀತಿ ಬೇರೆ ಅರಸರು ಮಾಡಲಿಕ್ಕೆ ಶಕ್ಯತೆ ಇದೆ. ಈ ರಾಜಪ್ರಭುತ್ವ ಹೊರತುಪಡಿಸಿದರೆ ಬುಡಕಟ್ಟು ಜನರಾದ ಮ್ಯಾಸಬೇಡರಲ್ಲಿ ಕಾಮಗೇತಿ ಅರಸರು ತಮ್ಮದೇ ಆದ ಪ್ರತ್ಯೇಕತೆ ಉಳಿಸಿಕೊಂಡಿದ್ದಾರೆ.

ಇಲ್ಲಿ ಉದಾಹರಣೆಗೆ ದಿ: ೯ – ೧೦ – ೦೫ರಂದು ಚಳ್ಳಕೆರೆ ತಾಲೂಕಿನ ನಾನಕನಹಟ್ಟಿ ಸಿಟಿಜನ್ ಟೈಲರ್ ವೈ.ಎನ್.ತಿಮ್ಮರಾಜನಾಯಕನನ್ನು ಭೇಟಿಯಾದಾಗ ಪಾಳೆಯಗಾರನೆಂದು ದರ್ಪ, ಅಹಂಕಾರ ಪಡುತ್ತಿದ್ದನು. ಆದರೂ ಅವರಿಗೆ ನಾನು ಸ್ಪಂದಿಸಿದೆನು.[17] ಈತ ಪಾಳೆಯಗಾರರ ವಂಶಕ್ಕೆ ಸೇರಿದರೂ ಆರ್ಥಿಕ ಹಿನ್ನೆಡೆ, ಸಮಾಜದ ಸ್ಥಿತಿ – ಗತಿಯಿಂದಲೋ ಏನೋ ಮ್ಯಾಸನಾಯಕರಲ್ಲಿ ವಿವಾಹವಾಗಿದ್ದಾನೆ.

ದಿನಾಂಕ ೧೫ – ೫ – ೨೦೦೫ರಂದು ಮಧ್ಯಾಹ್ನ ೧೨.೪೫ ರಿಂದ ೪.೩೦ ರವರೆಗೆ ದಾವಣಗೆರೆ ಜಿಲ್ಲೆ, ಜಗಳೂರು ತಾಲೂಕಿನ ಕಾಮಗೇತನಹಳ್ಳಿ ಸೂರಲಿಂಗೇವರ ದೇವಾಲಯದ ಪೂಜಾರಿ ನಿಜಲಿಂಗಪ್ಪ (೭೦) ತಂದೆ ದಿವಂಗತ ಪೂಜಾರಿಪಾಲಯ್ಯನವರನ್ನು ಮೂರನೇ ಸಲ ಭೇಟಿ ಮಾಡಿದ ವಿವರ ಈ ಕೆಳಗಿನಂತಿದೆ : ನಿಜಲಿಂಗಪ್ಪನವರ ಪ್ರಕಾರ ಕಾಮಗೇತನಹಳ್ಳಿ ದೇವಸ್ಥಾನ ಪಕ್ಕದಲ್ಲಿ ಇವರ ಮನೆಯಿದೆ. ನಾಯಕ ಬುಡಕಟ್ಟಿನ ನಲಟಬ್ಬಲಾರು ಇವರ ಬೆಡಗು. ಈ ಬೆಡಗಿನಲ್ಲಿ ೫ ಪಂಗಡಗಳಿವೆ.

೧. ಕಗ್ಗಲರು – ಮಲ್ಲುರರು

೧. ಯರಬೊಮ್ಮನವರು, ಬುಡ್ಡಿಬೋರನವರು

೩. ಮಾಸಿಲಾರು, ಗಾಮಬ್ಬಾರು

೪. ಗಜಿಗಿಡ್ಲು, ಬಿದ್ದಿಡ್ಲು

೫. ಮಲ್ಲಮುತ್ತೆ, ಪೆಯಿಲುಮುತ್ತೆ, ನಲ್ಲಬ್ಬನವರು

ಇವರು ಕಾಮಗೇತಿ ಬೆಡಗಿನ ಸಹೋದರ ಸಂಬಂಧಿ ಬೆಡಗಿನವರೇ ಆಗಿದ್ದಾರೆ. ಕಾಮಗೇತನಹಳ್ಳಿ ಸೂರಲಿಂಗೇಶ್ವರ ದೇವರನ್ನು ಇವರು ಪೂಜಿಸುತ್ತಾರೆ. ಇದನ್ನು ಮಲ್ಲನಾಯಕದೇವರ ಒಡೆಯ, ಪೆಟ್ಟಿಗೆ ದೇವರೆಂದು ಮಾಡಿಕೊಂಡಿದ್ದಾರೆ. ಈ ಹಿಂದೆ ತಿಳಿಸಿದಂತೆ, ಇದು ಆಚಾರದ ಕಟ್ಟೆಮನೆ. ಹಿಂದೆ ಸಾವಿರ ಕುಲದವರು ಶ್ರೀಶೈಲದಿಂದ ಬರುವಾಗ ಇವರು ಬಂದರೆಂದು ಪ್ರತೀತಿ. ಇಲ್ಲಿರುವ ದೇವಾಲಯ ಪ್ರಾಚೀನವಾದುದು. ಹಿಂದೆ ಕಾಮ್ಸಿ ಹುಲ್ಲಿನ ಗುಡಿಸಲಿತ್ತು. ಈಗ ಸುಂದರವಾದ ಗುಡಿಯನ್ನು ನಿರ್ಮಿಸಿದ್ದಾರೆ. ಸದ್ಯದಲ್ಲೇ ಹೊಸ ದೇವಾಲಯವನ್ನು ವಿಶಾಲವಾದ ಸ್ಥಳದಲ್ಲಿ ನಿರ್ಮಿಸುವ ಯೋಜನೆ ಇದೆ. ಇವರು ವಾಸಿಸುವ ಮನೆ ಆಧುನಿಕವಾಗಿದ್ದ ಮಾಳಿಗೆ ಮನೆಯಾಗಿದೆ. ಈ ದೇವರಿಗೆ ನಿಜಲಿಂಗಪ್ಪನವರೇ ಪಟ್ಟಾಧ್ಯಕ್ಷರು ಹಾಗೂ ಪೂಜಾರಿಗಳು. ಈತನನ್ನು ಉಜ್ಜಿನಿಗುರುಗಳು ನೇಮಕ ಮಾಡಿರುತ್ತಾರೆ. ಈ ಪದ್ಧತಿ ಹಿಂದಿನಿಂದ ಬಂದಿದೆ. ನಾಯಕನಹಟ್ಟಿಯಲ್ಲಿ ಹಿರೇಮಠದ ಉಜ್ಜಿನಿ ಸೂತ್ರದವರು ಪಟ್ಟಾಭಿಷೇಕ ಮಾಡಿರುತ್ತಾರೆ. ಇವರಿಗೆ ಅರಮನೆ – ಗುರುಮನೆ ಉಜ್ಜಿನಿ (ಕೂಡ್ಲಿಗಿ – ತಾ ಬಳ್ಳಾರಿ ಜಿಲ್ಲೆ) ಆಗಿದೆ. ಇವರ ದೇವರೆತ್ತುಗಳು ಕಲ್ಲೇದೇವರಪುರದ ಸಮೀಪ ಬಸಪ್ಪನಹಟ್ಟಿಯಲ್ಲಿವೆ. ಹಿಂದೆ ಬಹಳಷ್ಟು ಇದ್ದವು. ಈಗ ೫೨ ಮಾತ್ರ ಉಳಿದಿವೆ. ಹುಲ್ಲು – ನೀರಿನ ಸಮಸ್ಯೆಯಿಂದ ಹಲವು ಸತ್ತು ಹೋಗಿವೆ. ದೇವರೆತ್ತುಗಳನ್ನು ಕಾಯುವವನಿಗೆ ಕಿಲಾರಿ ಎನ್ನುತ್ತಾರೆ. ಇಲ್ಲಿನ ಕಿಲಾರಿ ಬಡಜ್ಜ, ಇವರ ತಂದೆ ಮಾಸೆಲು ಸೂರಪ್ಪ. ನಂತರ ಹಾಲಿ ಕಿಲಾರಿಯಾಗಿರುವನು ತಿಪ್ಪೇಸ್ವಾಮಿ. ತುಮಕೂರ್ಲಹಳ್ಳಿ (ಮೊಳಕಾಲ್ಮೂರು – ತಾ) ಓಬಯ್ಯ ಈ ದೇವರಿಗೆ ದಾಸಲಾರು (ಯ್ಯ) ಆಗಿರುತ್ತಾರೆ ಮತ್ತು ಬುಡ್ಡುಬೋರನದಾಸರು ಬರುತ್ತಾರೆ. ಇಂದು ಹೊಸ ಕಿಲಾರಿಯನ್ನಾಗಿ ತಿಪ್ಪೇಸ್ವಾಮಿಯ ಮೊಮ್ಮಗನನ್ನೆ ಮಾಡಿದ್ದಾರೆ.

ಕಾಮಗೇತನಹಳ್ಳಿ ವಿಶಾಲ ಬಯಲಿನಲ್ಲಿರುವ ಒಂದು ಗ್ರಾಮ. ಯಾವುದೇ ಹಳ್ಳ – ಕೊಳ್ಳ, ಬೆಟ್ಟ, ಗುಡ್ಡಗಳು ಸಮೀಪದಲಿಲ್ಲವಾದ್ದರಿಂದ ಕೃಷಿ ಭೂಮಿ ಜಾಸ್ತಿಯಿದೆ. ಆಯಗಾರರಾಗಿ ದೇವರ ಕಾರ್ಯಗಳಾದ ಮಡಿಹಾಸಲು, ಪಂಜು ಹಿಡಿಯಲು ದೊಣೆಹಳ್ಳಿಯ ಮಡಿವಾಳಿ (ಅಗಸರು)ಗಳು ಬರುತ್ತಾರೆ. ಸೂರ್ಯಲಿಂಗೇಶ್ವರ ಶೈವನಾದ್ದರಿಂದ ಬೇಟೆ ಕಡಿಯುವುದಿಲ್ಲ. ಇದಕ್ಕೆ ಪ್ರಾಣಿಬಲಿ ನಿಷಿದ್ಧ. ಈ ಯಾವುದೇ ಗ್ರಾಮದ ಪರಿಸರದಲ್ಲಿ ಬಂಗಾರಕ್ಕನಗುಡ್ಡದ ಮೇಲೆ ದೋಣೆ ಇದೆ. ಇಲ್ಲಿಗೆ ದೇವರನ್ನು ಗಂಗಿಪೂಜೆಗೆ ಕರೆದೊಯ್ಯುತ್ತಾರೆ. ಈ ಸ್ಥಳಕ್ಕೆ ಚಿತ್ರದುರ್ಗ ಅರಸಲು ಜರಿಮಲೆನಾಯಕರಿಗೆ ಹೆಣ್ಣನ್ನು ಕೊಟ್ಟಿದ್ದಾರಂತೆ. ನಡೆದುಕೊಂಡು ಹೋಗುವಾಗ ಇಲ್ಲಿಗೆ ಬರುವಾಗ ರಾತ್ರಿಯಾಗುತ್ತಿದ್ದರಿಂದ ಬಂಗಾರಕ್ಕನಗುಡ್ಡಕ್ಕೆ ದೇವರನ್ನು ಕರೆದೊಯ್ಯುವುದು ಇದು ೩ನೇ ತಲೆಮಾರು ಆಗಿದೆ. ಬೆಟ್ಟದ ಮೇಲೆ ಸಮಾಧಿಗಳಿವೆ. ಬೆಟ್ಟಕ್ಕೆ ಹೋಗಿ ದೋಣಿಯಲ್ಲಿ ಗಂಗೆಪೂಜೆ ಮುಗಿಸಿ ಸಾಯಾಂಕಾಲ ಸೋಮವಾರ ಬೆಳಿಗ್ಗೆ ಗುಡಿಗೆ ಬರುತ್ತದೆ. ಸಿಡಿ – ಓಕುಳಿಗೆ ಬದಲಿಗೆ ಸೂರ್ಯಪಾಡ್ಯರಾಧನೆ ಆಗುತ್ತದೆ. ಪೂರ್ತಿ ಒಣಗಿ ಹೋದ ತಂಗಡಿಗಿಡತಂದು (ಊದಿ ಪದಿ) ದೇವರೆತ್ತುಗಳಿಗೆ ಹೊಗೆ ಹಾಕುತ್ತಾರೆ. ಈ ದೇವರಿಗೆ ಮೊದಲು ಕುಲದ ಹೆಣ್ಣು ಮಗಳು ಕಾಸು ಇಡುತ್ತಾಳೆ. ನಂತರ ಮುತ್ತೈದೆಯರು, ಇತರರು ಸೇರಿ ಕಾಸನ್ನು ಗದ್ದುಗೆಯಲ್ಲಿ ಹಾಕುತ್ತಾರೆ. ಈ ಎಲ್ಲ ಕಾರ್ಯಕ್ರಮಗಳು ದೊರೆ, ೯ಜನ ಅಜ್ಜನವರ ಸಮ್ಮುಖದಲ್ಲಿ ಆಗುತ್ತದೆ. ಇವರು ೧೦೧ ಪೂಜೆ ಮಾಡುತ್ತಾರೆ. ಈ ಮನೆತನದವರೇ ಪೂಜಾರಿಕೆಯಲ್ಲೇ ಬಂದಿದ್ದು. ಕೃಷಿ ಚಟುವಟಿಕೆಯಲ್ಲಿ ಗಣನೀಯ ಅಭಿವೃದ್ಧಿ ಸಾಧಿಸಿದ್ದಾರೆ ಮತ್ತು ಇವರು ಕನ್ನಡ, ತೆಲುಗು ಮಾತನಾಡಬಲ್ಲವರಾಗಿದ್ದಾರೆ.

ಕಾಮಗೇತನಹಳ್ಳಿ ಸೂರಪ್ಪದೇವರಿಗೆ ನಾಯಕರ ೭೭ ಹಟ್ಟಿಗಳು ೩ ಕಟ್ಟೆಮನೆಗಳು ಹಾಗೂ ದಡ್ಲುಮಾರಮ್ಮ ದೇವರು ಧಾರ್ಮಿಕವಾಗಿ ವ್ಯಾಪ್ತಿಗೊಳಪಡುತ್ತವೆ.

ದಿನಾಂಕ ೧೨ – ೧೦ – ೨೦೦೫ರಂದು ಚಳ್ಳಕೆರೆ ಟಾನಿನ ತಿಪ್ಪೇಸ್ವಾಮಿ ಶಿಕ್ಷಕರನ್ನು ಭೇಟಿ ಮಾಡಿದಾಗ ಈ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. (ಜಗಳೂರು ಪಾಪನಾಯಕ, ಗಾದರಿಪಾಲನಾಯಕ ನಾಟಕಗಳ ಕರ್ತೃ). ಕಾಮಗೇತಲಾರು ಮೊದಲು ಕಾಟಪ್ಪನ ಹಟ್ಟಿಯಲ್ಲಿದ್ದರು. ದೊಡ್ಡಮದಕರಿನಾಯಕನ ತಂದೆ ಕಾಟಪ್ಪನಾಯಕ ಇಲ್ಲಿದ್ದಾಗ ಹೈದರ್ – ಟಿಪ್ಪು ದಾಳಿ ಮಾಡುತ್ತಾರೆ. ದೊಡ್ಡೇರಿ ಸರಹದ್ದಿನಲ್ಲಿದ್ದ ಇವರು ದೊಡ್ಡ ಮದಕರಿಯನ್ನು ತಮ್ಮ ಪರವಾಗಿ ವಾಲಿಸಿಕೊಂಡರು. ಕೇರಳದ ಕೊಚ್ಚಿನ್‌ನಲ್ಲಿ ಕಿರೀಟರಾಜನನ್ನು ಸೋಲಿಸಿ ಅವನ ಮಗಳನ್ನು ಮದುವೆಯಾದನು. ಇವನ ನಂತರ ಚಿತ್ರದುರ್ಗವನ್ನು ಆಳಲು ಗಂಡು ಸಂತಾನ ಇರುವುದಿಲ್ಲ. ಹಾಗಾಗಿ ಜಾನುಕಲ್ಲಿನಲ್ಲಿದ್ದ ರಾಜಾವೀರಮದಕರಿನಾಯಕನನ್ನು ಓಬವ್ವ ನಾಗತಿ ದತ್ತು ಪಡೆದು ಅಧಿಕಾರಕ್ಕೆ ತಂದಳು. ಹೈದರ್ ಜೊತೆಯಲ್ಲಿದ್ದ ದೊಡ್ಡಮದಕರಿ ಬ್ರಿಟಿಷರ ವಿರುದ್ಧ ಹೋರಾಟ ಮಾಡುತ್ತಾನೆ. ಆಗ ಉಳಿದವರು ಬಂದು ಚಳ್ಳಕೆರೆ ಹಳೆ ಊರಿನಲ್ಲಿ, ಓರುಗಲ್ಲು ಎಂಬ ಪ್ರಾಚೀನ ಪಟ್ಟಣದಲ್ಲಿ ಕಾಟಪ್ಪದೇವರನ್ನು ಪ್ರತಿಷ್ಠಾಪಿಸಿದವರು ಕಾಮಗೇತಿಯರು. ಚಳ್ಳಕೆರೆಯ ಪ್ರಾಚೀನ ಗ್ರಾಮವಾದ ಕಾಟಪ್ಪನಹಟ್ಟಿಗೆ ಪ್ರಾಚೀನ ಹೆಸರು ಓರುಗಲ್ಲ ಪಟ್ಟಣ. ಕಾಮಗೇತಿಯರಲ್ಲಿ ೯ ಜನ ಹಿರಿಯರು, ಅಜ್ಜನಾರು (ಮುತ್ತಿಗಾರರು) ಇದ್ದಾರೆ. ನಲ್ಚಬ್ಬರು (ಪೂಜಾರಿಕೆ), ಮಲ್ಲೂರರು ಮತ್ತು ಕಗ್ಗಲ್ಲರು (೧ ಪೆಟ್ಟಿಗೆ), ಪರಮೇಶಿನರು, ಮಾಸೆಲಾರು, ಗೆಜ್ಜುಗಿಡ್ಲು, ಗುಡ್ಡಿಬೋರನಾಡು, ಯರಬೊಮ್ಮಡು, ಬಿದ್ದಿಡ್ಲು ಎಂದು ತಿಳಿಸಿದ್ದಾನೆ. ಇವರಲ್ಲಿ ಅನೇಕರು ದೊಡ್ಡೇರಿಯಿಂದ ಕಾಟಪ್ಪನಹಟ್ಟಿಗೆ ಬಂದು ನೆಲೆಸುತ್ತಾರೆ. ಇಂದಿಗೂ ಕಾಟಪ್ಪನನ್ನು ಗಂಗೆ ಪೂಜೆಗೆ ನಿಡಗಲ್ಲಿಗೆ ಕರೆದೊಯ್ಯುತ್ತಾರೆ. ಇದು ವಿಚಾರದ ಕಟ್ಟೆಮನೆ. ದೊಡ್ಡಮದಕರಿನಾಯಕನ ಕಾಲದಲ್ಲಿ ಕಾಟಪ್ಪನ ತಾಣ ಪವಿತ್ರಗೊಳ್ಳುತ್ತದೆ. ಇಂದು ಕಾಮಗೇತಲಾರು ಚಿತ್ರದೇವರು ಮತ್ತು ಕಾಟೇದೇವರನ್ನು ಅಣ್ಣ – ತಮ್ಮಂದಿರು ಒಂದೇ ದೇವರೆಂಬಂತೆ ಪೂಜಿಸುತ್ತಾರೆ. ಇದರ ತರುವಾಯ ನಲುಜೆರುವು ಓಬಳದೇವರನ್ನು ರುದ್ರಮ್ಮನಹಳ್ಳಿಯಲ್ಲಿ ಪ್ರತಿಷ್ಠಾಪನೆ ಮಾಡಿದರು. ಇದು ಗುರುಸ್ಥಾನ ಮತ್ತು ೧೩ ಪೆಟ್ಟಿಗೆ ದೇವರುಗಳಲ್ಲಿ ಒಂದು. ಈ ಎರಡು ಗ್ರಾಮಗಳ ನಂತರ ಕಾಮಗೇತಿಗಳಲ್ಲಿ ಕೆಲವರು ಕಾಮಗೇತನಹಳ್ಳಿಗೆ ಹೋಗಿ ನೆಲೆಸಿದ್ದರು. ಆಚಾರದ ಕಟ್ಟೆಮನೆಯಾದ ಕಾಮಗೇತನಹಳ್ಳಿಗೆ ಹೋಗಿ ನೆಲೆಸಿದ್ದರು. ಆಚಾರದ ಕಟ್ಟೆಮನೆಯಾದ ಕಾಮಗೇತನಹಳ್ಳಿಯಲ್ಲಿ ಬೇಡರಲ್ಲದೆ, ಇತರರು ದಲಿತ, ಶೂದ್ರರಿಗೆ ಜಾತಿ ಕೊಡುವ ಬಗ್ಗೆ ಕೂಗು ಕೇಳಿಬರುತ್ತದೆ.

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನ ಕಮಲಾಪುರ ಪಟ್ಟಣದ ಮಾಸಿಲು ಪಾಲಯ್ಯನು ಕಾಮಗೇತಿ ಗೋತ್ರದವನು. ಕಾಮಗೇತನಹಳ್ಳಿ ಸೂರಪ್ಪನಿಗೆ ಇವರು ನಡೆದುಕೊಳ್ಳುತ್ತಾರೆ.

ಮ್ಯಾಸನಾಯಕರ ಧಾರ್ಮಿಕ ವ್ಯವಸ್ಥೆಯಲ್ಲಿ ಉದಿ – ಪದಿಗೆ ಅಗ್ರಸ್ಥಾನವಿದೆ. 'ಉದಿ' ಎಂದರೆ ಸಾಲಿಗ್ರಾಮ, ಲಿಂಗಗಳಿಂದ ಕೂಡಿದ ದೇವರು. ಅದು ಪೆಟ್ಟಿಗೆ ಅಥವಾ ಬಿಲ್ಲು ದೇವರರಾಗಿರುತ್ತದೆ. 'ಪದಿ' ಎಂದರೆ ಗೋವುಗಳು ದೇವರ ಎತ್ತುಗಳು. ಇವುಗಳನ್ನು ದೇವರಿಗೆ ಸಮಾನವಾದವು ಎಂದು ಭಾವಿಸಿ 'ಪದಿ' ಎನ್ನುತ್ತಾರೆ. ಬೋಡಿಪಾಲರ್ಾರು ಸಹಾ ಮಂದಲಾರು ಪಂಗಡದಲ್ಲಿ ಬರುವರು. ಒಟ್ಟಾರೆ, ಕಾಮಗೇತಲಾರು ಬೆಡಗಿಗೆ ಗುರುಸ್ಥಾನ ಕಂಪಳದೇವರ ಹಟ್ಟಿ, ಸಂಸ್ಥಾನ ಮುತ್ತಿಗಾರಹಳ್ಳಿ ಎತ್ತುಗಳು (ಶ್ರೀ ಶೈಲ ಸಿಂಹಾಸನ) ಇರುತ್ತವೆ. ಗುರುಧರ್ಮವಾಗಿ ಉಜ್ಜಿನಿ ಸಿಂಹಾಸನಕ್ಕೆ ನಡೆದುಕೊಳ್ಳುತ್ತಾರೆ.

ಇಂದು ಕಾಮಗೇತಲಾರು ಬೆಡಗಿನಲ್ಲಿ ಅನೇಕರು ನೌಕರಿಯಲ್ಲಿದ್ದಾರೆ. ಉನ್ನತ ಶಿಕ್ಷಣ ಪಡೆದಿದ್ದಾರೆ. ಹಾಗೆಯೇ ಬಡತನ, ನಿರುದ್ಯೋಗ, ಸಾಂಸ್ಕೃತಿಕ ಸಂಘರ್ಷಗಳು ಚಾಲ್ತಿಯಲ್ಲಿವೆ.

[1] ಇತಿಹಾಸ ದರ್ಶನ. ಸಂ.೩., ೧೯೮೮

[2] ಲಕ್ಷ್ಮಣ್ ತೆಲಗಾವಿ : ಎಪ್ಪತ್ತೇಳು ಪಾಳೆಯಗಾರರು. ಪು. ೨೨೭

[3] ೯-೧೦-೨೦೦೫ರಂದು ಸಂದರ್ಶನ : ಎಚ್.ಎ.ವಿಶ್ವನಾಥ, ಎಲ್.ಐ.ಸಿ. ನಾರಾಯಣಸ್ವಾಮಿ ಸಹಕರಿಸಿದ್ದಾರೆ ಅವರಿಗೆ ಕೃತಜ್ಞತೆಗಳು

[4] ಹರತಿಸಿರಿ, ಪು. ೧೨೯೦

[5] ಚಿತ್ರದುರ್ಗದ ಪಾಳಯಗಾರರು, ಪು. ೧೪-೧೫

[6] ವಾಲ್ಮೀಕರ ಪುರಾಣವು, ಪು. ೨೪

[7] ಕಾಮಗೇತಿ-ಅರಸರು-ಕೆಲವು ವಿಚಾರಗಳು: ಪ್ರತಿಕ್ರಿಯೆ, ಪು.೫೧

[8] ವಿಜಯನಗರ ಅಧ್ಯಯನ, ಸಂ.೭, ಪು.೪೬

[9] ಅದೇ, ಪು.೪೯

[10] ಅದೇ, ಪು.೫೦

[11] ಅದೇ, ಪು.೫೨

[12] ವಾಲ್ಮೀಕರ ಪುರಾಣವು ೨೬

[13] ಅದೇ ಪು.೨೫

[14] ರಾಜಾವೀರ ಮದಕರಿನಾಯಕನ ಮುಕ್ತಿಧಾಮ (ಸಮಾಧಿ) ಎಲ್ಲಿದೆ ಎಂಬ ಬಗ್ಗೆ ಚರ್ಚೆ ನಡೆಯುತ್ತಿದ್ದು ಸಂಶೋಧನೆ ಮೂಲಕ ಈ ಸಂಗತಿ ಬೆಳಕಿಗೆ ಬರಬೇಕು. ಶ್ರೀರಂಗಪಟ್ಟಣ ಮತ್ತು ಮದ್ದೂರು ಪಟ್ಟಣಗಳ ನಡುವೆ ಈ ಸ್ಥಳ ಇರಬೇಕೆಂದು ಊಹಿಸಲಾಗುತ್ತದೆ.

[15] ವಾಲ್ಮೀಕರ ಪುರಾಣವು ೨೪-೨೫

[16] ಕಾಮಗೇತಿ ಅರಸರು ಕೆಲವು ವಿಚಾರಗಳು : ಪ್ರತಿಕ್ರಿಯೆ ೫೧

[17] ೯-೧೦-೨೦೦೫ರಂದು ಸಂದರ್ಶನ, ನಾಯಕನಹಟ್ಟಿ

# ೬. ಸಮಾರೋಪ

‘ಕಾಮಗೇತಿ’ ಬೆಡಗಿನ ಚರಿತ್ರೆ ಮತ್ತು ಸಂಸ್ಕೃತಿ ಅತೀ ಪ್ರಾಚೀನವಾದುದು. ಭಾರತದ ಮಟ್ಟಿಗೆ ಅವಲೋಕಿಸುವುದಾದರೆ, ಶಿಲಾಯುಗದಿಂದಲೂ ಇವರು ಬೇಟೆ, ಪಶುಪಾಲನೆಯಲ್ಲಿ ತೊಡಗಿದ್ದು ಜೀವನ ನಿರ್ವಹಣೆ ಮಾಡಿದ ಕುರುಹುಗಳಿವೆ. ನಾಗರಿಕತೆ ಮತ್ತು ಸಂಸ್ಕೃತಿ ವಿಕಾಸಗೊಂಡಂತೆ ಇವರು ಆಯಾ ಭೌಗೋಳಿಕ ಪರಿಸರಕ್ಕೆ ತಕ್ಕಂತೆ ಪರಿವರ್ತನೆಗೊಂಡರು. ಇಂಥ ಪರಿವರ್ತನೆಗೊಂಡ ಕಾಲಕ್ಕೆ ಇವರು ಕ್ಷಾತ್ರತೇಜಸ್ಸಿನಿಂದ ರಾಜ್ಯಾಳ್ವಿಕೆ ನಡೆಸಿದ್ದು ಸ್ಪಷ್ಟ. ‘ಕಾಮಕೇತನ’ ಸಂಸ್ಕೃತದ ಮೂಲ ಧಾತುವಿನಿಂದ ಬಂದಿದೆ. ಹಾಗೆಂದು ಕಾಮಕೇತನವನ್ನು ಕನ್ನಡದಲ್ಲಿ ಹೀಗೆ ವಿಂಗಡಿಸಿ ಪದದ ಅರ್ಥವನ್ನು ನೋಡಬಹುದಾಗಿದೆ. ಕಾಮ ಎಂದರೆ ಬಯಕೆ, ವಿಷಯಾಭಿಲಾಷೆ, ನಾಲ್ಕು ಪುರುಷಾರ್ಥಗಳಲ್ಲಿ ಒಂದು. ಕೇತನ ಎಂದರೆ ಮನೆ, ಬಾವುಟ ಎಂಬರ್ಥಗಳಿವೆ. ಕಾಮಕೇಸರಿ ಕೇದಿಗೆಯ ಪ್ರಭೇದ. ಸಸ್ಯವು ಹೌದು, ಹಾಗಯೇ ಕಾಮಕಸ್ತೂರಿ ತುಳಸಿ ಜಾತಿಗೆ ಸೇರಿದ ಸೂವಾಸನೆಯ ಸಸ್ಯ. ಬುಡಕಟ್ಟು ಜನರು ತಮ್ಮ ಬೆಡಗಿಗೆ ಸಸ್ಯ, ಪ್ರಾಣಿಗಳ ಹೆಸರುಗಳನ್ನು ಇಟ್ಟುಕೊಂಡಿರುವುದು ಗಮನಾರ್ಹ. ಈಗಿನ ದೆಹಲಿ ಸುತ್ತಮುತ್ತ ಹಿಂದೆ ಇಂದ್ರಪ್ರಸ್ತ, ಹಸ್ತಿನಾವತಿ ಆಸುಪಾಸಿನಲ್ಲಿ ಈ ಕಾಮಕೇತನ ಪಂಗಡದವರು ನೆಲಸಿದ್ದರು. ಈ ಬೆಡಗಿನ ಹಿರಣ್ಯಧನು ನಿಷಾಧ ದೇಶದ ದೊರೆಯಾಗಿದ್ದನು. ಇವನ ಮಗನೇ ಲೋಕೈಕ ವೀರ ಏಕಲವ್ಯ. ಹೀಗೆ ಉಜ್ವಲ ಪರಂಪರೆಯಿರುವ ಕಾಮಗೇತಿಗಳಿಗೆ ದಕ್ಷಿಣ ಭಾರತಕ್ಕೆ ಬಂದು ರಾಜ್ಯಾಳ್ವಿಕೆ ನಡೆಸಿದ ಔಚಿತ್ಯವೇನು ಎಂಬ ಬಗ್ಗೆ ನಿಗೂಢಗಳಿವೆ. ಹೋಳಿ ಹಬ್ಬ, ಕಾಮದಹನದ ಸಂದರ್ಭದಲ್ಲಿ ಕಾಮನು ಬೇಡರವನು ಎಂಬ ನಂಬಿಕೆಯಿದೆ. ಆಂಧ್ರಪ್ರದೇಶದಲ್ಲಿ ಅಡವಿಚೆಂಚರು, ಬೋಯಾ ಇತರರಲ್ಲಿ ಕಾಮಗೇತಿ ಬೆಡಗಿನವರು ಕುರುಮಾಮ, ಕೊಂಡಮಾಮರೆಂದು

ಕರೆಸಿಕೊಂಡಿದ್ದಾರೆ. ಕರ್ನಾಟಕದ ಕಾಮಗೇತಿಗಳನ್ನು ಭಾರತೀಯ ಚರಿತ್ರೆ ಮತ್ತು ಸಂಸ್ಕೃತಿಯ ಚೌಕಟ್ಟಿನಲ್ಲಿ ನೋಡಬೇಕು. ರಾಮಾಯಣ, ಮಹಾಭಾರತದಲ್ಲಿ ಇವರ ಬಗ್ಗೆ ಉಲ್ಲೇಖಗಳಿವೆ. 'ಕಾಮ' ಎಂಬುವವನಿಗೆ ಧೈರ್ಯಶಾಲಿ, ಪರಾಕ್ರಮಿ ದಷ್ಟಪುಷ್ಟ ವ್ಯಕ್ತಿಗೆ ಕಾಮನೆಂದು ತೆಲುಗಿನಲ್ಲಿ ಕರೆಯುತ್ತಾರೆ. ಇವರಲ್ಲಿ ಕಾಮಣ್ಣ ಕಾಮಯ್ಯ, ಕಾಮರಾಜ, ಕಾಮನಾಯಕ ಎಂಬ ಹೆಸರುಗಳನ್ನು ಇಟ್ಟುಕೊಂಡಿರುತ್ತಾರೆ. ಎತ್ತರವಾದ ದೇಹ, ದಷ್ಟಪುಷ್ಟ ಮೈಕಟ್ಟು, ದಪ್ಪ ಕೈಕಾಲುಗಳು ಒಟ್ಟಾರೆ ಇತರರಿಗಿಂತ ದೃಢಕಾಯ ವ್ಯಕ್ತಿಗೆ ಕಾಮನಾಡು ಎಂದು ಕರೆಯುವರು. ಈ ಬೆಡಗಿಗೆ ಪುರಾಣ, ಮೌಖಿಕತೆಗಳು ಏನಿವೆಯೋ ತಿಳಿಯದು. ಆದರೆ ಕಾಮನ ಧ್ವಜವನ್ನು ಅಥವಾ ಸ್ಪರ್ಧೆಯಲ್ಲಿ (ಕಾರ್ಮುಕನ) ಬಿಲ್ಲನ್ನು ಗೆದ್ದುದರಿಂದ ಕಾರ್ಮುಕ ಎಂದು ಇವರಿಗೆ ಕರೆದಂತಿದೆ. ಆದರೂ ಕಾಮಕೇತನವು ಒಂದು ಸ್ಥಳದ, ಪ್ರಾಣಿಯ ಮತ್ತು ಸಸ್ಯದ ಹೆಸರಾಗಿರುವ ಸಾಧ್ಯತೆಯೂ ಇದೆ. ಜನರು ಉಚ್ಚಾರಿಸುವಾಗ ಕಾಮಗೇತನ ಹೋಗಿ ಕಾಮಗೇತನವಾಗಿದೆ. ಬೇಡ ನಾಯಕರಲ್ಲಿ ಕಾಮಗೇತಲಾರು, ಕಾಮಗೇತವಾಡು, ಕಾಮಗೇತ್ಲಾರು, ಕಾಮಗೇತಿ ಎಂದೆಲ್ಲ ಕರೆಯಲಾಗುವುದು. ಬೇಡರು ಪಶುಪಾಲನೆಯಲ್ಲು ಬೀಜದ ಹೋರಿಗಳನ್ನು ಸಾಕಿ ಪಶುಗಳ ಸಂತಾನಭಿವೃದ್ಧಿಗೊಳಿಸುತ್ತಿದ್ದವರಿಗೆ ತೆಲುಗಿನಲ್ಲಿ ಕಾಮಗೇತಲಾರು ಎಂದು ಕರೆದಿರುತ್ತಾರೆಂಬ ವಾದವಿದೆ. ಈ ಎಲ್ಲಾ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಕಾಮಗೇತಲಾರು ನಗರ, ಪಟ್ಟಣಗಳಲ್ಲಿ ನೆಲೆಸಿದ್ದು ಬುಡಕಟ್ಟು ಸಂಸ್ಕೃತಿಯಿಂದ ದೂರವಾಗುತ್ತಿದ್ದಾರೆ.

ಮ್ಯಾಸನಾಯಕರ ಮೂರು ಕಟ್ಟೆಮನೆಗಳೆಂದರೆ : ನನ್ನಿವಾಳ, ಗೋನೂರು ಮತ್ತು ನಾಯಕನಹಟ್ಟಿ. ಈ ಮೂರಕ್ಕೆ ೩ ಜನ ನಾಯಕರನ್ನೂ ನೇಮಿಸಿರುತ್ತಾರೆ. ನಾಯಕನಹಟ್ಟಿ ಕಟ್ಟೆಮನೆಯಲ್ಲಿ ಪೂಜಾರಿಕೆಯನ್ನು ಕಾಮಗೇತಿಯವರಿಗೆ ಕೊಟ್ಟಿರುವುದು ಮೊದಲ ಪ್ರಾಶಸ್ತ್ಯವೇ ಸರಿ. ಕಾಮಗೇತಲಾರು, ಮಂದಲಾರು ಪಂಗಡಕ್ಕೆ ಹಾಗೂ ಚಂದ್ರವಂಶಕ್ಕೆ ಕೆಲವೊಮ್ಮೆ ಕಾಮಗೇತಿ ವಂಶ ಎಂದು ಹೇಳಲಾಗಿದೆ. ಇವರಲ್ಲಿ ಅಣ್ಣ ತಮ್ಮಂದಿರು ಕುಟುಂಬಗಳು ಬೆಳೆದಂತೆ ನೆಂಟಸ್ತನ ಬೆಳೆಸುವುದು ಕಷ್ಟವಾಯಿತು. ಹಾಗಾಗಿ ಮಂದೆಯಲ್ಲಿ ಮರುಮಂದೆಯನ್ನು ಹಾಕಿ ಅಣ್ಣ – ತಮ್ಮಂದಿರಲ್ಲಿ ಕೆಲವರನ್ನು ನೆಂಟರನ್ನಾಗಿ ಮಾಡಿಕೊಂಡು ಹೆಣ್ಣು ತರುವ, ಕೊಡುವ ಹೊಸ ಸಂಪ್ರದಾಯ ಬೆಳೆಯಿತು. ಈ ಒಂದು ಸಂಪ್ರದಾಯಕ್ಕೆ ಎರಡು ಕಟ್ಟೆಮನೆಗಳನ್ನು ಕಾಮಗೇತಲಾರು ಮ್ಯಾಸನಾಯಕರಿಂದ ಪ್ರತ್ಯೇಕತೆ ಎಂದು ಗುರುತಿಸಿಕೊಂಡರೂ ಎಲ್ಲಾ ವಿಧದಿಂದಲೂ ಅವು ಹೋಲುತ್ತವೆ. ಆಚಾರದ ಕಟ್ಟೆಮನೆಯಾಗಿ ಕಾಮಗೇತನಹಳ್ಳಿ, ವಿಚಾರದ ಕಟ್ಟೆಮನೆಯಾಗಿ ಕಾಟಪ್ಪನಹಟ್ಟಿಗಳನ್ನು ನಿರ್ಮಾಣ ಮಾಡಿದರು. ನಲಗೇತಲಾರು ಚನ್ನಕೇಶವನನ್ನು ಆರಾಧಿಸುತ್ತಾರೆ. ಹಾಗೆಯೇ ರುದ್ರಮ್ಮನಹಳ್ಳಿ ನಲುಜೆರುವಯ್ಯ, ಉಡೇಗೋಳದ ತಾಳಿಕೆರೆಭಾಗದ ಚಿತ್ರದೇವರು, ರಾಯಪುರದ ಮ್ಯಾಸರಹಟ್ಟಿಯ ಪದಿನಾರು ದೇವರುಗಳನ್ನು ಕಾಮಗೇತಲಾರು ಬೆಡಗಿನವರು ಆರಾಧಿಸುವವರು.[1]

ಕಾಮಗೇತಲಾರು ಚರಿತ್ರೆ ಕೇವಲ ಬುಡಕಟ್ಟು ಸಂಸ್ಕೃತಿಗಷ್ಟೇ ಮೀಸಲಾಗಿಲ್ಲ, ರಾಜಕೀಯ ಕ್ಷೇತ್ರದಲ್ಲಿಯೂ ಇವರನ್ನು ಗುರುತಿಸಬಹುದಾಗಿದೆ. ದಕ್ಷಿಣಭಾರತದ ಅತೀಖ್ಯಾತ ಪಡೆದ ಪಾಳೆಯಗಾರರ ಪೈಕಿ ಚಿತ್ರದುರ್ಗದ ಕಾಮಗೇತನಾಯಕರು ಎರಡುವರೆ ಶತಮಾನಗಳ ಕಾಲ ರಾಜ್ಯಾಳ್ವಿಕೆ ನಡೆಸಿರುವುದು ಅವಿಸ್ಮರಣೀಯ. ಸುಮಾರು ೧೨ ರಿಂದ ೧೫ ಜನ ಅರಸರು ಆಳ್ವಿಕೆ ಮಾಡಿದ್ದಾರೆ. ಅಭೇದ್ಯವಾದ ಕೋಟೆ, ಕೊತ್ತಲು, ಬುರುಜು ಬತೇರಿಗಳಲ್ಲದೆ, ಅರಮನೆ, ದೇವಾಲಯ, ಮಹಾದ್ವಾರಗಳು, ಕೆರೆ – ಕಟ್ಟೆಗಳನ್ನು ಕಟ್ಟಿಸಿ ಇಂದಿಗೂ ತಮ್ಮ ಸಾಧನೆಯ ಕುರುಹುಗಳನ್ನು ಬಿಟ್ಟುಹೋಗಿರುವರು. ಇವರಂತೆ ಮೊಳಕಾಲ್ಮೂರು ಪಾಳೆಯಗಾರರು ಸಹಾ ಕಾಮಗೇತಿ ವಂಶಕ್ಕೆ ಸೇರಿದವರು, ಮೂರು ಶತಮಾನಗಳಿಗೂ ಹೆಚ್ಚು ಕಾಲ ಸುಮಾರು ಇಪ್ಪತ್ತುಕ್ಕೂ ಹೆಚ್ಚು ನಾಯಕ ಅರಸರು ವೈಭವದಿಂದ ಆಳ್ವಿಕೆ ನಡೆಸಿದ್ದಾರೆ. ಆಧುನಿಕ ಕಾಲಘಟ್ಟದಲ್ಲಿ ಕಾಮಗೇತಿಗಳು ಜೀವನ ಮೌಲ್ಯಗಳನ್ನು ಸುಧಾರಿಸಿಕೊಂಡಿದ್ದಾರೆ. ದಿವಂಗತ ಹೋ.ಚಿ. ಬೋರಯ್ಯ, ೧೪ ಜನವರಿ ೨೦೦೪ರಲ್ಲಿ ನಿಧನರಾದ ಟಿ.ಎನ್. ಗಂಡುಗಲಿ, ಕರಿಯಪ್ಪ ಮೇಷ್ಟ್ರು; ಚಳ್ಳಕೆರೆಯ ವೀರಭದ್ರನಾಯಕ, ಪರಶುರಾಮನಾಯಕ, ಮೊಳಕಾಲ್ಮೂರಿನ ಕೇಶವಮೂರ್ತಿ, ಬೊಮ್ಮಲಿಂಗನಹಳ್ಳಿಯ ನಂಜಪ್ಪನಾಯಕ, ಭರ್ಮಸ್ವಾಮಿ ಮೊದಲಾದವರು ತಮ್ಮ ಗತಕಾಲದ ರಾಜಕೀಯ ಸಂಗತಿಗಳನ್ನು ಮೆಲುಕುಹಾಕುತ್ತಾ ವಿಷಾದ ವ್ಯಕ್ತಪಡಿಸುತ್ತಾರೆ. ಇಂದಿಗೂ ಮೊಳಕಾಲ್ಮೂರು ತಾಲೂಕಿನ ಯರ್ಜೇನಹಳ್ಳಿಯಲ್ಲಿ ೫೦ಕ್ಕೂ ಹೆಚ್ಚು ಕಾಮಗೇತಿ ವಂಶಸ್ಥರ ಮನೆಗಳಿವೆ. ಜಗಳೂರು ತಾಲೂಕಿನ ಕಣಕುಪ್ಪೆ, ಆಸಗೋಡುಕ, ಬಿಳಿಚೋಡು, ತಿಮ್ಮಲಾಪುರ

ಮೊದಲಾದ ಸ್ಥಳಗಳಲ್ಲಿ ಈ ಕಾಮಗೇತಿ ಬೆಡಗಿನವರ ಕುಟುಂಬಗಳು ಆರ್ಥಿಕ, ರಾಜಕೀಯ, ಸಾಮಾಜಿಕ, ಶೈಕ್ಷಣಿಕವಾಗಿ ಸುಧಾರಣೆಗೊಂಡ ಉದಾಹರಣೆಗಳಿವೆ. ಹಾಗೆಯೇ ಬಡತನದಿಂದ ಕೂಲಿ, ಕಾರ್ಮಿಕರಾಗಿ ವಲಸೆ ಹೋಗಿ ಬೇರೆ ಬೇರೆ ನಗರ, ಪಟ್ಟಣಗಳಲ್ಲಿ ದುಡಿಯುವವರು ಇದ್ದಾರೆ. ಕಾಮಗೇತಿ ವಂಶದ ಮಹಿಳೆಯರು ಸಹಾ ಅಷ್ಟೇ ಧೈರ್ಯಶಾಲಿಗಳು. ಸಾಂಸ್ಕೃತಿಕವಾಗಿ ಸಮಾಜ ಮತ್ತು ಕುಟುಂಬದ ಮೇಲೆ ಸಾಕಷ್ಟು ಪ್ರಭಾವ ಬೀರಿದ ನಾಗತಿಯರು ಕಾಮಗೇತಿ ಬೆಡಗಿನಲ್ಲಿ ಕಾಣಬಹುದಾಗಿದೆ. ವೀರವ್ವನಾಗತಿ, ಓಬವ್ವನಾಗತಿ, ಕೆಂಪವ್ವನಾಗತಿ ಮೊದಲಾದವರನ್ನು ಇಲ್ಲಿ ಸ್ಮರಿಸಬಹುದು. ಕಾಮಗೇತಿ ಬೆಡಗಿನಲ್ಲಿ ರಾಜ್ಯಾಳ್ವಿಕೆ ಮಾಡಿದವರಿಗೆ ಕ್ಷತ್ರಿಯಸ್ಥಾನಮಾನವಿದ್ದು ಇತರರಿಗಿಂತ ಇವರು ಉನ್ನತ ಸ್ಥಾನದಲ್ಲಿದ್ದಾರೆ. ಸಾಮಾನ್ಯ ಜನರು, ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ವಿದ್ಯಾವಂತರು, ಅವಿದ್ಯಾವಂತರೂ ನೌಕರರು ತಮ್ಮ ವಂಶದ ಕುಲದ, ಆಚಾರ – ವಿಚಾರಗಳನ್ನು ಪುನರುಜ್ಜೀನವಗೊಳಿಸುತ್ತಿದ್ದಾರೆ. ಹಾಗೆಯೇ ಇವರ ದೇವಾಲಯ ಗುಡಿ, ಗೋಪುರಗಳನ್ನು ಜೀರ್ಣೋದ್ಧಾರ ಮಾಡಿಸಲಾಗುತ್ತಿದೆ. ಸಮೂಹ ಮಾಧ್ಯಮವು ಇದನ್ನು ಪ್ರಚಾರಕ್ಕೆ ತರದೆ ಚರಿತ್ರೆಗೆ ನಾಂದಿಯಾಯಿತು.

ಕರ್ನಾಟಕದಲ್ಲಿ ನೆಲೆಸಿರುವ ನಾಯಕ, ಬೇಡ, ವಾಲ್ಮೀಕಿ, ತಳವಾರರು ಆಯಾ ಪ್ರಾದೇಶಿಕತೆಗೆ ತಕ್ಕಂತೆ ಹೆಸರಿಟ್ಟುಕೊಂಡು ವಿವಿಧ ವೃತ್ತಿಗಳಲ್ಲಿ ಜೀವಿಸುತ್ತಾರೆ. ರಾಜ್ಯದ ಎಲ್ಲ ಪ್ರಾಂತ್ಯಗಳಲ್ಲೂ ಏಕಪ್ರಕಾರವಾಗಿಲ್ಲ. ಮತ್ತು ಇವರ ವ್ಯಾಪ್ತಿ ಮಧ್ಯಕರ್ನಾಟಕಕ್ಕೆ ಹೆಚ್ಚು ಸೀಮಿತವಾಗಿದೆ. ಇಂದು ಕೃಷಿ, ಕೂಲಿಯಿಂದ ಕೆಲವರು ಜೀವಿಸಿದರೆ, ಇನ್ನು ಕೆಲವರು ವ್ಯಾಪಾರ, ಉದ್ಯೋಗದಲ್ಲಿ ತೊಡಗಿದ್ದಾರೆ. ಇವರಲ್ಲಿ ಲೋಕಜ್ಞಾನ ಹೊಂದಿರುವವರೇ ಹೆಚ್ಚು. ಸಾಕ್ಷರತೆಯಲ್ಲಿ ಇವರು ಶೇ. ೫೦ ರಷ್ಟು ಸಾಧಿಸಿರುವರೆಂದು ಅಂದಾಜಿಸಲಾಗಿದೆ. ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯಲ್ಲಿನ ಕಾಮಗೇತಲಾರು ದೇಶದ ವಿವಿಧೆಡೆ ವಿದ್ಯಾಭ್ಯಾಸ, ಉದ್ಯೋಗ, ವ್ಯಾಪಾರ ಇತರ ನಾನಾ ವೃತ್ತಿ ಮತ್ತು ಕಸುಬುಗಳಲ್ಲಿ ತೊಡಗಿದ್ದಾರೆ. ಇವರಲ್ಲಿ ಸಂಗೀತ, ನಾಟಕ, ಜನಪದ ಕ್ರೀಡೆ, ಯಕ್ಷಗಾನ, ಬಯಲಾಟ, ಕೋಲಾಟ, ಕಬ್ಬಡ್ಡಿ, ಚೆನ್ನಿದಂಡ ಇತರ ಹವ್ಯಾಸಗಳಿವೆ. ಈ ಮಹಿಳೆಯರಲ್ಲಿ ಕೆಲವರು ಇತ್ತೀಚೆಗೆ ಶಿಕ್ಷಣದಲ್ಲಿ ಗಣನೀಯ ಸಾಧನೆ ಮಾಡಿರುವುದು ಶ್ಲಾಘನೀಯ. ಗ್ರಾಮೀಣ ಭಾಗದಲ್ಲಿ ಕೆಲವು ಮಕ್ಕಳು ಶಾಲೆಗೆ ಹೋಗದೆ ಕುರಿ ಮತ್ತು ದನ ಮೇಯಿಸಲು ಹೋಗುವುದು ವಿಪರ್ಯಾಸ. ಇವರಲ್ಲಿ ಪೂರ್ವಜರ ಮಾತು ಮುಖ್ಯ ಮತ್ತು ಅಂತಿಮ ತೀರ್ಮಾನ. ಅವಿಭಕ್ತ ಕುಟುಂಬಗಳೇ ಹೆಚ್ಚು. ಮದುವೆ, ಮರಣ, ನಾಮಕರಣ ಶಾಸ್ತ್ರಗಳಲ್ಲಿ ಮಾಡುವ ಸಾಂಪ್ರದಾಯಿಕ ಆಚರಣೆಗಳಿಗೆ, ಹಬ್ಬ ಹರಿದಿನಗಳಲ್ಲಿ ದೇವರಿಗೆ ಮಾಡುವ ಆಚರಣೆಗಳಿಗೂ ವ್ಯತ್ಯಾಸವಿದೆ. ಎಂಥ ಬಡವರಾದರು ಊರೊಟ್ಟಿನ ಹಬ್ಬದಲ್ಲಿ ಬೇಟೆ ಕಡಿಯುವುದು, ಸಿಹಿಮಾಡುವುದು ಸಾಮಾನ್ಯ. ಇವರಲ್ಲಿ ಒಗ್ಗಟ್ಟು ಇದೆ ಎಂದು ಒತ್ತಿ ಹೇಳುವಂತಿಲ್ಲ. ಅವಕಾಶ ಬಂದಂತೆ ಒಂದಾಗುತ್ತಾರೆ. ಕಾಮಗೇತಿಗಳಲ್ಲಿ ಹೆಚ್ಚಿನ ಜನ ಕುಡಿತಕ್ಕೆ ದಾಸ್ಯರಾಗಿಲ್ಲ. ಹೆಣ್ಣು – ಗಂಡು ಮಕ್ಕಳು ಸಮನಾಗಿ ಎಲೆ – ಅಡಿಕೆ ಹಾಕಿಕೊಳ್ಳುತ್ತಾರೆ. ಎಷ್ಟೋ ಬಾರಿ ಎಲೆ – ಅಡಿಕೆ ನೆಪದಲ್ಲಿ ಹೆಣ್ಣು – ಗಂಡುಗಳು ಒಂದಾಗುತ್ತಾರೆ. ನಗರಗಳಲ್ಲಿರುವವರು ತಮ್ಮ ಬುಡಕಟ್ಟು, ಧರ್ಮ, ಸಂಸ್ಕೃತಿಗೆ ತಿಲಾಂಜಲಿ ಇಟ್ಟಿದ್ದಾರೆ. ಉನ್ನತಾಧಿಕಾರಿಗಳಾಗಿರುವವರಲ್ಲಿ ಹೆಚ್ಚಿನವರು ಗ್ರಾಮೀನ ಪ್ರದೇಶದವರೇ. ಕಾಮಗೇತಿಯವರು ಇತರರೊಂದಿಗೂ ಸಹಬಾಳ್ವೆಯಿಂದ ಇರುತ್ತಾರೆ. ಗದ್ದಲ, ಗಲಾಟೆ ನಡೆದಾಗ ನಾವು ಮದಕರಿನಾಯಕ ವಂಶದವರು, ಪಾಳೆಯಗಾರರೆಂದು ಬಿಂಕದ ಮಾತಾಡುತ್ತಾರೆ. ಹಳ್ಳಿಗಳಲ್ಲಿ ಇವರ ಚಟುವಟಿಕೆ ಕಂಡ ಜನ 'ಕಾಮಗೇತಿ ಭೂಪ ಜಾಕೊಂದು ರೂಪ' ಎಂದು ಹಾಸ್ಯ ಮಾಡುವರು. ಬಹುತೇಕ ಗ್ರಾಮಗಳಲ್ಲಿ ಕಾಮಗೇತಿಗಳಿಗೆ ಮಳೆಲಾರು, ಬುಟ್ಟುಗಲಾರು ನೆಂಟರಾಗಬೇಕು. ಗುಂಡೇತಲಾರು ಬೆಡಗಿನವರು ಕಾಮಗೇತಲಾರಿಗೆ ಅಣ್ಣ – ತಮ್ಮಂದಿರಾಗಬೇಕು.[2]

ಚಿತ್ರದುರ್ಗ, ಬಳ್ಳಾರಿ, ದಾವಣಗೆರೆ ಜಿಲ್ಲೆಗಳಲ್ಲಿರುವ ಕಾಮಗೇತಿಯರು ವಿಭಿನ್ನವಾದ ಜೀವನ ಶೈಲಿಯನ್ನು ರೂಢಿಸಿಕೊಂಡಿರುವರು. ಸೂರಲಿಂಗಪ್ಪ ತಂದೆ ಮೂಕಸೂರಯ್ಯ (೨೬) ಕಾಮಗೇತಲಾರು, ತುಮಕೂರ್ಲಹಳ್ಳಿ ಗ್ರಾಮದವರು. ಇವರ ತಾಯಿ ಸಿದ್ದಮ್ಮನವರು ಪಟ್ಟಪೊಲ್ಲಾರು ಬೆಡಗಿನವರು. ಈತ ಮದುವೆ ಆಗಿರುವುದು ಮೊಳಕಾಲ್ಮೂರು ತಾಲೂಕಿನ ಕೊಮ್ಮನಪಟ್ಟಿ ಗ್ರಾಮದ ಬುಟಗಲಾರು (ಬೆಡಗು) ಮನೆತನದಲ್ಲಿ, ಇವರು ಕೃಷಿ, ಕೂಲಿ ಮಾಡುತ್ತಾರೆ. ಮನೆದೇವರು ಸೂರಲಿಂಗೇಶ್ವರ ಕಾಮಗೇತನಹಳ್ಳಿ, ಶಿವನೆಂದು ಈ ದೇವರನ್ನು ಭಾವಿಸಿರುವರು. ಮೊದಲು ಕಂಪಳದೇವರಹಟ್ಟಿಯ ಕಂಪಳದೇವರಿಗೆ ನಡೆದುಕೊಳ್ಳುತ್ತಿದ್ದರು. ಈಗ ಕಾಮಗೇತನಹಳ್ಳಿಗೆ ಬಂದು

ನಡೆದುಕೊಳ್ಳುತ್ತಾರೆ. ಕಾಮಗೇತನಹಳ್ಳಿಯಲ್ಲಿ ಹಬ್ಬವನ್ನು ಶಿವರಾತ್ರಿ ದಿನ ಆಚರಿಸುತ್ತಾರೆ. ನಂತರ ಹೋಳಿಗೆ ಹುಣ್ಣಿಮೆ, ಗುಗ್ಗರಿಹಬ್ಬಗಳನ್ನು ಮಾಡವರು. ಇಂದಿಗೂ ಇವರ ಮನೆಯಲ್ಲಿ ಸುರೇಶ, ಸೂರಪ್ಪ, ಸೂರಿ, ಸೂರಯ್ಯ, ಸೂರಣ್ಣ, ಸೂರಮ್ಮ, ಸೂರಕ್ಕ ಇತರ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ. ಮ್ಯಾಸಮಂಡಲದಲ್ಲಿನ ಸಾಂಸ್ಕೃತಿಕ ಪದ್ಧತಿ, ಆಚರಣೆಗಳನ್ನು ಇವರು ಇಂದಿಗೂ ಉಳಿಸಿಕೊಂಡು ಬಂದಿರುತ್ತಾರೆ. ಊರು ಮಾರಮ್ಮ ಹಬ್ಬವನ್ನು ಮಾಡುವಾಗ, ದೇವರನ್ನು ಗಂಗೆಗೆ ತೆಗೆದುಕೊಂಡು ಹೋಗುವಾಗ ದೇವರಿಗೆ (ಬಲಿಕೊಡುವ) ನಿವಾಳಿ ಕೊಯ್ಯುವುದು ಕಾಮಗೇತಲಾರು ಗಾದರಿಪಾಲನಾಯಕ ದೇವರು ಬಂದಾಗ ಮಣೆವು ಹಿಡಿಯುವ ಜವಾಬ್ದಾರಿ ಇವರದು. ತುಮಕೂರ್ಲ ಹಳ್ಳಿ ಗ್ರಾಮವೊಂದರಲ್ಲಿಯೇ ಕಾಮಗೇತಲಾರವು ಸುಮಾರು ೫೦ ಮನೆಗಳಿವೆ (೩೦.೧೦.೨೦೦೫). ಹೀಗೆ ಕರ್ನಾಟಕದ ನಾಯಕ ಬುಡಕಟ್ಟಿನ ಒಂದು ಬೆಡಗು ಚರಿತ್ರೆ ಮತ್ತು ಸಂಸ್ಕೃತಿಯಲ್ಲಿ ತನ್ನ ಹೆಗ್ಗುರುತುಗಳನ್ನು ಬಿಟ್ಟಿರುವುದು ಗಮನಾರ್ಹ. ತನ್ನ ಅನನ್ಯತೆಯನ್ನು ಸರ್ವಕಾಲಕ್ಕೂ ಸಂದೇಶ ನೀಡುವುದರ ಮೂಲಕ ಸ್ಮರಣೀಯವಾಗಿ ಈ ಕಾಮಗೇತಲಾರು ಬೆಡಗು.

[1] ಪೂಜಾರಿ ಚೆನ್ನಪ್ಪ ತಂದೆ ಬೋರಯ್ಯ, ೮೦, ಗುವನಾಡು, ಪಾಪೆದೇವರ ಪೂಜಾರಿ, ಕಲ್ಲೆದೇವರಪುರ, ಜಗಳೂರು-ತಾ|| ದಾವಣಗೆರೆ-ಜಿಲ್ಲೆ (೬-೧೦-೨೦೦೫ ಕುದಾಪುರ)

[2] ಕಾಮಗೇತನಹಳ್ಳಿ ಸೂರಪ್ಪನಾಯಕನ ಮಗ ಎಸ್. ಕಾಮಗೇತಿ, ತಿಮಲಾಪುರದ ಹೇಮಣ್ಣ, ಪೂಜಾರಿ ಪಾಲಯ್ಯ ಚನ್ನಬಸಯ್ಯನಹಟ್ಟಿ ಮೊದಲಾದವರು ಸಹಕರಿಸಿದ್ದಾರೆ.

***